The Canarese Almanac 1876.

ಕಂನಡ

ಪಂಚಾಂಗಪತ್ರ.

☞ ಕ್ರಿಸ್ತಶಕ ೧೮೭೬. ☜

ಹಿಂದು:

ಶಾಲಿವಾಹನ ಶಕ ೧೭೯೭—೧೭೯೮.

ಯುವ ಸಂವತ್ಸರದ ಅಂತ್ಯ, ಧಾತು ಸಂವತ್ಸರದ ಆದಿ.

ವಿಕ್ರಮಾದಿತ್ಯನ ಶಕ ೧೯೩೨—೧೯೩೩.

ಕೊಲ್ಲಂ ೧೦೫೧—೧೦೫೨.

ಮಹಮ್ಮದಿ:

ಹಿಜರಿ ೧೨೯೨—೧೨೯೩.

ಫಸಲಿ ೧೨೮೫—೧೨೮೬.

MANGALORE

PRINTED BY STOLZ & HIRNER, BASEL MISSION PRESS.

ಸೀಸಂ.

ಶ್ರೀಮದಮಲಾತ್ಮ, ನೃಸ್ತೋಮಪತಿ, ದಿವರಾಜ, ನಾಮಾಧಿನಾಮ
ಧರ, ನೀತಿಪಾಲ!
ಕೋಮಲಕೃಪಾಮಯ, ಪ್ರೇಮಾರ್ಥದಾತಾರ, ಸಾಮಕೃತ್,
ಕ್ಷೇಮಕೃತ್, ಸೌಮ್ಯವಾಕ್ಯ!
ಶೋಧನಾತೀತಮಹಿಮಾಧಾಮ, ಭಯಶಮನ, ಸಾಧುಜನವಾತ್ಸಲ್ಯ, ಶೋಕ
ನಾಶ!
ಬಾಧಾವಿಮೋಚಕ, ವಿರೋಧಹರ, ಶುಭವರದ, ಬೋಧಸಾಧನಮೂಲ, ಬು
ದ್ಧಿದಾತ! || 1 ||

ಪರಿವರ್ಧಿನಿಷಟ್ಪದಿ.

ನಿನ್ನಯೆ ಪಾದದ ಚೆಲ್ವಹ ಕಮಲವ
ನೆನ್ನಯೆ ಹೃದಯದೊಳಿರಿಸೀ ವರ್ಷವ
ನುನ್ನತಹರ್ಷದಿನಾನ್ ತೊಡಗಲ್ಕೆನಗೀಯ್ ನಿರ್ಭೀತಿಯನೂ! |
ನಿನ್ನಯೆ ಪೆಸರಿನ ತೇಜಂ ಮಾಣದೆ
ಚನ್ನಿಗತನದಿಂ ಬೆಳಗುತ್ತಿರ್ದೊಡೆ
ಬನ್ನಂಬಡುವುದು ಮನಮಂ ಕವಿಯುವ ತಾಮಸಮೇಘವದೂ.
|| 2 ||

ಭೋಗಷಟ್ಪದಿ.

ಕೇಳೊ ದೇವ ಬೇಳ್ಪ ಶಿಶುವ!
ತಾಳೊ ಕೃಪೆಯನಿಲ್ಲದಾಗೆ
ಬಾಳನೆಂತು ಬಾಳ್ವದೆಂತು ಸೊಗವ ಪಡೆವುದೂ? |
ನಾಳೆ ನಾಡದೆಂದುಮೆಲ್ಲ
ಕಾಳಮಾಸದಿವಸಗಳಿಗೆ
ಗೇಳೊ ನಿನ್ನ ದೀನಶಿಶುವ ಪಾಳಿಸುವದಕೇ! || 3 ||

ಭಾಮಿನಿಷಟ್ಪದಿ.

ಹೋದರೇನದು? ಬಂದರೇನ್? ನೀಂ
ಕಾದು ಕೊಂಡರೆ ನಿನ್ನ ಬಾಳಂ
ಮೋದವೆತ್ತಿಹನವಗೆ ನಿನ್ನಯೆ ಚಿತ್ತಮೊಪ್ಪುವುದೂ. |
ಹಾದಿಯಂತಂ ಬರುತೆ ಬರ್ಕುಮ
ದಾದ ಬಳಿಕಲೆ ಹಾದಿಗಾರನ
ಪಾದದಾಯುಸಮಾರುಗುಂ ಕ್ರಿಸ್ತೊಡೆಯನೈಕ್ಯದೊಳೂ. || 4 ||

JANUARY.

31 DAYS.

○ ಪುಷ್ಯ ಪೂರ್ಣಿಮೆ,
೧೧ ಜನವರಿ.



ಜನವರಿ.

೩೧ ದಿವಸಗಳು.

● ಪುಷ್ಯ ಅಮಾವಾಸೆ,
೨೬ ಜನವರಿ.


ಯೇಸು ನಿಂತು ಕೂಗಿದ್ದೇನಂದರೆ, ಯಾರಾದರೂ ದಾಹಗೊಂಡರೆ,
ನನ್ನ ಬಳಿಗೆ ಬಂದು ಕುಡಿಯಲಿ. ಯೋಹಾ. ೭, ೩೭.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ಮಾಸ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ	ದಿನ	ಮಾಸ	ದಿನ
1	S	೧	ಶ	ಪುಷ್ಯ ಶು.	೫	೫೯III	ಧ.	೩I	(ಧನುಃ.) ಪುಷ್ಯ.	೧೮		೩
2	SUN	೨	ಆ		೬	೫೯II	ಶ.	೪		೧೯		೪
3	M	೩	ಚ		೭	೫೪III	ಪೂ.	೩III		೨೦		೫
4	Tu	೪	ಮ		೮	೪೯II	ಉ.	೧II		೨೧		೬
5	W	೫	ಬು		೯	೪೫II	ಅ.	೫೭I		೨೨		೭
6	Th	೬	ಗು		೧೦	೪೦III	ಭ.	೫೩III		೨೩		೮
7	F	೭	ಶು		೧೧	೩೬III	ಕೃ.	೫೦		೨೪		೯
8	S	೮	ಶ		೧೨	೩೦II	ರೋ.	೪೬II		೨೫		೧೦
9	SUN	೯	ಆ		೧೩	೨೪III	ಮೃ.	೪೧I		೨೬		೧೧
10	M	೧೦	ಚ		೧೪	೧೯I	ಆ.	೩೭II		೨೭		೧೨
11	Tu	೧೧	ಮ		○	೧೩III	ಪು.	೩೪II		೨೮		೧೩
12	W	೧೨	ಬು	ಪುಷ್ಯ ಬ.	೧	೮I	ಪು.	೩೦III		೨೯		೧೪
13	Th	೧೩	ಗು		೨	೩II	ಆ.	೨೮II	(ಮಕರ.) ಮಾಘ.	೧	[illegible]	೧೫
14	F	೧೪	ಶು		೪	೫೭I	ಮ.	೨೬I		೨		೧೬
15	S	೧೫	ಶ		೫	೫೫	ಪು.	೨೫III		೩		೧೭
16	SUN	೧೬	ಆ		೬	೫೪II	ಉ.	೨೬I		೪		೧೮
17	M	೧೭	ಚ		೭	೫೫II	ಹ.	೨೭II		೫		೧೯
18	Tu	೧೮	ಮ		೮	೫೭II	ಚಿ.	೩೦III		೬		೨೦
19	W	೧೯	ಬು		೯	೬೦	ಸ್ವಾ.	೩೪II		೭		೨೧
20	Th	೨೦	ಗು		೯	III	ವಿ.	೩೯II		೮		೨೨
21	F	೨೧	ಶು		೧೦	೪III	ಅ.	೪೫II		೯		೨೩
22	S	೨೨	ಶ		೧೧	೯III	ಜ್ಯೇ.	೫೧II		೧೦		೨೪
23	SUN	೨೩	ಆ		೧೨	೧೫II	ಮೂ.	೫೮II		೧೧		೨೫
24	M	೨೪	ಚ		೧೩	೨೦I	ಪೂ.	೬೦		೧೨		೨೬
25	Tu	೨೫	ಮ		೧೪	೨೫II	ಪೂ.	೪II		೧೩		೨೭
26	W	೨೬	ಬು		●	೨೯II	ಉ.	೯III		೧೪		೨೮
27	Th	೨೭	ಗು	ಮಾಘ ಶು.	೧	೩೨I	ಶ್ರ.	೧೪II		೧೫		೨೯
28	F	೨೮	ಶು		೨	೩೪I	ಧ.	೧೭III		೧೬		೩೦
29	S	೨೯	ಶ		೩	೩೪II	ಶ.	೧೯III		೧೭	[illegible]	೧
30	SUN	೩೦	ಆ		೪	೩೩II	ಪೂ.	೨೦III		೧೮		೨
31	M	೩೧	ಚ		೫	೩೧III	ಉ.	೨೦III		೧೯		೩

FEBRUARY.

29 DAYS.

🌕 ಮಾಘ ಪೂರ್ಣಿಮಿ, ೯ ಫೆಬ್ರುವರಿ.



ಫೆಬ್ರವರಿ.

೨೯ ದಿವಸಗಳು.

🌑 ಮಾಘ ಅಮಾವಾಸೆ, ೨೫ ಫೆಬ್ರುವರಿ.


ಕೃಪೆಯಿಂದಲೇ, ವಿಶ್ವಾಸದ ಮೂಲವಾಗಿ, ರಕ್ಷಿಸಲ್ಪಟ್ಟಿದ್ದೀರಿ; ಅದು ನಿಮ್ಮಿಂದಲ್ಲ, ದೇವರ ವರವೇ. ಎಫೆ. ೨, ೮.

ಇಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಿಂಗಳು	ತಾರೀಖು	ತಿಂಗಳು	ತಾರೀಖು
1	TU	೧	ಮ	ಮಾಘ ಶುದ್ಧ.	೬	೨೮॥	ರೇ.	೧೯॥	(ತೈ.) ಮಕರ.	೨೦	ಶಾಬಾನ.	೪
2	W	೨	ಬು		೭	೨೪॥	ಅ.	೧೭।		೨೧		೫
3	TH	೩	ಗು		೮	೧೯।।।	ಭ.	೧೪।		೨೨		೬
4	F	೪	ಶು		೯	೧೪॥	ಕೃ.	೧೦॥		೨೩		೭
5	S	೫	ಶ		೧೦	೮।।।	ರೋ.	೬॥		೨೪		೮
6	SUN	೬	ಆ		೧೧	೨।।।	ಮೃ.	೨॥		೨೫		೯
7	M	೭	ಚ		೧೩	೫೧॥	ಪು.	೫೪॥		೨೬		೧೦
8	TU	೮	ಮ		೧೪	೪೬।	ಪು.	೫೦।।।		೨೭		೧೧
9	W	೯	ಬು		🌕	೪೧॥	ಆ.	೪೮।		೨೮		೧೨
10	TH	೧೦	ಗು	ಮಾಘ ಬಹುಳ.	೧	೩೭।।।	ಮ.	೪೬।		೨೯		೧೩
11	F	೧೧	ಶು		೨	೩೫॥	ಪು.	೪೫।		೩೦		೧೪
12	S	೧೨	ಶ		೩	೩೩॥	ಉ.	೪೫॥	(ಮಾಸಿ.) ಕುಂಭ.	೧		೧೫
13	SUN	೧೩	ಆ		೪	೩೨।।।	ಹ.	೪೬॥		೨		೧೬
14	M	೧೪	ಚ		೫	೩೩।।।	ಚಿ.	೪೮।		೩		೧೭
15	TU	೧೫	ಮ		೬	೩೫।।।	ಸ್ವಾ.	೫೨।।।		೪		೧೮
16	W	೧೬	ಬು		೭	೩೯।	ವಿ.	೫೭।।।		೫		೧೯
17	TH	೧೭	ಗು		೮	೪೪।	ಅ.	೬೦		೬		೨೦
18	F	೧೮	ಶು		೯	೪೮॥	ಅ.	೩॥		೭		೨೧
19	S	೧೯	ಶ		೧೦	೫೩।।।	ಜ್ಯೇ.	೯।।।		೮		೨೨
20	SUN	೨೦	ಆ		೧೧	೫೮।।।	ಮೂ.	೧೬॥		೯		೨೩
21	M	೨೧	ಚ		೧೨	೬೦	ಪೂ.	೨೨।।।		೧೦		೨೪
22	TU	೨೨	ಮ		೧೨	೩।।।	ಉ.	೨೮॥		೧೧		೨೫
23	W	೨೩	ಬು		೧೩	೭॥	ಶ್ರ.	೩೩।		೧೨		೨೬
24	TH	೨೪	ಗು		೧೪	೧೦॥	ಧ.	೩೬।।।		೧೩		೨೭
25	F	೨೫	ಶು		🌑	೧೧।।।	ಶ.	೩೯।		೧೪		೨೮
26	S	೨೬	ಶ	ಫಾಲ್ಗುಣ ಶುದ್ಧ.	೧	೧೨।	ಪೂ.	೪೦॥		೧೫		೨೯
27	SUN	೨೭	ಆ		೨	೧೧।	ಉ.	೪೦।।।		೧೬	ರಂ.	೧
28	M	೨೮	ಚ		೩	೯।	ರೇ.	೩೯॥		೧೭		೨
29	TU	೨೯	ಮ		೪	೫।।।	ಅ.	೩೭॥		೧೮		೩

MARCH.

31 DAYS.

○ ಫಾಲ್ಗುಣ ಪೂರ್ಣಿಮೆ, ೧೦ ಮಾರ್ಚ್.



ಮಾರ್ಚ್.

೩೧ ದಿವಸಗಳು.

● ಫಾಲ್ಗುಣ ಅಮಾವಾಸೆ, ೨೫ ಮಾರ್ಚ್.

ಕರ್ತನು ಪ್ರೀತಿ ಮಾಡುವವನನ್ನು ಶಿಕ್ಷಿಸುತ್ತಾನೆ. ಮತ್ತು ತಾನು ಸೇರಿಸಿ ಕೊಳ್ಳುವ ಒಬ್ಬೊಬ್ಬ ಮಗನನ್ನು ಹೊಡೆಯುತ್ತಾನೆ. ಇಬ್ರಿ. ೧೨, ೬.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಿಂಗಳು	ತಾರೀಖು	ತಿಂಗಳು	ತಾರೀಖು
1	W	೧	ಬು		೫	೧III	ಭ.	೩೪III		೧೯		೪
2	TH	೨	ಗು		೭	೫೧II	ಕೃ.	೩೧II		೨೦		೫
3	F	೩	ಶು		೮	೪೫III	ರೋ.	೨೭II		೨೧		೬
4	S	೪	ಶ	ಫಾಲ್ಗುಣ ಶುದ್ಧ.	೯	೩೯III	ಮೃ.	೨೪I	(ಮಾಘ.)	೨೨		೭
5	SUN	೫	ಆ		೧೦	೩೩III	ಆ.	೨೯I		೨೩		೮
6	M	೬	ಚ		೧೧	೨೮I	ಪು.	೧೫I		೨೪		೯
7	TU	೭	ಮ		೧೨	೨೩I	ಪು.	೧೧III		೨೫		೧೦
8	W	೮	ಬು		೧೩	೧೮II	ಆ.	೮III		೨೬		೧೧
9	TH	೯	ಗು		೧೪	೧೪III	ಮ.	೬II	ಕುಂಭ.	೨೭		೧೨
10	F	೧೦	ಶು		○	೧೨I	ಪು.	೫I		೨೮		೧೩
11	S	೧೧	ಶ		೧	೧೦II	ಉ.	೫I		೨೯		೧೪
12	SUN	೧೨	ಆ		೨	೯III	ಹ.	೬I		೩೦		೧೫
13	M	೧೩	ಚ		೩	೧೦III	ಚಿ.	೮II		೧	ಶಾಬಾ.	೧೬
14	TU	೧೪	ಮ		೪	೧೨III	ಸ್ವಾ.	೧೨I		೨		೧೭
15	W	೧೫	ಬು		೫	೧೬I	ವಿ.	೧೬III		೩		೧೮
16	TH	೧೬	ಗು	ಫಾಲ್ಗುಣ ಬಹುಳ.	೬	೨೦II	ಅ.	೨೨I		೪		೧೯
17	F	೧೭	ಶು		೭	೨೫I	ಜ್ಯೇ.	೨೮II		೫		೨೦
18	S	೧೮	ಶ		೮	೩೦I	ಮೂ.	೩೫I		೬		೨೧
19	SUN	೧೯	ಆ		೯	೩೫III	ಪೂ.	೪೧II		೭		೨೨
20	M	೨೦	ಚ		೧೦	೪೦II	ಉ.	೪೭I	(ಫಾಲ್.)	೮		೨೩
21	TU	೨೧	ಮ		೧೧	೪೪I	ಶ್ರ.	೫೨II		೯		೨೪
22	W	೨೨	ಬು		೧೨	೪೬III	ಧ.	೫೬II		೧೦		೨೫
23	TH	೨೩	ಗು		೧೩	೪೮I	ಶ.	೫೯II		೧೧		೨೬
24	F	೨೪	ಶು		೧೪	೪೮II	ಪೂ.	೬೦	ಮೀನ.	೧೨		೨೭
25	S	೨೫	ಶ		●	೪೭I	ಪೂ.	೧I		೧೩		೨೮
26	SUN	೨೬	ಆ		೧	೪೫I	ಉ.	೧		೧೪		೨೯
27	M	೨೭	ಚ		೨	೪೧III	ರೇ.	II		೧೫		೩೦
28	TU	೨೮	ಮ	ಚೈತ್ರ ಶುದ್ಧ.	೩	೩೭II	ಭ.	೫೫III		೧೬		೧
29	W	೨೯	ಬು		೪	೩೨II	ಕೃ.	೫೨I		೧೭	ರಮಜಾನ.	೨
30	TH	೩೦	ಗು		೫	೨೭I	ರೋ.	೪೮II		೧೮		೩
31	F	೩೧	ಶು		೬	೨೧I	ಮೃ.	೪೪III		೧೯		೪

APRIL.

30 DAYS.

🌕 ಚೈತ್ರ ಪೂರ್ಣಿಮಿ, ೮ ಎಪ್ರಿಲ್.



ಎಪ್ರಿಲ್.

೩೦ ದಿವಸಗಳು.

🌑 ಚೈತ್ರ ಅಮಾವಾಸೆ, ೨೪ ಎಪ್ರಿಲ್.


ಯೇಸು ಕ್ರಿಸ್ತನು ನಿನ್ನೆ, ಈ ಹೊತ್ತು,
ಎಂದೆಂದಿಗೂ ಹಾಗೆಯೇ ಇದ್ದಾನೆ. ಇಬ್ರಿ. ೧೩, ೮.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ	ತಾರೀಖು	ತಿಂಗಳು	ತಾರೀಖು
1	S	೧	ಶ		೭	೧೫II	ಆ.	೪೦II		೨೦		೫
2	SUN	೨	ಆ	ಚೈತ್ರ ಶು.	೮	೯II	ಪು.	೩೬I	(ಮೀನ.) ಮಾಸ.	೨೧		೬
3	M	೩	ಚ		೯	೩III	ಪು.	೩೨III		೨೨		೭
4	TU	೪	ಮ		೧೧	೫೩III	ಆ.	೨೯II		೨೩		೮
5	W	೫	ಬು		೧೨	೪೯III	ಮ.	೨೭II		೨೪		೯
6	TH	೬	ಗು		೧೩	೪೭I	ಹು.	೨೫I		೨೫		೧೦
7	F	೭	ಶು		೧೪	೪೫I	ಉ.	೨೫II		೨೬		೧೧
8	S	೮	ಶ		🌕	೪೪III	ಹ.	೨೬I		೨೭		೧೨
9	SUN	೯	ಆ	ಚೈತ್ರ ಬ.	೧	೪೫II	ಚಿ.	೨೮I		೨೮		೧೩
10	M	೧೦	ಚ		೨	೪೭II	ಸ್ವಾ.	೩೧II		೨೯		೧೪
11	TU	೧೧	ಮ		೩	೫೦III	ವಿ.	೩೫III		೩೦		೧೫
12	W	೧೨	ಬು		೪	೫೫III	ಅ.	೪೧I	(ಮೇಷ.) ಮಾಸ.	೧	ಜಿಲಾಕಾದ್.	೧೬
13	TH	೧೩	ಗು		೫	೫೮III	ಜ್ಯೇ.	೪೬III		೨		೧೭
14	F	೧೪	ಶು		೬	೬೦	ಮೂ.	೫೩		೩		೧೮
15	S	೧೫	ಶ		೬	೩III	ಪೂ.	೫೯I		೪		೧೯
16	SUN	೧೬	ಆ		೭	೮III	ಉ.	೬೦		೫		೨೦
17	M	೧೭	ಚ		೮	೧೩I	ಉ.	೫I		೬		೨೧
18	TU	೧೮	ಮ		೯	೧೮I	ಶ್ರ.	೧೦III		೭		೨೨
19	W	೧೯	ಬು		೧೦	೨೦	ಧ.	೧೫		೮		೨೩
20	TH	೨೦	ಗು		೧೧	೨೧I	ಶ.	೧೮I		೯		೨೪
21	F	೨೧	ಶು		೧೨	೨೧II	ಪೂ.	೨೦I		೧೦		೨೫
22	S	೨೨	ಶ		೧೩	೨೦III	ಉ.	೨೧		೧೧		೨೬
23	SUN	೨೩	ಆ		೧೪	೧೮II	ರೇ.	೨೦III		೧೨		೨೭
24	M	೨೪	ಚ		🌑	೧೫II	ಅ.	೧೯II		೧೩		೨೮
25	TU	೨೫	ಮ	ವೈಶಾಖ ಶು.	೧	೧೧II	ಭ.	೧೭		೧೪		೨೯
26	W	೨೬	ಬು		೨	೬II	ಕೃ.	೧೪		೧೫	ಜಿಲಾಹಜ್.	೧
27	TH	೨೭	ಗು		೩	೧	ರೋ.	೧೦II		೧೬		೨
28	F	೨೮	ಶು		೫	೪೯I	ಮೃ.	೬II		೧೭		೩
29	S	೨೯	ಶ		೬	೪೩	ಆ.	೨I		೧೮		೪
30	SUN	೩೦	ಆ		೭	೩೭II	ಪು.	೫೪II		೧೯		೫

MAY.

31 DAYS.

(ಪೂರ್ಣಿಮೆ) ವೈಶಾಖ ಪೂರ್ಣಿಮಿ,
೮ ಮೇ.



ಮೇ.

೩೧ ದಿವಸಗಳು.

(ಅಮಾವಾಸೆ) ವೈಶಾಖ ಅಮಾವಾಸೆ,
೨೩ ಮೇ.

ನಿಮ್ಮ ಪ್ರಾಣಗಳನ್ನು ರಕ್ಷಿಸ ಸಾಮರ್ಥ್ಯವುಳ್ಳ, ಒಳನೆಟ್ಟ ವಾಕ್ಯವನ್ನು
ಶಾಂತಿಯಿಂದ ಅಂಗೀಕರಿಸಿರಿ. ಯಾಕೋ. ೧, ೨೧.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ	ತಾರೀಖು	ತಿಂಗಳು	ತಾರೀಖು
1	M	೧	ಚ		೮	೩೨	ಆ.	೫೧		೨೦		೬
2	Tu	೨	ಮ		೯	೨೭I	ಮ.	೪೮II		೨೧		೭
3	W	೩	ಬು	ವೈಶಾಖ ಶುದ್ಧ	೧೦	೨೩II	ಪು.	೪೬III		೨೨		೮
4	Th	೪	ಗು		೧೧	೨೦I	ಉ.	೪೫III	(ಮೇಷ.)	೨೩		೯
5	F	೫	ಶು		೧೨	೧೮I	ಹ.	೪೬I		೨೪		೧೦
6	S	೬	ಶ		೧೩	೧೭I	ಚಿ.	೪೭III		೨೫		೧೧
7	SUN	೭	ಆ		೧೪	೧೭III	ಸ್ವಾ.	೫೦I		೨೬		೧೨
8	M	೮	ಚ		(ಪೂರ್ಣಿಮೆ)	೧೯II	ವಿ.	೫೪	ಮೇಷ	೨೭		೧೩
9	Tu	೯	ಮ		೧	೨೨I	ಅ.	೫೯		೨೮		೧೪
10	W	೧೦	ಬು		೨	೨೬I	ಜ್ಯೇ.	೬೦		೨೯		೧೫
11	Th	೧೧	ಗು		೩	೩೦II	ಜ್ಯೇ.	೫		೩೦		೧೬
12	F	೧೨	ಶು		೪	೩೫II	ಮೂ.	೧೧		೩೧	ರಬಿಲಾಖರ್.	೧೭
13	S	೧೩	ಶ		೫	೪೧	ಪೂ.	೧೭III		೧		೧೮
14	SUN	೧೪	ಆ		೬	೪೫I	ಉ.	೨೪		೨		೧೯
15	M	೧೫	ಚ	ವೈಶಾಖ ಬಹುಳ.	೭	೪೯	ಶ್ರ.	೨೯II		೩		೨೦
16	Tu	೧೬	ಮ		೮	೫೧III	ಧ.	೩೪		೪		೨೧
17	W	೧೭	ಬು		೯	೫೩II	ಶ.	೩೭III		೫		೨೨
18	Th	೧೮	ಗು		೧೦	೫೩III	ಪೂ.	೪೦		೬		೨೩
19	F	೧೯	ಶು		೧೧	೫೨III	ಉ.	೪೧		೭		೨೪
20	S	೨೦	ಶ		೧೨	೫೦II	ರೇ.	೪೧	(ವೃಷಭ)	೮		೨೫
21	SUN	೨೧	ಆ		೧೩	೪೭I	ಅ.	೩೯II		೯		೨೬
22	M	೨೨	ಚ		೧೪	೪೩	ಭ.	೩೭II		೧೦		೨೭
23	Tu	೨೩	ಮ		(ಅಮಾವಾಸೆ)	೩೮I	ಕೃ.	೩೪III		೧೧		೨೮
24	W	೨೪	ಬು		೧	೩೨III	ರೋ.	೩೨I	ವೃಷಭ.	೧೨		೨೯
25	Th	೨೫	ಗು		೨	೨೭	ಮೃ.	೨೭I		೧೩		೧
26	F	೨೬	ಶು		೩	೨೧	ಆ.	೨೩I		೧೪		೨
27	S	೨೭	ಶ	ಜ್ಯೇಷ್ಠ ಶುದ್ಧ.	೪	೧೪II	ಪು.	೧೯		೧೫		೩
28	SUN	೨೮	ಆ		೫	೯	ಪು.	೧೫I		೧೬	ಜಮಾದಿಲಾವಲ್.	೪
29	M	೨೯	ಚ		೬	೩III	ಆ.	೧೨III		೧೭		೫
30	Tu	೩೦	ಮ		೮	೫೩II	ಮ.	೯		೧೮		೬
31	W	೩೧	ಬು		೯	೫೧	ಪು.	೬III		೧೯		೭

JUNE.

30 DAYS.

(full moon) ಜ್ಯೇಷ್ಠ ಪೂರ್ಣಿಮಿ, ೬ ಜೂನ್.



ಜೂನ್.

೩೦ ದಿವಸಗಳು.

(new moon) ಜ್ಯೇಷ್ಠ ಅಮಾವಾಸೆ, ೨೧ ಜೂನ್.


ನಿನ್ನ ವಿಮೋಚಕನಾದ ಯೆಹೋವನು ಹೇಳುವದೇನಂದರೆ—
ನಾನೇ ಯೆಹೋವನು, ಎಲ್ಲವನ್ನು ಮಾಡುವವನು. ಯೆಶಾ. ೪೪, ೨೪.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ಮಾಸ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ	ದಿನ	ಮಾಸ	ದಿನ
1	TH	೧	ಗು	ಜ್ಯೇಷ್ಠ ಶುದ್ಧ	೧೦	೪೯	ಉ.	೫III	(ಜ್ಯೇಷ್ಠ) ವೃಷಭ	೨೦	ಜಮಾದಿಲಾವಲ್.	೮
2	F	೨	ಶು		೧೧	೪೮	ಹ.	೫II		೨೧		೯
3	S	೩	ಶ		೧೨	೪೭III	ಚಿ.	೬III		೨೨		೧೦
4	SUN	೪	ಆ		೧೩	೪೯I	ಸ್ವಾ	೯I		೨೩		೧೧
5	M	೫	ಚ		೧೪	೫೧III	ವಿ.	೧೩		೨೪		೧೨
6	TU	೬	ಮ		(full moon)	೫೫III	ಅ.	೧೭III		೨೫		೧೩
7	W	೭	ಬು	ಜ್ಯೇಷ್ಠ ಬಹುಳ	೧	೬೦	ಜ್ಯೆ.	೨೩II		೨೬		೧೪
8	TH	೮	ಗು		೧	II	ಮೂ.	೨೯III		೨೭		೧೫
9	F	೯	ಶು		೨	೫I	ಪೂ.	೩೬I		೨೮		೧೬
10	S	೧೦	ಶ		೩	೧೦	ಉ.	೪೨I		೨೯		೧೭
11	SUN	೧೧	ಆ		೪	೧೪II	ಶ್ರ.	೪೮		೩೦		೧೮
12	M	೧೨	ಚ		೫	೧೮II	ಧ.	೫೩		೩೧		೧೯
13	TU	೧೩	ಮ		೬	೨೨	ಶ.	೫೬III	(ಆಷಾಢ) ಮಿಥುನ	೧		೨೦
14	W	೧೪	ಬು		೭	೨೩III	ಪೂ.	೫೯II		೨		೨೧
15	TH	೧೫	ಗು		೮	೨೩III	ಉ.	೬೦		೩		೨೨
16	F	೧೬	ಶು		೯	೨೨III	ಉ.	೧I		೪		೨೩
17	S	೧೭	ಶ		೧೦	೨೦III	ರೇ.	೧		೫		೨೪
18	SUN	೧೮	ಆ		೧೧	೧೭II	ಅ.	೫೭III		೬		೨೫
19	M	೧೯	ಚ		೧೨	೧೩II	ಕೃ.	೫೫		೭		೨೬
20	TU	೨೦	ಮ		೧೩	೮II	ರೋ.	೫೧III		೮		೨೭
21	W	೨೧	ಬು		೧೪	೩I	ಮೃ.	೪೭III		೯		೨೮
22	TH	೨೨	ಗು	ಆಷಾಢ ಶುದ್ಧ	೧	೫೧III	ಆ.	೪೩III		೧೦		೨೯
23	F	೨೩	ಶು		೨	೪೫I	ಪು.	೩೯II		೧೧		೩೦
24	S	೨೪	ಶ		೩	೩೯II	ಪು.	೩೫III		೧೨	ಜಮಾದಿಲಾಖರ್.	೧
25	SUN	೨೫	ಆ		೪	೩೩I	ಆ.	೩೨I		೧೩		೨
26	M	೨೬	ಚ		೫	೨೮III	ಮ.	೨೯I		೧೪		೩
27	TU	೨೭	ಮ		೬	೨೪III	ಪು.	೨೭		೧೫		೪
28	W	೨೮	ಬು		೭	೨೧I	ಉ.	೨೫III		೧೬		೫
29	TH	೨೯	ಗು		೮	೧೯	ಹ.	೨೫II		೧೭		೬
30	F	೩೦	ಶು.		೯	೧೮	ಚಿ.	೨೬II		೧೮		೭

JULY.

31 DAYS.

🌕 ಆಷಾಢ ಪೂರ್ಣಿಮಿ, ೬ ಜುಲಾಯಿ.



ಜುಲಾಯಿ.

೩೧ ದಿವಸಗಳು.

🌑 ಆಷಾಢ ಅಮಾವಾಸೆ, ೨೧ ಜುಲಾಯಿ.

ಯೆಹೋವನು ಒಳ್ಳೆಯವನೂ ನೆಟ್ಟನೆಯವನೂ ಆಗಿದ್ದಾನೆ;
ಆದದರಿಂದ ಪಾಪಾತ್ಮರನ್ನು ಮಾರ್ಗದಲ್ಲಿ ಬೋಧಿಸುವನು. ಕೀರ್ತ. ೨೫, ೮.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮುಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನ. ಹೆಸರು	ಘಳಿಗೆ	ಮಾಸ	ದಿನ	ತಿಂಗಳು	ದಿನ
1	S	೧	ಶ		೧೦	೧೮I	ಸ್ವಾ.	೨೮II		೧೯		೮
2	SUN	೨	ಆ	ಆಷಾಢ ಶು.	೧೧	೧೯III	ವಿ.	೩೨		೨೦		೯
3	M	೩	ಚ		೧೨	೨೨I	ಅ	೩೬II		೨೧		೧೦
4	Tu	೪	ಮ		೧೩	೨೬	ಜ್ಯೇ.	೪೨	(ಆನಿ.)	೨೨		೧೧
5	W	೫	ಬು		೧೪	೩೦II	ಮೂ.	೪೮		೨೩		೧೨
6	Th	೬	ಗು		🌕	೩೫I	ಪೂ.	೫೪II		೨೪		೧೩
7	F	೭	ಶು		೧	೪೦	ಉ.	೬೦		೨೫		೧೪
8	S	೮	ಶ		೨	೪೪III	ಉ.	III		೨೬		೧೫
9	SUN	೯	ಆ		೩	೪೮III	ಶ್ರ.	೬III	ಮಿಥುನ	೨೭		೧೬
10	M	೧೦	ಚ		೪	೫೧I	ಧ.	೧೧II		೨೮	ಶವ್ವಾಲ್.	೧೭
11	Tu	೧೧	ಮ		೫	೫೩	ಶ.	೧೫III		೨೯		೧೮
12	W	೧೨	ಬು	ಆಷಾಢ ಕೃ.	೬	೫೩II	ಪೂ.	೧೮II		೩೦		೧೯
13	Th	೧೩	ಗು		೭	೫೨III	ಉ.	೨೦		೩೧		೨೦
14	F	೧೪	ಶು		೮	೫೦II	ರೇ.	೨೦II		೩೨		೨೧
15	S	೧೫	ಶ		೯	೪೭I	ಅ.	೧೯III		೧		೨೨
16	SUN	೧೬	ಆ		೧೦	೪೩	ಭ.	೧೮		೨		೨೩
17	M	೧೭	ಚ		೧೧	೩೮I	ಕೃ.	೧೫I		೩		೨೪
18	Tu	೧೮	ಮ		೧೨	೩೨III	ರೋ.	೧೨		೪		೨೫
19	W	೧೯	ಬು		೧೩	೨೭	ಮೃ.	೮I		೫		೨೬
20	Th	೨೦	ಗು		೧೪	೨೦III	ಆ.	೪I		೬		೨೭
21	F	೨೧	ಶು		🌑	೧೪III	ಪು.	I	(ಆಡಿ)	೭		೨೮
22	S	೨೨	ಶ		೧	೯	ಆ.	೫೨II		೮		೨೯
23	SUN	೨೩	ಆ		೨	೩I	ಮ.	೪೯I		೯		೧
24	M	೨೪	ಚ		೪	೫೪	ಪು.	೪೭	ಕರ್ಕಾಟಕ.	೧೦		೨
25	Tu	೨೫	ಮ	ಶ್ರಾವಣ ಶು.	೫	೫೦III	ಉ.	೪೫I		೧೧		೩
26	W	೨೬	ಬು		೬	೪೮I	ಹ.	೪೪III		೧೨		೪
27	Th	೨೭	ಗು		೭	೪೭I	ಚಿ.	೪೫II		೧೩	ಜಿಲ್ಕಾದ.	೫
28	F	೨೮	ಶು		೮	೪೭I	ಸ್ವಾ.	೪೭I		೧೪		೬
29	S	೨೯	ಶ		೯	೪೮III	ವಿ.	೫೦I		೧೫		೭
30	SUN	೩೦	ಆ		೧೦	೫೧I	ಅ.	೫೪III		೧೬		೮
31	M	೩೧	ಚ		೧೧	೫೫I	ಜ್ಯೇ.	೬೦		೧೭		೯

AUGUST.

31 DAYS.

○ ಶ್ರಾವಣ ಪೂರ್ಣಿಮಿ, ೫ ಅಗೊಸ್ತು.



ಅಗೊಸ್ತು.

೩೧ ದಿವಸಗಳು.

● ಶ್ರಾವಣ ಅಮಾವಾಸೆ, ೧೯ ಅಗೊಸ್ತು.

ದೇವರು ತನ್ನ ಮುಂದೆ ಒಳ್ಳೆಯವನಾಗಿರುವ ಮನುಷ್ಯನಿಗೆ ಜ್ಞಾನವನ್ನೂ ತಿಳುವಿಕೆಯನ್ನೂ ಸಂತೋಷವನ್ನೂ ಕೊಡುತ್ತಾನೆ. ಪ್ರಸಂಗಿ. ೨, ೨೬.

ಅಂಗ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ	ದಿನ	ತಿಂಗಳು	ದಿನ
1	Tu	೧	ಮ	ಶ್ರಾವಣ ಶುದ್ಧ.	೧೨	೫೯II	ಮೂ:	೬೦	(ಆಡಿ.) ಕರ್ಕಾಟಕ.	೧೮	ಜಿಲ್ಹಜ್.	೧೦
2	W	೨	ಬು		೧೩	೬೦	ಮೂ.	೬೧		೧೯		೧೧
3	Th	೩	ಗು		೧೩	೪I	ಪೂ.	೧೨I		೨೦		೧೨
4	F	೪	ಶು		೧೪	೯I	ಉ.	೧೮III		೨೧		೧೩
5	S	೫	ಶ		○	೧೩III	ಶ್ರ.	೨೪II		೨೨		೧೪
6	SUN	೬	ಆ	ಶ್ರಾವಣ ಬಹುಳ.	೧	೧೭III	ಧ.	೨೯I		೨೩		೧೫
7	M	೭	ಚ		೨	೨೦III	ಶ.	೩೪		೨೪		೧೬
8	Tu	೮	ಮ		೩	೨೨II	ಪೂ.	೩೭I		೨೫		೧೭
9	W	೯	ಬು		೪	೨೩	ಉ.	೩೯		೨೬		೧೮
10	Th	೧೦	ಗು		೫	೨೨I	ರೇ.	೩೯III		೨೭		೧೯
11	F	೧೧	ಶು		೬	೨೦I	ಅ.	೩೯II		೨೮		೨೦
12	S	೧೨	ಶ		೭	೧೭I	ಭ.	೩೭III		೨೯		೨೧
13	SUN	೧೩	ಆ		೮	೧೩I	ಕೃ.	೩೫I		೩೦		೨೨
14	M	೧೪	ಚ		೯	೮I	ರೋ.	೩೨I		೩೧		೨೩
15	Tu	೧೫	ಮ		೧೦	೨III	ಮೃ.	೨೮II	(ಆವಣಿ.) ಸಿಂಹ.	೧		೨೪
16	W	೧೬	ಬು		೧೨	೫೧	ಆ.	೨೪II		೨		೨೫
17	Th	೧೭	ಗು		೧೩	೪೭	ಪು.	೨೦II		೩		೨೬
18	F	೧೮	ಶು		೧೪	೩೯I	ಪು.	೧೬II		೪		೨೭
19	S	೧೯	ಶ		●	೩೩III	ಆ.	೧೨III		೫		೨೮
20	SUN	೨೦	ಆ	ಭಾದ್ರಪದ ಶುದ್ಧ.	೧	೨೮III	ಮ.	೯II		೬		೨೯
21	M	೨೧	ಚ		೨	೨೪II	ಪು.	೬III		೭	ಮೊಹರಂ.	೧
22	Tu	೨೨	ಮ		೩	೨೧	ಉ.	೫		೮		೨
23	W	೨೩	ಬು		೪	೧೮III	ಹ.	೪		೯		೩
24	Th	೨೪	ಗು		೫	೧೭II	ಚಿ.	೪II		೧೦		೪
25	F	೨೫	ಶು		೬	೧೭II	ಸ್ವಾ.	೬		೧೧		೫
26	S	೨೬	ಶ		೭	೧೮III	ವಿ.	೮III		೧೨		೬
27	SUN	೨೭	ಆ		೮	೨೧III	ಅ.	೧೨III		೧೩		೭
28	M	೨೮	ಚ		೯	೨೫	ಜ್ಯೇ.	೧೮		೧೪		೮
29	Tu	೨೯	ಮ		೧೦	೨೯III	ಮೂ.	೨೩III		೧೫		೯
30	W	೩೦	ಬು		೧೧	೩೪II	ಪೂ.	೩೦		೧೬		೧೦
31	Th	೩೧	ಗು		೧೨	೩೯II	ಉ.	೩೬II		೧೭		೧೧


SEPTEMBER. 30 DAYS. ☺ ಭಾದ್ರಪದ ಪೂರ್ಣಿಮೆ, ೩ ಸಪ್ಟಂಬರ.		**ಸೆಪ್ತಂಬರ್.** ೩೦ ದಿವಸಗಳು. ● ಭಾದ್ರಪದ ಅಮಾವಾಸೆ, ೧೭ ಸಪ್ಟಂಬರ.

ಆಕಾಶಗಳು ದೇವರ ಘನವನ್ನು ಸಾರುತ್ತವೆ;
ಅಂತರಿಕ್ಷವು ಅವನ ಕೈಕೆಲಸವನ್ನು ತಿಳಿಸುತ್ತವೆ. ಕೀರ್ತ. ೧೯, ೧.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಕು	ವಾರ	ತಿಂಗಳು	ತಿಥಿ	ಘಳಿಗೆ	ನ. ಹೆಸರು	ಘಳಿಗೆ	ಮಾಸ	ದಿವಸ	ತಿಂಗಳು	ದಿನ
1	F	೧	ಶು	ಭಾ. ಶುಕ್ಲ.	೧೩	೪೪	ಶ್ರ.	೪೨II		೧೮		೧೨
2	S	೨	ಶ		೧೪	೪೮	ಧ.	೪೮		೧೯		೧೩
3	SUN	೩	ಆ		☺	೫೧II	ಶ.	೫೨III		೨೦		೧೪
4	M	೪	ಚ	ಭಾದ್ರಪದ ಕೃಷ್ಣ.	೧	೫೩	ಪೂ.	೫೬	ಸಿಂಹ. (ಸೋಣ.)	೨೧	ಶಾಬಾನ್.	೧೫
5	TU	೫	ಮ		೨	೫೩III	ಉ.	೫೮I		೨೨		೧೬
6	W	೬	ಬು		೩	೫೩	ರೇ.	೫೯		೨೩		೧೭
7	TH	೭	ಗು		೪	೫೧I	ಅ.	೫೯		೨೪		೧೮
8	F	೮	ಶು		೫	೪೮I	ಭ.	೫೭III		೨೫		೧೯
9	S	೯	ಶ		೬	೪೪II	ಕೃ.	೫೫I		೨೬		೨೦
10	SUN	೧೦	ಆ		೭	೩೯II	ರೋ.	೫೨I		೨೭		೨೧
11	M	೧೧	ಚ		೮	೩೪I	ಮೃ.	೪೮III		೨೮		೨೨
12	TU	೧೨	ಮ		೯	೨೮II	ಆ.	೪೪III		೨೯		೨೩
13	W	೧೩	ಬು		೧೦	೨೨II	ಪು.	೪೦III		೩೦		೨೪
14	TH	೧೪	ಗು		೧೧	೧೬II	ಪು.	೩೬III		೩೧		೨೫
15	F	೧೫	ಶು		೧೨	೧೦II	ಆ.	೩೨III	ಕನ್ಯಾ. (ನಿರ್ನಾಲ.)	೧		೨೬
16	S	೧೬	ಶ		೧೩	೫	ಮ.	೨೯II		೨		೨೭
17	SUN	೧೭	ಆ		●	೫೫III	ಪು.	೨೬III		೩		೨೮
18	M	೧೮	ಚ	ಆಶ್ವೀಜ ಶುಕ್ಲ.	೧	೫೨I	ಉ.	೨೪II		೪		೨೯
19	TU	೧೯	ಮ		೨	೫೦	ಹ.	೨೩II		೫		೩೦
20	W	೨೦	ಬು		೩	೪೮III	ಚಿ.	೨೩II		೬	ರಮ್‌ಜಾನ್.	೧
21	TH	೨೧	ಗು		೪	೪೯	ಸ್ವಾ.	೨೪III		೭		೨
22	F	೨೨	ಶು		೫	೫೦II	ವಿ.	೨೭II		೮		೩
23	S	೨೩	ಶ		೬	೫೩	ಅ.	೩೧		೯		೪
24	SUN	೨೪	ಆ		೭	೫೬III	ಜ್ಯೇ.	೩೫III		೧೦		೫
25	M	೨೫	ಚ		೮	೬೦	ಮೂ.	೪೧II		೧೧		೬
26	TU	೨೬	ಮ		೮	೨	ಪೂ.	೪೭II		೧೨		೭
27	W	೨೭	ಬು		೯	೬	ಉ.	೫೪		೧೩		೮
28	TH	೨೮	ಗು		೧೦	೧೧	ಶ್ರ.	೬೦		೧೪		೯
29	F	೨೯	ಶು		೧೧	೧೬	ಶ್ರ.	1		೧೫		೧೦
30	S	೩೦	ಶ		೧೨	೨೦	ಧ.	೬		೧೬		೧೧

OCTOBER.
31 DAYS.

○ ಆಶ್ವೀಜ ಪೂರ್ಣಿಮಿ,
೩ ಒಕ್ತೋಬರ.



ಒಕ್ತೋಬರ.
೩೧ ದಿವಸಗಳು.

● ಆಶ್ವೀಜ ಅಮಾವಾಸೆ,
೧೭ ಒಕ್ತೋಬರ.


ಬೇಡಿ ಕೊಳ್ಳಿರಿ, ಆಗ ನಿಮಗೆ ಕೊಡಲ್ಪಡುವದು; ಹುಡುಕಿರಿ, ಆಗ ನಿಮಗೆ ಸಿಕ್ಕುವದು; ತಟ್ಟಿರಿ, ಆಗ ನಿಮಗೆ ತೆರೆಯಲ್ಪಡುವದು. ಮತ್ತಾ. ೭, ೭.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮುಹಮ್ಮದಿ.	
DATE	DAY	ತಾರೀಕು	ವಾರ	ತಿಂಗಳು	ತಿಥಿ	ಘಳಿಗೆ	ನ. ಹೆಸರು	ಘಳಿಗೆ	ಮಾಸ	ದಿವಸ	ತಿಂಗಳು	ದಿನ
1	SUN	೧	ಆ	ಆ. ಶು.	೧೩	೨೩	ಶ.	೧೦III	(ನಿರ್ನಾಲ.)	೧೭	ರಮ್‌ಜಾನ್.	೧೨
2	M	೨	ಚ		೧೪	೨೫	ಪೂ.	೧೪I		೧೮		೧೩
3	Tu	೩	ಮ		○	೨೫III	ಉ.	೧೬III		೧೯		೧೪
4	W	೪	ಬು	ಆಶ್ವೀಜ ಕೃಷ್ಣ.	೧	೨೫I	ರೇ.	೧೮		೨೦		೧೫
5	Th	೫	ಗು		೨	೨೩I	ಅ.	೧೮		೨೧		೧೬
6	F	೬	ಶು		೩	೨೦II	ಭ.	೧೭		೨೨		೧೭
7	S	೭	ಶ		೪	೧೬III	ಕೃ.	೧೪III		೨೩		೧೮
8	SUN	೮	ಆ		೫	೧೨	ರೋ.	೧೨	ಕನ್ಯಾ.	೨೪		೧೯
9	M	೯	ಚ		೬	೬III	ಮೃ.	೮III		೨೫		೨೦
10	Tu	೧೦	ಮ		೭	೧I	ಆ.	೪III		೨೬		೨೧
11	W	೧೧	ಬು		೯	೪೯I	ಪು.	III		೨೭		೨೨
12	Th	೧೨	ಗು		೧೦	೪೩I	ಆ.	೫೨III		೨೮		೨೩
13	F	೧೩	ಶು		೧೧	೩೮	ಮ.	೪೯I		೨೯		೨೪
14	S	೧೪	ಶ		೧೨	೩೩I	ಪು.	೪೬I		೩೦		೨೫
15	SUN	೧೫	ಆ		೧೩	೨೮III	ಉ.	೪೩III	ತುಲಾ.	೧		೨೬
16	M	೧೬	ಚ		೧೪	೨೫III	ಹ.	೪೨III		೨		೨೭
17	Tu	೧೭	ಮ		●	೨೩II	ಚಿ.	೪೨II		೩		೨೮
18	W	೧೮	ಬು	ಕಾರ್ತಿಕ ಶುಕ್ಲ.	೧	೨೨I	ಸ್ವಾ.	೪೩I		೪		೨೯
19	Th	೧೯	ಗು		೨	೨೨III	ವಿ.	೪೫III	(ಬೊಂತೇಲ್.)	೫	ಶವ್ವಾಲ್.	೧
20	F	೨೦	ಶು		೩	೨೪I	ಅ.	೪೯		೬		೨
21	S	೨೧	ಶ		೪	೨೭	ಜ್ಯೇ.	೫೩III		೭		೩
22	SUN	೨೨	ಆ		೫	೩೦III	ಮೂ.	೫೯		೮		೪
23	M	೨೩	ಚ		೬	೩೫II	ಪೂ.	೬೦		೯		೫
24	Tu	೨೪	ಮ		೭	೪೦II	ಪೂ.	೫I		೧೦		೬
25	W	೨೫	ಬು		೮	೪೫III	ಉ.	೧೧III		೧೧		೭
26	Th	೨೬	ಗು		೯	೫೦II	ಶ್ರ.	೧೮		೧೨		೮
27	F	೨೭	ಶು		೧೦	೫೪III	ಧ.	೨೩III		೧೩		೯
28	S	೨೮	ಶ		೧೧	೫೮	ಶ.	೨೮III		೧೪		೧೦
29	SUN	೨೯	ಆ		೧೨	೬೦	ಪೂ.	೩೨III		೧೫		೧೧
30	M	೩೦	ಚ		೧೨	I	ಉ.	೩೫II		೧೬		೧೨
31	Tu	೩೧	ಮ		೧೩	III	ರೇ.	೩೭		೧೭		೧೩

NOVEMBER.

30 DAYS.

☉ ಕಾರ್ತಿಕ ಪೂರ್ಣಿಮೆ,
೧ ನವಂಬರ.



ನವಂಬರ.

೩೦ ದಿವಸಗಳು.

● ಕಾರ್ತಿಕ ಅಮಾವಾಸೆ,
೧೫ ನವಂಬರ.

ಹಗಲು ಆಳುವದಕ್ಕೆ ಸೂರ್ಯನನ್ನು ಉಂಟು ಮಾಡಿದವನನ್ನು ಕೊಂಡಾಡಿರಿ; ಯಾಕಂದರೆ ಅವನ ಕೃಪೆಯು ಯುಗಯುಗಕ್ಕೂ ಅದೆ. ಕೀರ್ತ. ೧೩೬, ೮.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮುಹಮ್ಮದಿ.	
DATE	DAY	ತಾರೀಕು	ವಾರ	ತಿಂಗಳು	ತಿಥಿ	ಘಳಿಗೆ	ನ. ಹೆಸರು	ಘಳಿಗೆ	ಮಾಸ	ದಿವಸ	ತಿಂಗಳು	ದಿನ
1	W	೧	ಬು	ಕಾ. ಶು.	೧೪	II	ಅ.	೩೭II	ತುಲಾ. (ಬೊಂತೇಲ್.)	೧೮	ಶವ್ವಾಲ್.	೧೪
2	TH	೨	ಗು	ಕಾರ್ತಿಕ ಕೃಷ್ಣ.	೧	೫೫III	ಭ.	೩೬III		೧೯		೧೫
3	F	೩	ಶು		೨	೫೧III	ಕೃ.	೩೪III		೨೦		೧೬
4	S	೪	ಶ		೩	೪೭	ರೋ.	೩೨		೨೧		೧೭
5	SUN	೫	ಆ		೪	೪೨	ಮೃ.	೨೮III		೨೨		೧೮
6	M	೬	ಚ		೫	೩೬I	ಆ.	೨೫		೨೩		೧೯
7	TU	೭	ಮ		೬	೩೦I	ಪು.	೨೦III		೨೪		೨೦
8	W	೮	ಬು		೭	೨೪I	ಪು.	೧೬III		೨೫		೨೧
9	TH	೯	ಗು		೮	೧೮II	ಆ.	೧೨II		೨೬		೨೨
10	F	೧೦	ಶು		೯	೧೩I	ಮ.	೯I		೨೭		೨೩
11	S	೧೧	ಶ		೧೦	೮I	ಪೂ.	೫III		೨೮		೨೪
12	SUN	೧೨	ಆ		೧೧	೪	ಉ.	೩II		೨೯		೨೫
13	M	೧೩	ಚ		೧೨	೧	ಹ.	೨		೩೦		೨೬
14	TU	೧೪	ಮ		೧೪	೫೭II	ಚಿ.	೧I	ವೃಶ್ಚಿಕ. (ಜಾರ್ದೆ.)	೧		೨೭
15	W	೧೫	ಬು		●	೫೭III	ಸ್ವಾ.	೨		೨		೨೮
16	TH	೧೬	ಗು	ಮಾರ್ಗಶಿರ ಶುಕ್ಲ.	೧	೫೯II	ವಿ.	೩III		೩		೨೯
17	F	೧೭	ಶು		೨	೬೦	ಅ.	೭		೪		೩೦
18	S	೧೮	ಶ		೨	೨II	ಜ್ಯೆ.	೧೧II		೫	ಜಿಲ್‌ಖಾಯದ್.	೧
19	SUN	೧೯	ಆ		೩	೬I	ಮೂ.	೧೬III		೬		೨
20	M	೨೦	ಚ		೪	೧೧	ಪೂ.	೨೨III		೭		೩
21	TU	೨೧	ಮ		೫	೧೬	ಉ.	೨೯		೮		೪
22	W	೨೨	ಬು		೬	೨೧II	ಶ್ರ.	೩೫II		೯		೫
23	TH	೨೩	ಗು		೭	೨೬I	ಧ.	೪೧II		೧೦		೬
24	F	೨೪	ಶು		೮	೩೦II	ಶ.	೪೬III		೧೧		೭
25	S	೨೫	ಶ		೯	೩೩III	ಪೂ.	೫೧		೧೨		೮
26	SUN	೨೬	ಆ		೧೦	೩೫III	ಉ.	೫೪		೧೩		೯
27	M	೨೭	ಚ		೧೧	೩೬II	ರೇ.	೫೫III		೧೪		೧೦
28	TU	೨೮	ಮ		೧೨	೩೬	ಅ.	೫೬I		೧೫		೧೧
29	W	೨೯	ಬು		೧೩	೩೪	ಭ.	೫೫III		೧೬		೧೨
30	TH	೩೦	ಗು		೧೪	೩೧I	ಕೃ.	೫೪I		೧೭		೧೩

DECEMBER.

31 DAYS.



ದಶಂಬರ.

೩೧ ದಿವಸಗಳು.

🌝 ಮಾರ್ಗಶಿರ ಪೂರ್ಣಿಮಿ, ೧ ದಶಂಬರ. 🌚 ಮಾರ್ಗಶಿರ ಅಮಾವಾಸೆ, ೧೫ ದಶಂಬರ. 🌝 ಪುಷ್ಯ ಪೂರ್ಣಿಮಿ, ೩೦ ದಶಂಬರ.

ಯೆಹೋವನ ಕಣ್ಣುಗಳು ಎಲ್ಲಾ ಸ್ಥಳಗಳಲ್ಲಿ ಇದ್ದು, ಕೆಟ್ಟವರನ್ನೂ ಒಳ್ಳೆಯವರನ್ನೂ ದೃಷ್ಟಿಸುತ್ತವೆ. ಸಾಮತಿ. ೧೫, ೩.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಕು	ವಾರ	ತಿಂಗಳು	ತಿಥಿ	ಘಳಿಗೆ	ನ. ಹೆಸರು	ಘಳಿಗೆ	ಮಾಸ	ದಿವಸ	ತಿಂಗಳು	ದಿನ
1	F	೧	ಶು	ಮಾ. ಶು.	🌝	೨೭II	ರೋ.	೫೧III		೧೮		೧೪
2	S	೨	ಶ	ಮಾರ್ಗಶಿರ ಕೃಷ್ಣ.	೧	೨೩	ಮೃ.	೪೮II		೧೯		೧೫
3	SUN	೩	ಆ		೨	೧೭III	ಆ.	೪೪III	(ಜಾರ್ದೆ.)	೨೦		೧೬
4	M	೪	ಚ		೩	೧೨	ಪು.	೪೦III		೨೧		೧೭
5	TU	೫	ಮ		೪	೬I	ಪು.	೩೬III		೨೨		೧೮
6	W	೬	ಬು		೫	II	ಆ.	೩೨III		೨೩		೧೯
7	TH	೭	ಗು		೭	೪೯II	ಮ.	೨೭III		೨೪		೨೦
8	F	೮	ಶು		೮	೪೪III	ಪೂ.	೨೫III		೨೫	ಜಿಲ್‌ಖಾಯದ್.	೨೧
9	S	೯	ಶ		೯	೪೧	ಉ.	೨೩	ವೃಶ್ಚಿಕ.	೨೬		೨೨
10	SUN	೧೦	ಆ		೧೦	೩೭III	ಹ.	೨೧I		೨೭		೨೩
11	M	೧೧	ಚ		೧೧	೩೫III	ಚಿ.	೨೦III		೨೮		೨೪
12	TU	೧೨	ಮ		೧೨	೩೪III	ಸ್ವಾ.	೨೧		೨೯		೨೫
13	W	೧೩	ಬು		೧೩	೩೫I	ವಿ.	೨೨III		೩೦		೨೬
14	TH	೧೪	ಗು		೧೪	೩೭	ಅ.	೨೫I		೧		೨೭
15	F	೧೫	ಶು		🌚	೪೦	ಜ್ಯೇ.	೨೯II		೨		೨೮
16	S	೧೬	ಶ	ಪುಷ್ಯ ಶುಕ್ಲ.	೧	೪೪	ಮೂ.	೩೪II		೩		೨೯
17	SUN	೧೭	ಆ		೨	೪೯	ಪೂ.	೪೦I		೪		೩೦
18	M	೧೮	ಚ		೩	೫೪	ಉ.	೪೬III		೫	ಜಿಲ್‌ಹಜ್.	೧
19	TU	೧೯	ಮ		೪	೫೯II	ಶ್ರ.	೫೩	(ಪೆರಾರ್ದೆ.)	೬		೨
20	W	೨೦	ಬು		೫	೬೦	ಧ.	೫೯I		೭		೩
21	TH	೨೧	ಗು		೫	೪II	ಶ.	೬೦		೮		೪
22	F	೨೨	ಶು		೬	೮III	ಶ.	೪III		೯		೫
23	S	೨೩	ಶ		೭	೧೧III	ಪೂ.	೯I		೧೦		೬
24	SUN	೨೪	ಆ		೮	೧೩III	ಉ.	೧೨II		೧೧		೭
25	M	೨೫	ಚ		೯	೧೪I	ರೇ.	೧೪II	ಧನು.	೧೨		೮
26	TU	೨೬	ಮ		೧೦	೧೩III	ಅ.	೧೫II		೧೩		೯
27	W	೨೭	ಬು		೧೧	೧೨	ಭ.	೧೫I		೧೪		೧೦
28	TH	೨೮	ಗು		೧೨	೯I	ಕೃ.	೧೩III		೧೫		೧೧
29	F	೨೯	ಶು		೧೩	೫I	ರೋ.	೧೧II		೧೬		೧೨
30	S	೩೦	ಶ		೧೪	III	ಮೃ.	೮III		೧೭		೧೩
31	SUN	೩೧	ಆ	ಕೃ.	೧	೫೦	ಆ.	೫		೧೮		೧೪

ಶರೀರಚಿಕಿತ್ಸೆ.

ಈ ನಮ್ಮ ದೇಶದಲ್ಲಿ ಹುಟ್ಟುವ ವಿವಿಧ ವೃಕ್ಷಾದಿಗಳ ಸ್ವರೂಪ ಪ್ರಯೋಗ ಮುಂತಾದವುಗಳನ್ನು ಕುರಿತು ಕಳದ ೮ ವರ್ಷಗಳ ಪಂಚಾಂಗಗಳಲ್ಲಿ ನಿಘಂಟುರೂಪವಾಗಿ ಸೂಚನೆಗಳನ್ನು ಕೊಡುತ್ತಾ ಬಂದೆವಷ್ಟೆ. ಈ ವರ್ಷ ಕೆಲವು ರೋಗಗಳ ಚಿಕಿತ್ಸಾಕ್ರಮವನ್ನು ಕುರಿತು ನಮ್ಮ ಪಂಚಾಂಗ ಓದುವವರ ಪ್ರಯೋಜನಾರ್ಥವಾಗಿ ಸ್ವಲ್ಪ ವಿವರವನ್ನು ಕೊಡುತ್ತೇವೆ. ರೋಗಗಳು ಹೆಚ್ಚಾಗಿ ಶರೀರಾರೋಗ್ಯವನ್ನು ಲಕ್ಷಿಸದೆ ನಡಿಯುವದರಿಂದ ಉಂಟಾಗುತ್ತವೆ. ಒಂದು ರೋಗಕ್ಕೆ ಹೇತುವು ಅನೇಕಸಾರಿ ಬಹು ಚಿಕ್ಕದ್ದೇ ಆಗಿರುತ್ತದೆ. ಆದದರಿಂದ ಚಿಕ್ಕದಿರುವಾಗಲೇ ಅದರ ಅಂಕುರವನ್ನು ಕಿತ್ತು ತೆಗದರೆ, ಅಥವಾ ಅಂಥಾ ಅಂಕುರ ಹುಟ್ಟುವ ಮುಂಚೆಯೇ ಅದು ಬಾರದ ಹಾಗೆ ಮುಂಜಾಗ್ರತೆ ತೆಗದು ಕೊಂಡರೆ, ಎಷ್ಟೋ ಔಷಧಗಳನ್ನು ವಾಡದುಳಿಸ ಬಹುದು. ಏವಂಚ ಏನೂ ಸುಳುಹು ಇಲ್ಲದೆ ಕಾಲವಶವಾಗಿ ಬರುವ ರೋಗಗಳಿಗೆ ಮನುಷ್ಯಯತ್ನವಿಲ್ಲ. ಆದರೂ ದೇವರು, ತನ್ನ ಚಿತ್ತವಿದ್ದ ಮಟ್ಟಿಗೆ, ನಮ್ಮ ಶರೀರದ ಆರೋಗ್ಯವನ್ನು ಕಾಪಾಡಿ ಕೊಳ್ಳುವ ಹಾಗೆಯೂ, ರೋಗಾದಿಗಳಿಂದ ಅದಕ್ಕುಂಟಾಗುವ ಅಪಾಯವನ್ನು ತಕ್ಕಷ್ಟು ನಿವಾರಿಸುವ ಹಾಗೆಯೂ ಉಪಾಯ ತೋರಿಸಿ ಕೊಡುತ್ತಿದ್ದಾನೆ.

ಶರೀರಾರೋಗ್ಯವೆಂಬದು ಸಹಜವಾದ್ದೂ ಸ್ವಾಭಾವಿಕವಾದ್ದೂ ಆಗಿರಲಾಗಿ, ರೋಗವು ಅಸಹಜವೂ ಅಸ್ವಾಭಾವಿಕವೂ ಆಗಿರುತ್ತದೆ. ಆದದರಿಂದ ನಮ್ಮ ಅನ್ನಪಾನಾದಿಗಳಲ್ಲಿ ಸಹಜವಾಗಿರುವದು ಆರೋಗ್ಯಕರವೇ, ಇದಕ್ಕೆ ಪ್ರತಿಕೂಲವಾಗಿ ನಡಿಯುವದು ಅನಾರೋಗ್ಯಕರವೇ. ಆದ ಪ್ರಯುಕ್ತ ಸ್ವಾಭಾವಿಕಶರೀರಪ್ರಕೃತಿಯು, ತನ್ನ ಶಕ್ತಿ ಇರುವ ಮಟ್ಟಿಗೆ, ರೋಗಗಳಿಗೆ ಆಸ್ಪದ ಕೊಡುವದಿಲ್ಲ; ಅದರ ಶಕ್ತಿ ಕುಂದಿದ್ದಲ್ಲಿ ಮಾತ್ರ ರೋಗವು ಪ್ರವೇಶವಾಗಿ ಬೆಳಿಯುತ್ತದೆ.

ಆದದರಿಂದ ನಾವು ಮೊದಲಾಗಿ ಲಕ್ಷ್ಯಿಸ ತಕ್ಕ ವಿಷಯವೇನಂದರೆ:—

ಶರೀರಾರೋಗ್ಯಕ್ಕೆ ಅಗತ್ಯವೇನು? ಎಂಬದೇ.

(Light and Darkness) **ಬೆಳಕೂ ಕತ್ತಲೆಯೂ.**—ಬೆಳಕು ಬಲವುಳ್ಳ ಉತ್ತೇಜಕವಾಗಿರುವದರಿಂದ ಪ್ರಾಣಾದಿಗಳ ಆರೋಗ್ಯಕ್ಕೂ ಸಸ್ಯಾದಿಗಳ ಫಲಪುಷ್ಟಿಗೂ ಒಳ್ಳೇದಾಗಿರುತ್ತದೆ. ಅದು ಪ್ರಾಣಿಗಳ ವಿಕಾಸಕ್ಕೂ ಸಂಪ್ರಾಣತೆಗೂ ವಿಶೇಷ ಅನುಕೂಲವಾಗಿದೆ. ಅದು ಮುಖ್ಯವಾಗಿ ದೃಷ್ಟಿಗೆ ಪ್ರವರ್ತಿಸುವದರಿಂದ ಅತಿರೇಕ ಪ್ರಕಾಶದಿಂದ ನೇತ್ರೇಂದ್ರಿಯವು ತಲ್ಲಣಿಸಿ, ದೃಷ್ಟಿಮಾಂದ್ಯವೂ ಕುರುಡುತನವೂ ಉಂ

ಟಾಗುತ್ತವೆ. ಕಠಿಣ ಬಿಸಿಲಿನಿಂದುಂಟಾಗುವ ಬಾಧೆಗೆ ಸಹಾ ಅತಿರೇಕ ಪ್ರಕಾಶವೇ ಕಾರಣವೆಂದು ಕೆಲವು ಪಂಡಿತರು ನೆನಸುತ್ತಾರೆ. ಸೂರ್ಯನನ್ನೇ ದೃಷ್ಟಿಸಿದ್ದರಿಂದ, ಅಪಸ್ಮಾರ ಉಂಟಾದದ್ದುಂಟು. ಆದರೆ ಆಹಾರಬಲ ಲಘುವಾದ ಅಥವಾ ಕಡಿಮೆಯಾದ ರೋಗಿಗಳಿಗೆ, ಮುಖ್ಯವಾಗಿ ಗಂಡಮಾಲೆ, ಗ್ರಹಣಿ ಇದ್ದರೆ, ಅಥವಾ ರಕ್ತಚಲನೆ ಸರಿ ಇಲ್ಲದಿದ್ದರೆ, ತಕ್ಕಷ್ಟು ಬೆಳಕು ಅವಶ್ಯ ಬೇಕು. ಆದರೆ ಕಣ್ಣುನೋವು, ತಲೆನೋವು ಮುಂತಾದ ಉರಿಯುಳ್ಳ ರೋಗಗಳಿಗೂ, ಘಾಯ ಶಸ್ತ್ರಪ್ರಯೋಗ ಇಂಥಾದ್ದರ ಸಮ್ಮಂಧ ವಿಶ್ರಾಂತಿ ಬೇಕಾಗುವ ರೋಗಗಳಿಗೂ ಕತ್ತಲೆ ಹಿತವೇ. ಕೆಲವು ತರದ ಜ್ವರಗಳಲ್ಲಿ ಸಹಾ ಕತ್ತಲೆ ಅಥವಾ ಮಂದ ಬೆಳಕು ಉಪಶಮನವೂ ನಿದ್ರೆಯೂ ಬರಮಾಡುವಂಥಾದ್ದಾಗಿ ಅವಶ್ಯವಾಗಿದೆ.

(Heat and Cold) **ಶೀತೋಷ್ಣಗಳು.**—ನಮ್ಮ ಜೀವಿಕೆಗೂ ನಮ್ಮ ವಿವಿಧ ಜೀವಪ್ರವರ್ತನಗಳಿಗೂ ಮಿತವಾದ ಉಷ್ಣ ಅವಶ್ಯವಾಗಿದೆ. ಉಷ್ಣವು ಪ್ರಾಣಿಗಳಲ್ಲಿ ಸಜಾತವಾಗಿರುವದರಿಂದ, ಅದರ ಮಿತವು ಮೀರಿ ಹ್ಯಾಗೆ ಹೆಚ್ಚುತ್ತದೋ ಹಾಗೆ ಅದರ ವಿಕಾಸವೂ ಇಂದ್ರಿಯಗಳ ಪ್ರಚಾರವೂ ಹೆಚ್ಚಿ, ಅಶಕ್ತಿಯೂ ಕ್ಷೀಣತೆಯೂ ಬರುವದು. ಶೀತವು ಇದಕ್ಕೆ ಪೂರ್ಣ ಪ್ರತಿಕೂಲವೇ.

ಶರೀರಚಿಕಿತ್ಸೆಯಲ್ಲಿ ಶಿತೋಷ್ಣಗಳನ್ನು ಪ್ರಯೋಜನಕರವಾಗಿ ಉಪಯೋಗಿಸುತ್ತಾರೆ. ಬೆವರು ಹುಟ್ಟಿಸುವದಕ್ಕೆ ಬಿಸಿ ನೀರಿನ ಸ್ನಾನವನ್ನೂ, ಗಂಟ್ಲುಹುಣ್ಣು, ಶ್ವಾಸಕೋಶದಾಹ ಮತ್ತು ಸ್ತಬ್ಧತೆ ಮುಂತಾದ್ದಕ್ಕೆ ಉಬ್ಬೆಯ ಹೊಗೆಯನ್ನೂ, ಹಲ್ಲುನೋವು, ಕಿವಿನೋವು, ಉದರಶೂಲೆ ಮುಂತಾದ ವಿವಿಧ ವೇಧನೆಗಳಿಗೆ ಮದೋಷ್ಣ ಶೇಕವನ್ನೂ, ಬೇರೆ ಬೇರೆ ತರದ ಹುಣ್ಣು, ಕುರು, ಮೊಳೆರೋಗವೆಂಬ ಮೂಲವ್ಯಾಧಿ ಮುಂತಾದ್ದಕ್ಕೆ ಬಿಶಿ ಲೇಪ, ಪೋಲ್ಟಿಸ ಇತ್ಯಾದಿಯನ್ನೂ ಮಾಡಿಸುತ್ತಾರೆ. ಶೀತಪ್ರಯೋಗದಿಂದ ಅನ್ನಕೋಶ ಮುಂತಾದ ಅಂತರೇಂದ್ರಿಯಗಳಿಂದ ಬರುವ ನೆತ್ತರನ್ನೂ ನೋವನ್ನೂ ನಿಲ್ಲಿಸುತ್ತಾರೆ. ಶೀತ ಘಾಳಿಯೂ ನೀರೂ ನೀರುಗಡ್ಡೆಯೂ ಇಂಥಾದ್ದರಿಂದ ರಕ್ತಧಾರೆ ಕಟ್ಟಲಿಕ್ಕಾಗುತ್ತದೆ. ಸಾಧಾರಣವಾಗಿ ಪ್ರತಿ ಪ್ರಾತಃಕಾಲ ತಣ್ಣೀರಿನಿಂದ ಮೈತೊಳದು ಉಜ್ಜಿ ಕೊಳ್ಳುವದು ಶರೀರಕ್ಕೆ ಹಿತಕರವಾಗಿರುತ್ತದೆ.

(Climate) **ಹವೆ, ವಾಯುಗುಣ.**—ಧೂಳು, ಕಸ, ಕೆಸರು, ಬೊಗಸೆ, ಕೊಳಕು, ಲೋಹಾದಿ ಪದಾರ್ಥಗಳ ಅಣು ಮುಂತಾದ್ದೇನೂ ಇಲ್ಲದ ನಿರ್ಮಲ ಘಾಳಿ ಆರೋಗ್ಯಕ್ಕೆ ಒಳ್ಳೇದು. ರೋಗದಿಂದ ಅಶಕ್ತವಾದ ಅಥವಾ ಆಗಲಿಕ್ಕಿರುವ ಶರೀರಧಾತುಗಳು ಘಾಳಿಯ ವ್ಯತ್ಯಾಸದಿಂದಾಗಲೀ, ತ್ಯಾವದಿಂದಾಗಲೀ, ಘಾಳಿಯ ಒತ್ತಿನಿಂದಾಗಲೀ ಬಾಧಕ ಪಡುತ್ತವೆ. ಸಾಧಾರಣ ಉಷ್ಣಪ್ರದೇಶವು ಕ್ಷಯರೋಗದವರಿಗೂ ಮೇಹದ ಹುಣ್ಣುಗಳಿರುವವರಿಗೂ ವಾತವುಳ್ಳವರಿಗೂ ತಕ್ಕದೆಂದು ಹೇಳುತ್ತಾರೆ. ಕಲಿಜದ ವ್ಯಾಧಿ, ಅಗ್ನಿಮಾಂದ್ಯ, ಕೀಳ್ಕರುಳುಗಳ ವ್ಯಾಧಿ ಮೊದಲಾದವುಗಳಿಗೆ ತಂಪು ಪ್ರದೇಶ ಒಳ್ಳೇದು. ಒಣ ಪ್ರದೇಶವು ಶಿಥಿಲ ಶರೀರಪ್ರಕೃತಿಗೂ, ಉಬ್ಬಸ, ದೀರ್ಘಕಾಲದ

ನೆಗಡಿ ಮುಂತಾದ ಕಫ ಹುಟ್ಟುವ ರೋಗಗಳಿಗೂ ತಕ್ಕದ್ದು. ನದಿಗಳಿಂದಾಗಲೀ ಸಮುದ್ರದ ಕಡೆಯಿಂದಾಗಲೀ ಬರುವ ಘಾಳಿ ವಿಸ್ತಾರವಾದ ಬೈಲುಭೂಮಿಯ ಕಡೆಯಿಂದ ಬರುವ ಘಾಳಿಗಿಂತ ಆರ್ದ್ರವಾಗಿರುತ್ತದೆ. ದೀಪ, ಗಾಸ, ಇದ್ದಲಿನ ಬೆಂಕಿ ಮುಂತಾದ್ದು ಇರುವಲ್ಲಿ ಘಾಳಿ ನಿರ್ಮಲವಾಗಿರದ್ದರಿಂದ ಹೆಚ್ಚು ಹೊಸ ಘಾಳಿ ಬರಗೊಡಿಸ ಬೇಕು. ಮಣ್ಣಿನಲ್ಲಿಯೂ ಮೂಲಿಕೆಗಳಲ್ಲಿಯೂ ಆರೋಗ್ಯಕ್ಕೆ ತಕ್ಕಷ್ಟು ಗುಣದೋಷಗಳುಂಟು. ಕೆಸರಿನ ಮತ್ತು ಜವುಗು ನೆಲದಿಂದಲೂ, ಮರ ಪೊದೆಗಳಿಂದ ಎಲೆಗಳು ಉದುರಿ ಬಿದ್ದು ಕೊಳಿಯುವಂಥಾ ನೆಲದಿಂದಲೂ ರೋಗೋತ್ಪಾದಕ ವಾಯು ಹೊರಟು, ಆರೋಗ್ಯ ಕೆಡಿಸುತ್ತದೆ.

(Exercise) **ಕಾಯಕಷ್ಟ, ವಿಹಾರ ಮುಂತಾದ್ದು.**— ಇದು ಆರೋಗ್ಯಕರವಾಗಿಯೂ ರೋಗೋಪಶಮನಕರವಾಗಿಯೂ ಇರುತ್ತದೆ. ಸಾಧಾರಣವಾಗಿ ಕೂತುಕೊಂಡೇ ಇರುವ ಅಭ್ಯಾಸವು ಅಜೀರ್ಣ, ನಿಸ್ತೇಜತ್ವ, ಪಿತ್ತೋದ್ರೇಕ, ಕಲಿಜವ್ಯಾಧಿ, ಪಾರ್ಶ್ವವಾಯು, ಬೆನ್ನೆಲುಬಿನ ಬಾವು ಮುಂತಾದ ರೋಗಗಳಿಗೆ ಆಸ್ಪದವಾಗುತ್ತದೆ. ಶರೀರರಕ್ಷಣೆಗೆ ಅಗತ್ಯವಾದ ವಿಹಾರ ಮೊದಲಾದ ಸಾಧನೆಗಳನ್ನು ಉಪೇಕ್ಷಿಸಿ, ಆಹಾರದಲ್ಲಿ ಮಿತವಾಗಿರದ್ದರಿಂದ ದೀರ್ಘಕಾಲದ ರೋಗಗಳು ಹೆಚ್ಚಾಗಿ ಉಂಟಾಗುತ್ತವೆ. ಶಾರೀರಕಸಾಧನೆಯಿಂದ ನರಗಳಿಗೆ ಬಲವೂ ಉತ್ತೇಜಕ ಗುಣವೂ ಬರುತ್ತವೆ, ರಕ್ತಚಲನೆ ಸರಳವಾಗುತ್ತದೆ, ಆಹಾರದ ರುಚಿ ವರ್ಧಿಸುತ್ತದೆ. ವಾಯು ಮುಂತಾದ ಶರೀರಸ್ತಬ್ಧಕ ರೋಗಗಳು ತಕ್ಕಷ್ಟು ಶಾರೀರಕಸಾಧನೆ ಮಾಡೋಣದರಿಂದ ಗುಣವಾಗುತ್ತವೆ. ಆದರೆ ಮಿತಿ ಮೀರಿ ಸಾಧನೆ ಮಾಡುವದರಿಂದ ಬಹಳ ದಣುವೂ ಅಶಕ್ತಿಯೂ ಉಂಟಾಗುತ್ತವೆ.

ಈ ಸಾಧನೆ ಮೂರು ವಿಧದ್ದು: ಕರ್ತರಿ, ಕರ್ಮಣಿ, ಮಿಶ್ರವೆಂಬದಾಗಿ ಹೇಳ ಬಹುದು; ಹ್ಯಾಗಂದರೆ—ತಿರುಗಾಡುವದು, ಹಾಡುವದು, ಓಡುವದು ಇತ್ಯಾದಿ ಮೊದಲನೇ ತರದ್ದು. ಬಂಡೀ ಮೇಲೆ, ದೋಣೀ ಮೇಲೆ ಇತ್ಯಾದಿ ಸವಾರಿ ಮಾಡುವದು ಎರಡನೇ ತರದ್ದು. ಕುದುರೆ ಸವಾರಿ ಮೂರನೇ ತರದ್ದು. ಒಳ್ಳೇ ಘಾಳಿಗೆ ತಿರುಗಾಡುವದು ಸಹಜವಾದ ಸಾಧನೆಯಾಗಿದೆ. ಇದು ಆರೋಗ್ಯವೂ ಪುಷ್ಟಿಯೂ ಉಳ್ಳವರಿಗಾದರೂ ಅಶಕ್ತರಿಗಾದರೂ ಸರಿಯಾಗಿ ಅನುಕೂಲವೂ ಹಿತಕರವೂ ಆಗಿದೆ. ಪಾದಚಾರಿಯಾಗಿ ತಿರುಗಾಡುವದು ಬಹಳ ಆಯಾಸಕರದ್ದಾದರೆ, ಗಾಡಿಯಲ್ಲಿ ಸವಾರಿ ಮಾಡ ಬಹುದು. ಜೀರ್ಣಬಲವಿಲ್ಲದವರಿಗೆ ಕುದುರೆಸವಾರಿ ಒಳ್ಳೇದು.

ವಿಹಾರ ಮಾಡ ತಕ್ಕ ಕಾಲವನ್ನು ಕುರಿತು ನಿಷ್ಕರ್ಷೆ ಹೇಳ ಕೂಡದು. ಆದರೆ ಹ್ಯಾಗೂ ಬೆಳಗಾತವಾಗಲೀ ದಿವಸದ ಮಧ್ಯ ಕಾಲದಲ್ಲಿಯಾಗಲೀ ೨ ತಾಸಿಗೆ ಕಡಿಮೆಯಾಗದಷ್ಟು ಸಮಯವಾದರೂ ನಿರ್ಮಲವಾದ ಘಾಳಿಯಲ್ಲಿ ಕಳಿಯ ಬೇಕು. ದುರ್ಬಲಶರೀರಿಗಳು ಮಳೆ, ಘಾಳಿ ಮುಂತಾದ್ದರ ದೆಶೆಯಿಂದ ಹೊರಡ ಕೂಡದಿದ್ದರೆ, ಮನೆಯೊಳಗಾದರೂ ಕಿಟಿಕಿಗಳನ್ನು ತೆರದು ತಿರುಗಾಡ ಬೇಕು. ಊಟ ಮಾಡಿದಾಕ್ಷಣ

ವಿಹರಿಸುವದು ಒಳ್ಳೇದಲ್ಲ. ಆಹಾರ ಜೀರ್ಣವಾಗುವ ವರೆಗೆ ಎರಡು ಮೂರು ತಾಸು ತಡದು ವಿಹಾರ ಮಾಡಿದರೆ, ಚೇತನಕರವೂ ವಿಶ್ರಾಂತಿಕರವೂ ಆಗಿದೆ. ಜ್ಞಾನೇಂದ್ರಿಯಗಳ ಮತ್ತು ಶರೀರದ ಸಾಧನೆಯು ಆರೋಗ್ಯಕ್ಕೂ ಸೌಖ್ಯಕ್ಕೂ ಅಗತ್ಯವಾಗಿರುವದರಿಂದ ಆಹಾರ ತೆಗೆದು ಕೊಳ್ಳುವಂತೆ ವಿಹಾರಾದಿಗಳನ್ನು ಸಹಾ ಮಾಡ ಬೇಕು. ಆದರೆ ತಕ್ಕಷ್ಟು ವಿಹಾರ ಕಾಯಕಷ್ಟಗಳು ಮಾಡಿದನಂತರ ದೇಹಕ್ಕೆ ತಕ್ಕ ವಿಶ್ರಾಂತಿಯನ್ನು ಸಹ ಕೊಡ ಬೇಕು.

(Clothing) **ಉಡಿಗೆ ತೊಡಿಗೆ.**—ಮೈ ಮೇಲೆ ಹಾಕಿ ಕೊಳ್ಳುವ ವಸ್ತ್ರಗಳು ಬೇಸಿಗೆ ಕಾಲದಲ್ಲಿ ಬಹಳ ದಪ್ಪವಾಗಿರ ಬಾರದು, ಶೀತ ಕಾಲದಲ್ಲಿ ಬಹಳ ತೆಳ್ಳಗೆ ಆಗಿರ ಬಾರದು. ಮೈ ಮೇಲೆ ಹಾಕಿ ಕೊಳ್ಳ ತಕ್ಕ ವಸ್ತ್ರವು ಹಗುರವಾಗಿಯೂ ಬೆಚ್ಚಗಾಗಿಯೂ ನಿರ್ಮಲವಾಗಿಯೂ ಇರ ಬೇಕಾದ್ದರಿಂದ, ಅದನ್ನು ಕಾಲಕ್ಕೂ ಪ್ರದೇಶಕ್ಕೂ ತಕ್ಕದಾಗಿ ಬದಲಿಸ ಬೇಕು. ಯೌವನಸ್ಥ ಮತ್ತು ಮೈಪುಷ್ಟಿಯುಳ್ಳ ಜನರಿಗೆ ಹೆಚ್ಚು ವಸ್ತ್ರ ಬೇಕಾಗುವದಿಲ್ಲ. ಆದರೆ ಶುಷ್ಕಶರೀರಿಗಳಿಗೂ ವೃದ್ಧರಿಗೂ ಬೆಚ್ಚಗಾದ ವಸ್ತ್ರ ಅಗತ್ಯ. ಉಣ್ಣೇ ವಸ್ತ್ರ ಬಾಲಕರೂ ಮುದಿ ಪ್ರಾಯದವರೂ ಹಾಕಿ ಕೊಳ್ಳ ಬೇಕು. ಮತ್ತು ಕ್ಷಯರೋಗ, ಎದೆವ್ಯಾಧಿ, ವಾತ, ಅಜೀರ್ಣ, ಅತಿಸಾರ, ರಕ್ತಾತಿಸಾರ ಇತ್ಯಾದಿ ಉಳ್ಳಂಥವರು, ಯಾವ ಪ್ರಾಯದವರಾದರೂ, ರೋಮವಸ್ತ್ರವನ್ನು ಧರಿಸಿ ಕೊಳ್ಳಲೇ ಬೇಕು. ಉಣ್ಣೇ ವಸ್ತ್ರವು ಮೈಗೆ ತಾಗಿ (ಅಂದರೆ ಬರೇ ಮೈಯಲ್ಲಿ) ಧರಿಸಿ ಕೊಳ್ಳ ಬೇಕು. ಬಹಳ ಶ್ರಮ ಪಟ್ಟು ಯಥೇಷ್ಟ ಬೆವರು ಬಂದು, ಮೈ ಎಲ್ಲಾ ತ್ಯಾವವಾದಾಗ ನಾರಿನ ವಸ್ತ್ರವಾಗಲೀ ಹತ್ತಿಯ ವಸ್ತ್ರವಾಗಲೀ ಹಾಕಿ ಕೊಂಡಿದ್ದರೆ, ಅಸೌಖ್ಯಕ್ಕೆ ಕಾರಣವಾಗುತ್ತದೆ. ತಕ್ಕಷ್ಟು ವಸ್ತ್ರಾದಿಗಳನ್ನು ಧರಿಸಿ ಕೊಂಡಿರುವದು ಮೈಯ ನಿರ್ಮಲತೆಗೂ ಭದ್ರತೆಗೂ ತಕ್ಕದ್ದಾಗಿರುತ್ತದೆ. ಸ್ವಲ್ಪ ವಸ್ತ್ರ ಮಾತ್ರವೇ ಹೊದ್ದು ಕೊಂಡು, ಘಾಳಿಗಾಗಲೀ ತಣಸಿಗಾಗಲೀ ಮೈ ಬಿಡುವ ಅಭ್ಯಾಸ ಶರೀರಕ್ಕೆ ಒಳ್ಳೇದೆಂದೆಣಿಸುವದು ತಪ್ಪಾಗಿರುತ್ತದೆ.

(Bathing) **ಸ್ನಾನ.**—ನಿರ್ಮಲತೆಯೂ ಆರೋಗ್ಯಕ್ಕೆ ಅಗತ್ಯ. ಶರೀರದ ಕಲ್ಮಷ ಬೆವರಿನ ಮೂಲಕವಾಗಿಯೂ ಹೊರಗೆ ಬರುತ್ತದೆ. ಮೈಯಲ್ಲೇ ಇರಗೊಟ್ಟರೆ, ಅದು ಆರಿ, ತುರಿ ಹುಟ್ಟಿ, ಬೆವರು ಬರುವ ರೋಮಕೂಪಗಳನ್ನು ಮುಚ್ಚಿ ಬಿಡುತ್ತದೆ. ಇದರಿಂದ ಬೆವರು ಬರುವದಕ್ಕೆ ಮತ್ತೂ ಅಡ್ಡಿಯಾಗುವದಲ್ಲದೆ ಒಳಗಣ ಕಲ್ಮಷ ಬಾಧಕವಾಗಿ ಒಳಗೆ ಉಳಿದು, ಅಥವಾ ಕರುಳು ಕಿರುಹೊಟ್ಟೆ ಶ್ವಾಸಕೋಶ ಮುಂತಾದ್ದರಲ್ಲಿ ಶೇರಿ, ವಿವಿಧ ತರದ ಅಸ್ವಸ್ಥ ಬರ ಮಾಡುತ್ತದೆ. ಇದು ಹೊರ್ತು ತುರಿ ಖಜ್ಜಿ ಹುಣ್ಣು ಮುಂತಾದ ಚರ್ಮರೋಗಗಳು ಶರೀರದ ಮಲಿನತೆಯಿಂದಲೇ ಉಂಟಾಗುತ್ತವೆ. ಇದಲ್ಲದೆ ಸರ್ವಾಂಗದಲ್ಲಿರುವ ರೋಮಕೂಪಗಳು, ದೇಹಪ್ರಕೃತಿಯ ಅಥವಾ ಘಾಳಿಯ ವಿದ್ಯಮಾನದ ಪ್ರಕಾರ, ತ್ಯಾವವನ್ನು ಎಳ ಕೊಳ್ಳುತ್ತವೆ ಅಥವಾ ಹೊರ ಹಾಕುತ್ತವೆ. ಈ ರೋಮಕೂಪಗಳಿಂದ ಒಂದು ತರದ ಶ್ವಾಸೋಶ್ವಾಸ ಸಹಾ ಆಗು

ತ್ತದೆ. ಆದ್ದರಿಂದ ಜಲಸ್ನಾನದಿಂದ ಮೈಯನ್ನು ಶುಚಿಯಾಗಿರಿಸ ಬೇಕು. ತಣ್ಣೀರು ಸ್ನಾನ ಮಾಡುವವರಿಗೆ ಕೆಳಗಿನ ಸೂಚನೆಗಳು ನೆನಪಿರ ತಕ್ಕದ್ದು:

೧. ಊಟಕ್ಕೆ ತುಸ ಹೊತ್ತು ಮುಂಚೆ ಅಥವಾ ಊಟವಾದ ಕೂಡಲೇ ಆಗಲೀ ರಾತ್ರಿಯಲ್ಲಿ ಆಗಲೀ ಸರ್ವಥಾ ಮಿಂದು ಕೊಳ್ಳ ಬಾರದು.

೨. ಮಿಾಯ ತಕ್ಕ ಕಾಲವು ಇಷ್ಟೆಂಬದು ಆಯಾಯ ಜನರ ದೇಹಪ್ರಕೃತಿ ನೋಡಿ ನಿಶ್ಚೈಸ ಬೇಕು. ಸಾಧಾರಣವಾಗಿ ಹೇಳುವದಾದರೆ, ೨ ಮಿನಿಟಗಿಂತ ಕಡಿಮೆ ಮತ್ತು ಅಕ್ಕಿಂತ ಹೆಚ್ಚು ಹೊತ್ತು ತಣ್ಣೀರಿನಲ್ಲಿ ಕಳೆಯ ಬಾರದು. ತಣ್ಣೀರಿನಲ್ಲಿ ಶೀತ ಅಥವಾ ಅಶಕ್ತಿಯಾದರೆ, ಅಥವಾ ನಾಡಿ ಮೆಲ್ಲಗೆ ಬಡಿಯುವಂಥಾದ್ದಾದರೆ, ಅಥವಾ ತಲೆವೇದನೆ ಮುಂತಾದ್ದು ಉಂಟಾಗುತ್ತಲೇ ಬಿಟ್ಟು ಬಿಡ ಬೇಕು.

೩. ಗುಂಡಿಗೆಯ ಅಥವಾ ಶ್ವಾಸಕೋಶದ ರೋಗವುಳ್ಳವರಾಗಲೀ ಉಂಟಾಗುವ ಸಂಭವವಿದ್ದವರಾಗಲೀ ಅಥವಾ ರುದ್ರವಾಯುವೆಂಬ ಅಪಸ್ಮಾರ ಉಳ್ಳವರಾಗಲೀ ತಣ್ಣೀರು ಸ್ನಾನ ಮಾಡುವದಾದರೆ, ಬಹಳ ಎಚ್ಚರಿಕೆಯಾಗಿರ ಬೇಕು; ಇಲ್ಲದಿದ್ದರೆ ಮೋಸ ಬಂದೀತು.

ಶರೀರಸೌಖ್ಯವೂ ಪುಷ್ಟಿಯೂ ಉಳ್ಳವರು ತಣ್ಣೀರು ಮಿಾಯುವ ಅಭ್ಯಾಸ ಮಾಡಬಹುದು. ಆದರೆ ಜನ್ಮರೋಗಿಗಳೂ ಮೈಗುಂದಿದವರೂ ಉಗುರುಬೆಚ್ಚಗೆಗಿಂತ ತಣ್ಣಗಾದ ನೀರು ಮಿಾಯುವದು ಒಳ್ಳೇದಲ್ಲ.

ಸಾಧಾರಣವಾಗಿ ಬೆಳಗಾತ ನಿದ್ರೆಯಿಂದ ಎಚ್ಚತ್ತು, ಮೈಯ ಬಿಸುಪು ಇರುವಾಗಲೇ ಮಿಾಯ ಬೇಕು. ಮಿಂದಾಗುತ್ತಲೇ ನೀರಿನ ಪಶೆ ಇಷ್ಟಾದರೂ ಉಳಿಯದ ಹಾಗೆ, ಚನ್ನಾಗಿ ಮೈ ಒರಸಿ ಕೊಂಡು, ಹೊರಗಿನ ಘಾಳಿಯಾಗಲಿ ಶೀತವಾಗಲಿ ಬಾರದ ಹಾಗೂ ಮೈಯಲ್ಲಿ ಉಷ್ಣತೆ ಹೊರಡುವ ಹಾಗೂ ತಕ್ಕ ಸಮಯ ಮೈಮುಚ್ಚಿಕೊಂಡಿರ ಬೇಕು. ಬಳಿಕ ೧ ಯಾ ೨ ತಾಸು ವರೆಗಾದರೂ ಸ್ವಲ್ಪ ಶಾರೀರಕಸಾಧನೆ ಮಾಡ ಬೇಕು.

(Sleep) **ನಿದ್ರೆ.**—ನಿದ್ರೆ ದೇಹಕ್ಕೆ ಉತ್ತಮವಾದ ಕ್ಷೇಮಸಂಗ್ರಹಕರ ಅವಸ್ಥೆಯಾಗಿರುತ್ತದೆ. ಇದರಿಂದ ದಣಿದ ಶರೀರಕ್ಕೆ ಹೊಸ ಬಲ ಉಂಟಾಗುತ್ತದೆ; ಮರ್ಮಸ್ಥಾನಗಳು ಚೇತನ ಹೊಂದುತ್ತವೆ, ಮಾನಸಿಕ ಶಕ್ತಿಗಳು ಸ್ಫುರಿಸುತ್ತವೆ, ದೇಹ ವರ್ಧನೆಯಾಗುತ್ತದೆ. ೬ ತಾಸಿಗೆ ಕಡಿಮೆಯಾಗದ, ೮ಕ್ಕೆ ಮಿಾರದ ಕಾಲ ಮಲಗುವದು ಸೌಖ್ಯಕರವೇ. ಒಳ್ಳೇ ನಿದ್ರೆ ಬರ ಬೇಕಾದರೆ, ತಲೆ ತುಂಬ ಆಲೋಚನೆಯುಳ್ಳವನಾಗಿ, ಅಥವಾ ಹೊಟ್ಟೆ ತುಂಬ ಉಂಡು, ಮಲಗ ಬಾರದು; ಹಗಲಿನ ಹೊತ್ತು ತಕ್ಕಷ್ಟು ಕಾಯಕಷ್ಟ ಮಾಡಿದರೆ, ರಾತ್ರೆಯ ನಿದ್ರೆಗೆ ಅನುವಾಗುತ್ತದೆ. ಮಲಗುವ ಕೋಣೆಯು ನಿರ್ಮಲವಾಗಿಯೂ ಘಾಳಿಯ ಚಲನೆಗೆ ನಿರ್ವಿಘ್ನವಾಗಿಯೂ, ಮಲಗಿ ಕೊಳ್ಳ ತಕ್ಕ ವಸ್ತ್ರಗಳು ಶುಚಿಯಾಗಿಯೂ, ದೇಹವು ತಂಪಾಗಿಯೂ, ಕಾಲುಗಳು ಬೆಚ್ಚಗಾಗಿಯೂ ಇರುವದು ನಿದ್ರೆಗೆ ಅನುಕೂಲವು.

(Diet) ಪಥ್ಯವು.—ದೇಹಕ್ಕೆ ತಕ್ಕ ಜೀರ್ಣಬಲವಿರುವದು ಆರೋಗ್ಯಕ್ಕೆ ಎಲ್ಲಾದಕ್ಕಿಂತ ಅವಶ್ಯವೇ. ತಿಂದ ಆಹಾರವು ಜೀರ್ಣವಾಗುವದು ಶರೀರದ ಬಾಳುವಿಕೆಗೂ ಬೆಳವಣಿಕೆಗೂ ಅಗತ್ಯವಾಗಿರುವದರಿಂದ, ಮತ್ತು ಜೀರ್ಣಕೋಶವು ಇಡೀ ಶರೀರಕ್ಕೆ ಸಮ್ಮಂಧಿಸಿರುವದರಿಂದ, ಯಾವ ರೋಗವಾದರೂ ಜೀರ್ಣೇಂದ್ರಿಯಕ್ಕೆ ತಟ್ಟದೆ ಉಂಟಾಗುವದಿಲ್ಲ. ಆದದರಿಂದ ಜೀರ್ಣೇಂದ್ರಿಯಕ್ಕೆ ಏನಾದರೂ ಕೊರತೆ ಬಂತಂದರೆ, ರೋಗ ಪ್ರವೇಶವಾಯಿತೆಂದು ಹೇಳ ಬೇಕು. ಮತ್ತು ದಿನೇ ದಿನೇ ನಮ್ಮ ಶರೀರದ ಸವೆಯೋಣವನ್ನು ಭರ್ತಿ ಮಾಡುವ ಹಾಗೆಯೂ, ಜೀರ್ಣೇಂದ್ರಿಯ ಕೆಡದ ಹಾಗೆಯೂ ಆಹಾರವು ನಮಗೆ ಬೇಕು. ಇದು ಪರಿಮಾಣದಲ್ಲಿ ಮಿತವಾಗಿಯೂ, ಗುಣದಲ್ಲಿ ಆರೋಗ್ಯಕರವಾಗಿಯೂ ಇರ ಬೇಕು.

ಮಾಂಸಾಹಾರವು ಸಸ್ಯಾದಿಗಿಂತಲೂ ಬೇಗ ಜೀರ್ಣವಾಗುತ್ತದೆ. ಮತ್ತು ಒಂದು ರೂಪಾಯಿತೂಕದಷ್ಟು ಮಾಂಸ ಒಂದು ರೂಪಾಯಿತೂಕದಷ್ಟು ಯಾವ ಸಸ್ಯಾದಿಗಳ ಫಲಕ್ಕಿಂತಲಾದರೂ ಹೆಚ್ಚು ಪೋಷಕಶಕ್ತಿಯುಳ್ಳದ್ದಾಗಿ, ಶರೀರಕ್ಕೆ ಬಹಳ ಉತ್ತೇಜಕವಾಗಿರುತ್ತದೆ. ಮತ್ಸ್ಯವು ಮಾಂಸದಷ್ಟು ಆರೋಗ್ಯಕರವಲ್ಲ, ಆದರೆ ಅದಕ್ಕಿಂತ ಬೇಗ ಜೀರ್ಣವಾಗುತ್ತದೆ. ಹಾಲು ಮತ್ತು ಗೋಧಿಯ ರೊಟ್ಟಿ ಮಾಂಸಕ್ಕೂ ಸಸ್ಯಾದಿಗೂ ನಡುವಿನ ಸ್ವಭಾವದ ಆಹಾರವಾಗಿದ್ದು, ತಕ್ಕಷ್ಟು ಪೋಷಕ ಗುಣವುಳ್ಳದ್ದು. ಧಾನ್ಯವು ಜೀರ್ಣಕ್ಕೆ ಮಂದವಾಗಿದ್ದರೂ, ಅಷ್ಟು ಉಷ್ಣಕರವಲ್ಲ. ಬಟಾಟೆ ಮುಂತಾದ ಕಂದಮೂಲಗಳು ತಕ್ಕಷ್ಟು ಪುಷ್ಟಿಕರವಾಗಿ, ಚನ್ನಾಗಿ ಬೇಯಿಸಿದ ಪಕ್ಷಕ್ಕೆ, ಶರೀರಕ್ಕೆ ಬಾಧಕಕರವಲ್ಲ. ಹಣ್ಣುಗಳು ಮಾಗಿ ಚನ್ನಾಗಿ ಪಕ್ವವಾದಲ್ಲಿ, ಅಲ್ಪ ಸ್ವಲ್ಪ ತಿಂದರೆ ದೋಷವಿಲ್ಲ.

ಬರೀ ಮಾಂಸವು ಆಗಲಿ, ಬರೀ ಸಸ್ಯಾದಿಗಳು ಆಗಲಿ ಶರೀರಕ್ಕೆ ಅಷ್ಟು ಒಳ್ಳೇದಲ್ಲಾ: ಅದೂ ಇದೂ ಕೂಡಿದ ಆಹಾರವು ಶರೀರಕ್ಕೆ ಹಿತವೂ ಆರೋಗ್ಯಕರವೂ ಆಗಿರುತ್ತದೆ. ತಿನ್ನುವ ಆಹಾರವು ಒಂದಿಷ್ಟು ಕಡಿಮೆಯಾದರೂ ಚಿಂತಿಲ್ಲ, ಜೀರ್ಣಶಕ್ತಿಗೆ ಹ್ಯಾಗೂ ಮಿಕ್ಕ ಬಾರದು. ಆಹಾರ ಮೆಲ್ಲಗೆ ತಿನ್ನ ಬೇಕು, ಮತ್ತು ಚನ್ನಾಗಿ ಜಗಿಯದೆ ನುಂಗ ಬಾರದು. ಪ್ರತಿ ದಿವಸ ಉಣ್ಣುವ ಕಾಲದ ವಿಷಯದಲ್ಲಿ ನಿಯತವಾಗಿರ ಬೇಕು: ಇಂಥಾ ಸಮಯದಲ್ಲಿ ಉಣ್ಣುವ ಅಭ್ಯಾಸ ಮಾಡಿದರೆ, ಅದನ್ನು ಬಹುಶಾ ಬದಲಾಯಿಸುತ್ತಿರ ಬಾರದು. ಅಜೀರ್ಣದಿಂದುಂಟಾಗುವ ರೋಗಗಳೆಲ್ಲಾ ವಿಶೇಷವಾಗಿ ಬಾಲ್ಯಪ್ರಾಯದಲ್ಲೇ ಹುಟ್ಟುವದರಿಂದ, ಮಕ್ಕಳ ರುಚಿಯೂ ಹಶುವೂ ಕೆಡದ ಹಾಗೆ ಜಾಗ್ರತೆ ಇಡ ಬೇಕು. ಯಾಕಂದರೆ ಜೀರ್ಣಬಲವುಳ್ಳವರಿಗೆ ಹಶುವೂ ರುಚಿಯೂ ಉಂಟು, ಅಜೀರ್ಣವಾದರೆ, ಅವೆರಡೂ ನೀಗಿ ಹೋಗುವವು. ಊಟಕ್ಕೆ ಬಹಳ ಜಲದ್ರವ್ಯ ತಕ್ಕೊಳ್ಳುವದು ಜೀರ್ಣಕ್ಕೆ ಅಷ್ಟು ಒಳ್ಳೇದಲ್ಲ. ಹೊಟ್ಟೆ ತುಂಬ ಉಣ್ಣದ ಹಾಗೂ, ಒಂದು ಊಟದ ತರುವಾಯ ಇನ್ನೊಂದು ಊಟಕ್ಕೆ ಮೊದಲು ಜೀರ್ಣಕ್ಕೆ ತಕ್ಕ ಸಮಯ ಬಿಡುವ ಹಾಗೂ, ಎಚ್ಚರಿಕೆ ಇಡ ಬೇಕು. ಊಟಕ್ಕೆ

ಮುಂಜೆಯಾಗಲೀ ಊಟವಾದ ಕೂಡಲೆಯಾಗಲೀ ಶರೀರಸಾಧನೆ ಮಾಡ ಬಾರದು; ಅಥವಾ ಊಟ ಮಾಡಿದಾಕ್ಷಣ ನಿದ್ರೆ ಮಾಡ ಬಾರದು.

ಎಲ್ಲಾ ಪಾನಗಳಲ್ಲಿ ತಣ್ಣೀರು ಮುಖ್ಯವಾದ್ದು. ನಾವು ದಾಹವಿದ್ದಷ್ಟೆ ಕುಡಿಯ ಬೇಕು. ಊಟದ ಮೊದಲು ಕುಡಿದರೆ, ನಮ್ಮ ಜೀರ್ಣಬಲವು ಮಂದವಾಗುವದು. ಶರೀರ ಉಷ್ಣವಾಗಿ ಹೋದ ಸಮಯದಲ್ಲಿ ತಣ್ಣೀರು ಕುಡಿಯ ಬಾರದು. ಮತ್ತು ಬಿಸಿಯಾದ ಚಾ ಆಗಲೀ ತಣ್ಣಗಾದ ಮಾಂಸಸಾರವಾಗಲೀ ಕುಡಿಯುವದು ಒಳ್ಳೇದಲ್ಲ. ಊಟದ ಸಮಯದಲ್ಲಿ ಮಾತ್ರ ಸ್ವಲ್ಪ ಕುಡಿಯುವದು ತಕ್ಕದ್ದಾಗಿರುತ್ತದೆ.

ಆರೋಗ್ಯವುಳ್ಳವರು ಚಾ ಆಗಲೀ ಕಾಫಿಯಾಗಲೀ ಮಿತವಾಗಿ ಕುಡಿಯ ಬಹುದು. ಇವುಗಳಲ್ಲಿ ಚಾ ಸ್ರೋತಸ್ಸುಗಳಿಗೆ ಅಷ್ಟು ಬಾಧಿಸುವದಿಲ್ಲ. ಕೋಕೋ ಯಾನೆ ಚೊಕೊಲೇಟ ಎಂಬ ಒಂದು ತರದ ಬೀಜದ ಚೂರ್ಣವು ವಿಶೇಷ ಆರೋಗ್ಯಕರವೂ ಪುಷ್ಟಿಕರವೂ ಕಾಫಿಯಷ್ಟು ಉಷ್ಣತೆ ಇಲ್ಲದ್ದೂ ಆಗಿದೆ. ಮತ್ತು ಇದು ಬಲಕರವೂ ಪುಷ್ಟಿಕರವೂ ಆದ ಪಾನವಾಗಿರುವದರಿಂದ ಅಶಕ್ತರಿಗೂ ಚೈತನ್ಯವಿಲ್ಲದವರಿಗೂ ಸಹಜವಾಗಿ ಹಿತಕರವಾಗಿರುತ್ತದೆ.

ವಿಶೇಷವಾಗಿ ಅಸ್ವಸ್ಥವುಳ್ಳವರೂ ಯೌವನಸ್ಥರೂ ಬಾಲಕರೂ ದ್ರಾಕ್ಷೇರಸ, ಸಾರಾಯಿ ಮುಂತಾದ ಬಟ್ಟಿ ಹಾಕಿ ತೆಗದ ಮದ್ಯಗಳನ್ನು ಸರ್ವಥಾ ಕುಡಿಯ ಬಾರದು. ಇದರಿಂದ ರುಚಿಯೂ ಹಶುವೂ ಜೀರ್ಣವೂ ಬುದ್ಧಿಯೂ ಕೆಡುವದಲ್ಲದೆ ಅದೊಂದು ಸುಲಭತ್ಯಾಜ್ಯವಲ್ಲದ ದುರಭ್ಯಾಸ (ವ್ಯಸನ) ಆಗಿ ಹೋಗಿ, ಅನೇಕ ರೋಗಗಳಿಗೂ ಸಂಕಷ್ಟಗಳಿಗೂ ಕಾರಣವಾದೀತು.

ಕೆಲವು ರೋಗಗಳೂ ಇವುಗಳಲ್ಲಿ ಪ್ರಯೋಗವಾಗುವ ಔಷಧಗಳೂ

(ಇವುಗಳನ್ನು ಕುರಿತು ನಿಘಂಟುರೂಪವಾದ ಸೂಚನಾಸಾರವು.*)

ಮುಂದಿನ ವಿವರದಲ್ಲಿ ವರ್ಣಿಸಿರುವ ಔಷಧಗಳಲ್ಲಿ ಹೇಳಿರುವ ಜೀನಸುಗಳು ಸಾಧಾರಣವಾಗಿ ಜನರಿಗೆ ತಿಳಿದಂಥವುಗಳಾಗಿಯೂ ಅಂಗಡಿಗಳಲ್ಲಿ ಶಿಕ್ಕುವಂಥವುಗಳಾಗಿಯೂ ಇರುವದರಿಂದ ಅವುಗಳನ್ನು ದೊರಕಿಸಿ ಕೊಳ್ಳುವದು ಪ್ರಯಾಸವಲ್ಲ. ಆದರೆ ಔಷಧಗಳನ್ನು ತಯಾರು ಮಾಡುವ ರೀತಿ ಅರಿಯದವರಿಗೆ ಈ ಕೆಳಗಿನ ಸೂಚನೆಗಳು ಪ್ರಯೋಜನವಾದವು:—

(Infusion) ಕಲ್ಕ.—ಇದನ್ನು ಮಾಡ ತಕ್ಕ ಜೀನಸುಗಳ ಪೈಕಿ ಘಟ್ಟಿ ಇರುವ ಜೀನಸನ್ನು ಸಣ್ಣ ಚೂರುಗಳಾಗ ಮಾಡಿ, ಅಥವಾ ಒಂದು ಒರಳಿನಲ್ಲಿ ಹಾಕಿ ಚನ್ನಾಗಿ ಜಜ್ಜಿ, ಪುಡಿ ಮಾಡಿ, ಎಲ್ಲವನ್ನು ಒಂದು ಪಾತ್ರೆಯಲ್ಲಿ ಇಟ್ಟು, ಒಳ್ಳೇದಾಗಿ ಕುದಿಯುವ ನೀರನ್ನು ಅ

* ಇದು ವೈದ್ಯಪಂಡಿತರಾದ ವೇರಿಂಗ ಧೊರೆ ರಚಿಸಿದ "ಅಂಗಡೀ ಔಷಧಗಳು" ಎಂಬ ಪುಸ್ತಕದಿಂದ ವಿಶೇಷವಾಗಿ ಸಂಗ್ರಹಿಸಿದ್ದಾಗಿರುತ್ತದೆ.

ದರಲ್ಲಿ ಹೊಯಿದು, ಕೂಡಲೇ ಪಾತ್ರೆಯ ಬಾಯಿಯನ್ನು ಚನ್ನಾಗಿ ಮುಚ್ಚಿ ಇಡ ಬೇಕು. ಆ ನೀರು ಪೂರಾ ತಣ್ಣಗಾದ ಮೇಲೆ ತೆಳ್ಳಗಾದ ವಸ್ತ್ರದಲ್ಲಿ ಗಾಳಿಸಿ, ಬಾಟ್ಲಿಯಲ್ಲಿ ತೆಗದಿಡ ಬೇಕು. ಉಷ್ಣದೇಶಗಳಲ್ಲಿ ಈ ಕಲ್ಕ ನೀರು ಬೇಗ ಹಾಳಾಗುವದರಿಂದ, ಅದು ಬೇಕಾದಾಗ್ಯೆ ಮಾತ್ರ ಸ್ವಲ್ಪ ಸ್ವಲ್ಪವಾಗಿ ಮಾಡ ತಕ್ಕದ್ದು.

(Decoction) ಕಷಾಯ. — ಇದಕ್ಕಾಗಿ ಘಟ್ಟಿಯಾದ ಜೀನಸುಗಳೆಲ್ಲಾ ತುಂಡು (ಚೂರು) ಮಾಡಿ ಅಥವಾ ಜಜ್ಜಿ, ಒಲೇ ಮೇಲೆ ನೀರು ಚನ್ನಾಗಿ ಕುದಿಸಿ, ಅದು ಕುದಿಯುತ್ತಿರುವಾಗ ಅದರಲ್ಲಿ ಆ ತುಂಡುಗಳನ್ನು ಹಾಕಿ, ಪಾತ್ರೆಯ ಬಾಯಿ ಮುಚ್ಚಿ, ನಿಯಮಿತ ಸಮಯ ಬೇಯಿಸ ಬೇಕು. ತರುವಾಯ ಅದನ್ನು ಕೆಳಗೆ ಇಳಿಸಿ, ಬಿಸಿ ಇರುವಾಗಲೇ ಗಾಳಿಸಿ ತೆಗದು, ತಣ್ಣಗಾಗುವ ವರೆಗೆ ಮುಚ್ಚಿ ಇಡ ಬೇಕು. ಕಲ್ಕ ನೀರು ಹ್ಯಾಗೋ ಹಾಗೆ ಇದು ಸಹಾ ಉಷ್ಣಪ್ರದೇಶದಲ್ಲಿ ಬೇಗ ಹಾಳಾಗುತ್ತದೆ.

(Tincture) ಧೃತಿ. — ಇದಕ್ಕಾಗಿ ಸಹಾ ಘಟ್ಟಿ ಜೀನಸುಗಳನ್ನು ತುಂಡು ಮಾಡಿ, ಒಂದು ಬಾಟ್ಲಿಯಲ್ಲಿ ಹಾಕಿ, ಅದರಲ್ಲಿ ನೇಮಕವಿರುವ (spirit) ಸಾರಾಯವನ್ನು ಹೊಯಿದು, ಬಾಟ್ಲಿಯ ಬಾಯಿ ಚನ್ನಾಗಿ ಮುಚ್ಚಿ, ಆಗ್ಯಾಗ್ಯೆ ಬಾಟ್ಲಿ ಅಲಗಾಡಿಸುತ್ತಾ ಏಳು ದಿವಸವಾಗಲೀ ಹೆಚ್ಚು ಕಾಲವಾಗಲೀ ಇಡ ಬೇಕು. ಹೇಳಿದಷ್ಟು ಕಾಲವಾದ ಮೇಲೆ ಅದನ್ನು ಖಾಲಿ ಎಡೆಯುಳಿಯದ ಪಾತ್ರೆಯಲ್ಲಿ ಹಾಕಿಟ್ಟು, ಧೃತಿಯು ಹಬೆಯಾಗಿ ಹಾರಿ ಹೋದೀತಾದ್ದರಿಂದ ಅದರ ಬಾಯಿಯನ್ನು ಚನ್ನಾಗಿ ಬಂದೋಬಸ್ತು ಮಾಡ ಬೇಕು. ಅದಕ್ಕೆ ಗಾಜಿನ ಬಿರಡೆಯಾಗಲೀ ಗಿಟುಕಾಗಲೀ ಹಾಕಿದ ಪಕ್ಷದಲ್ಲಿ, ಅದರ ಎಡೆಗಳಲ್ಲಿ ಸುತ್ತೂ ಮೇಣ ಅಂಟಿಸಿ, ಘಾಳಿ ಒಳಗೆ ಸೇರದ ಹಾಗೆ, ಬಂದೋಬಸ್ತು ಮಾಡ ಬೇಕು. ಈ ಧೃತಿಯು ಕಾಲ ಹೋದಷ್ಟು ತೀವ್ರವಾಗುತ್ತದೆ. ಹೀಗಾಗಿ ಹೊಸದಾಗಿ ಮಾಡಿಟ್ಟ ಧೃತಿ ಇಂತಿಷ್ಟು ಕೊಡುವದರಿಂದ ಉಂಟಾಗುವ ಫಲವು ಹಳೇದಾದ್ದು ಸ್ವಲ್ಪ ಮಾತ್ರವೇ ಕೊಡುವದರಿಂದ ಉಂಟಾದೀತು.

(Powders) ಚೂರ್ಣಗಳು ಅಥವಾ ಪುಡಿಗಳು. — ಒಂದು ಜೀನಸು ಚೂರ್ಣವಾಗಿ ತೆಗದು ಕೊಳ್ಳ ಬೇಕೆಂತ ಹೇಳಿದ್ದಾದರೆ, ಅದು ಆಗುವಷ್ಟು ನಯವಾದ ಹುಡಿ ಮಾಡ ಬೇಕು. ಮತ್ತು ಕೆಲವು ಜೀನಸುಗಳನ್ನು ಕೂಡಿಸಿ ಮಿಶ್ರ ಚೂರ್ಣ ಮಾಡ ಬೇಕಾದರೆ, ಒಂದೊಂದು ಬಗೆಯನ್ನು ಪ್ರತ್ಯಪ್ರತ್ಯೇಕ ಹುಡಿ ಮಾಡಿದ ತರುವಾಯ ಎಲ್ಲಾ ಒಟ್ಟು ಕೂಡಿಸಿ, ಚನ್ನಾಗಿ (ಅಂದರೆ ಒಂದು ಭಾಗದಲ್ಲಿ ಒಂದು ಜೀನಸಿನ ಹುಡಿ ಹೆಚ್ಚು ಇನ್ನೊಂದರದು ಕಡಿಮೆಯಾಗದಂತೆ) ಬೆರಸಿಡ ಬೇಕು. ಹಾಗೆ ಮಾಡದಿದ್ದರೆ, ಚೂರ್ಣದ ಗುಣ ಸರಿಯಾಗಿ ತೋರಲಿಕ್ಕಿಲ್ಲ. ಒಮ್ಮಿಂದೊಮ್ಮೆ ಬಹಳ ಚೂರ್ಣ ಮಾಡಿ ಇಡುವದಾದರೆ, ಮದ್ದುಗಳನ್ನು ದೊಡ್ಡ ಒರಳಿನಲ್ಲಿ ಚನ್ನಾಗಿ ಮರ್ದಿಸಿ, ಪುಡಿ ಮಾಡಿ, ಚಿಕ್ಕ ಬಾಯಿಯ ಭರಣಿಯಲ್ಲಿಯಾಗಲೀ ಬಾಟ್ಲಿಯಲ್ಲಿಯಾಗಲೀ ಹಾಕಿ, ಘಾಳಿ ಹೊಗದ ಹಾಗೆ ಬಾಯಿ ಮುಚ್ಚಿ, ತಣಿಸಿಲ್ಲದ ಸ್ಥಳದಲ್ಲಿ ಇಡ ಬೇಕು.

(Pills) ಮಾತ್ರೆಗಳು. — ಮೇಲೆ ಹೇಳಿದ ಪ್ರಕಾರ, ಜೀನಸುಗಳನ್ನು ಚನ್ನಾಗಿ ಮಿಶ್ರ ಮಾಡದಿದ್ದರೆ ಗುಣಭೇದ ಆಗುವದರಿಂದ, ಮಾತ್ರೆಗೆ ಕೂಡುವ ಜೀನಸುಗಳೆಲ್ಲಾ ಪೂರ್ಣ ಮಿಶ್ರವಾಗುವ ವರೆಗೆ ಚನ್ನಾಗಿ ಮರ್ದಿಸ ಬೇಕು. ಮಾತ್ರೆಗಳಿಗೆ ಚೂರ್ಣವೇನಾದರೂ ಕೂಡಿಸುವದಿದ್ದರೆ, ಅದು ಒಟ್ಟುಗೂಡುವಂತೆ, ಒಂದಿಷ್ಟು ಜೇನಿನ ಅಥವಾ ಬೆಲ್ಲದ ರವೆಯನ್ನು ಅದಕ್ಕೆ

ಕಲಕಿಸಿದರೆ, ಗುಳಿಗೆ ಕಟ್ಟಲಿಕ್ಕೆ ಬಂದೀತು. ಮಾತ್ರೆಗಳು ಉರುಟಾಗಿಯೂ ಸ್ವಲ್ಪ ಘಟ್ಟಿಯಾಗಿಯೂ ಇರ ಬೇಕು. ಅವು ಬಹಳ ಮೆತ್ತಗಾದರೆ, ಅವುಗಳ ಉರುಟಾಕಾರ ಹೋಗಿ, ರೂಪವಿಲ್ಲದ ಮುದ್ದೆಯಾದಾವು. ಕೆಲವು ಮಾತ್ರೆಗಳು ಮಾಡಿ ಇಡುವದಾದರೆ, ಅವನ್ನು ಒಂದು ಕರಡಿಗೆಯಲ್ಲಿ ಹಾಕಿ, ಒಂದಕ್ಕೊಂದು ಅಂಟಿ ಕೊಳ್ಳದ ಹಾಗೆ, ಅದರ ಅಡಿಯಲ್ಲಿಯೂ ಮೇಲೆಯೂ ಸ್ವಲ್ಪ ಕೂವೇ ಹಿಟ್ಟು ಆಗಲೀ ಅಕ್ಕೀ ಹಿಟ್ಟಾಗಲೀ ಚಲ್ಲ ಬೇಕು. ಸಾಧಾರಣವಾಗಿ ಒಂದು ಮಾತ್ರೆಯು ೫ ಗ್ರೇನಿಗೆ (ಅಂದರೆ ೧¼ ಮಂಜಾಟಿ ತೂಕಕ್ಕೆ) ಮಿಾರ ಬಾರದು. ಅದಕ್ಕಿಂತ ದೊಡ್ಡದಾದರೆ, ನುಂಗಲಿಕ್ಕೆ ಪ್ರಯಾಸವಾದೀತು. ಹ್ಯಾಗಂದರೆ ೬ ಗ್ರೇನಿನ ಒಂದು ಮಾತ್ರೆ ನುಂಗುವದಕ್ಕಿಂತ ಅದರ ೨ ಮಾತ್ರೆಗಳು ಮಾಡಿ ನುಂಗುವದು ಸುಲಭವೇ. ಒಂದೇ ಸಾರಿ ಬಹಳ ಮಾತ್ರೆಗಳನ್ನು ಮಾಡಿದರೆ, ಅವನ್ನು ಸಹಾ, ಚೂರ್ಣವನ್ನು ಇಡುವಂತೆ, ಬಾಟ್ಲಿಯಲ್ಲಿ ಹಾಕಿ ಚನ್ನಾಗಿ ಮುಚ್ಚಿ ಇಡ ಬೇಕು.

(Ointment) ಮುಲಾಮು.—ಮೃಗಗಳ ಚರ್ಬಿ, ನೆಣ, ಹಂದೀ ತುಪ್ಪ ಮುಂತಾದವು ಇಂಗ್ಲಿಷ ವೈದ್ಯಕ್ರಮದಲ್ಲಿ ಉಪಯೋಗವಾದಾಗ್ಯೂ, ಉಷ್ಣಪ್ರದೇಶದಲ್ಲಿ ಅವುಗಳಿಗೆ ನಾತ ಹುಟ್ಟಿ ಉರಿಯುವ ಗುಣ ಉಂಟಾಗುವದರಿಂದ ಅವುಗಳು ಈ ದೇಶದಲ್ಲಿ ಬೇಕೆಂತಿಲ್ಲ. ಮತ್ತು ಈ ಊರಿನ ಕೆಲ ಜನರು ಅದನ್ನು ಉಪಯೋಗಿಸುವದಕ್ಕೆ ಮತಸಂಬಂಧವಾದ ಆಕ್ಷೇಪಣೆ ಮಾಡ್ಯಾರು. ಆದದರಿಂದ ಹಿಂದುಸ್ಥಾನದಲ್ಲಿ ನಿರಾತಂಕವಾಗಿ ಉಪಯೋಗಿಸಲಾಗುವಂಥಾದ್ದು ಹೊಸ ತುಪ್ಪವೇ. ಇದಾದರೂ ಈ ದೇಶದಲ್ಲಿ ಕಾವಿನಿಂದ ತೆಳುವಾಗುತ್ತದೆ. ಇವುಗಳಿಗೆ ಬದಲಾಗಿ ಈ ಊರಿನ ಸಸ್ಯಾದಿಗಳಲ್ಲಿ ಎರಡವೆ. ಒಂದು: ಮುರ್ಗಿನ ಹುಳೀ ಬೀಜದ ಎಣ್ಣೆ*; ಇದು ಪಾಂಡರ ಬಣ್ಣದ್ದಾಗಿದ್ದು ಕಲ್ಲಿನಂತೆ ಹೆಪ್ಪುಗಟ್ಟುತ್ತದೆ. ಎರಡನೇದು: ಗುಲ್ಗುಲ್ವೆಂಬ ಬಿಳಿ ರಾಳ†. ಇವುಗಳಿಗೆ ಮೂರನೇದಾಗಿ ಜೇನುಮೇಣ ಸಹಾ ಸೇರಿಸ ಬಹುದು. ಈ ಮೂರು ಬಗೆ ಇದ್ದರೆ, ಚರಬಿ ಮುಂತಾದ್ದೆಲ್ಲ ಹಿಂದು ವೈದ್ಯಶಾಸ್ತ್ರದಿಂದ ವರ್ಜ್ಯ ಮಾಡ ಬಹುದು. ಮುಲಾಮು ಬರೆ ಹುಣ್ಣಿನ ಮೇಲೆ ಹಚ್ಚುವದಕ್ಕಿಂತ ಕೆಲಿಕೊ ಮುಂತಾದ ವತ್ತು ನೂಲಿನ ಬಟ್ಟೇ ತುಂಡಿನ ಮೇಲೆ ಹಾಸಿ ಹಚ್ಚುವದು ಒಳ್ಳೇದು.

(Poultice) ಪೋಲ್ಟಿಸು (ಒತ್ತಡ).—ಇದು ಯಾವದಾದರೂ ಹುಣ್ಣು, ಕುರು, ಬಾವು ಇತ್ಯಾದಿಗಳಲ್ಲಿ ಕೀವು ಬೇಗ ಕೂಡಿ ಸೋರಿ ಬರುವದಕ್ಕೂ ನೋವಿಳಿಸುವದಕ್ಕೂ ಬೀಗು ಸಡ್ಲಿಸುವದಕ್ಕೂ ಕಟ್ಟುತ್ತಾರೆ. ದೃಷ್ಟಾಂತವಾಗಿ: (linseed) ಅಗಸೇ ಬೀಜದ ಪೋಲ್ಟಿಸು ಮಾಡುವದು ಹ್ಯಾಗಂದರೆ—ಒಂದಿಷ್ಟು ಆ ಬೀಜವನ್ನು ಸಣ್ಣಾಗೆ ಹುಡಿ ಮಾಡಿ, ಅದು ಮೆತ್ತಾನ ಮುದ್ದೆ ಆಗುವಷ್ಟು ಅದರ ಮೇಲೆ ಕುದಿಯುವ ನೀರು ಹೊಯಿದು, ಚನ್ನಾಗಿ ನಾದಿ, ನಾರು ವಸ್ತ್ರದ ತುಂಡಿನ ಮೇಲೆ ಹಾಸಿ, ಹುಣ್ಣಿನ ಮೇಲೆ ತಡೆಯಲಿಕ್ಕೆ ಕೂಡುವಷ್ಟು ಬಿಸಿಯಾಗಿ ಕಟ್ಟ ಬೇಕು. ಹುಣ್ಣಿನಿಂದ ಕೀವು ಸೋರುತ್ತಾ ನಾತ ಹುಟ್ಟದ ಹಾಗೆ, ಪೋಲ್ಟಿಸು ಬದಲಿಸುತ್ತಿರ ಬೇಕು.

* ಅಂದರೆ—Engl: Mate Mangosteen; ಮಲ: ಚತುರಪುಳಿ; ತುಳು: ದಾರೆಪುಳಿ; ಇದರ ಎಣ್ಣೆ. ಹಿಂದುಸ್ಥಾನಿ: "ಕೋಕುಮಕೆತೇಲ್."

† ಇದು Engl: Piney, or White Dammar; ಹಿಂದು: ಸಫೇದ್‌ದಾಮರ; ತೆಲು: ಧೂಪದಾಮರ; ಮಲ: ವೆಳ್ಳಕುಂತುರುಕ್ಕಂ.

(Fomentation) ಶೇಕ (ನೀರುಗಾವು).—ಪೋಲ್ಟಿಸು ಯಾವದಕ್ಕೋ ಅದೇ ಉದ್ದೇಶಾರ್ಥವಾಗಿ ಶೇಕ ಸಹಾ ಕೊಡುವದುಂಟು. ಇದರಿಂದ ನೋವು ಉಪಶಮನವಾಗುತ್ತದೆ. ಸಾಧಾರಣವಾದ ಶೇಕ ಹ್ಯಾಗಂದರೆ: ನೋವಿರುವ ಜಾಗದಷ್ಟು ದೊಡ್ಡ ಒಂದು ಉಣ್ಣೇ ವಸ್ತ್ರದ ತುಂಡಿನಲ್ಲಿ ಉಮಿ ಹಾಕಿ ಒಂದು ಗಂಟು ಮಾಡಿ, ಅದನ್ನು ಒಂದೆರಡು ನಿಮಿಷ ಕುದಿಯುವ ನೀರಲ್ಲಿ ಮುಣುಗಿಸಿ, ತರುವಾಯ ಮೇಲೆ ತೆಗದು, ಹಿಂಡಿ, ತಾಳಿ ಕೊಳ್ಳುವಷ್ಟು ಬಿಸಿಯಾಗಿ ಆ ನೋವಿರುವ ಜಾಗಕ್ಕೆ ಶೇಕ ಕೊಡುವದು. ಆ ಗಂಟು ಪೂರ್ಣ ತಣ್ಣಗಾಗಲಾಗಿ ಪುನಹಾ ಅದೇ ಪ್ರಕಾರ ಸಾಕಾಗುವ ವರೆಗೆ ಮಾಡ ಬೇಕು. ಒಟ್ಟಾರೆಯಾಗಿ ಪೋಲ್ಟಿಸು ಮತ್ತು ಶೇಕ ಇವೆರಡರ ಉದ್ದೇಶ ಒಂದೇ.

ರೋಗಗಳು.

ಅಂಟುರೋಗ (ಸೂತಕರೋಗ). Amenorrhæa.

ಸ್ತ್ರೀಯರು ಬಸುರಾಗಿರದೆ ಅಥವಾ ಬೇರೆ ಸಹಜ ಕಾರಣವಿಲ್ಲದೆ ಮಾಸಕಟ್ಟಳೆ (ಮುಟ್ಟು) ಆಗದೆ ಇರುವದರಿಂದ ಸೂತಕ ಬದ್ಧವಾಗುವದು, ಅಥವಾ ಕ್ರಮ ತಪ್ಪಿ ಮುಟ್ಟಾಗುವದು, ಅಥವಾ ಸೂತಕದ ನೆತ್ತರು ವಿಶೇಷ ಹರಿಯುವದು (ಕುಸುಮ ರೋಗವಾಗುವದು), ಇಂಥಾದ್ದಕ್ಕೆ:

೧. ರಕ್ತಬೋಳ, ಅನ್ನಭೇದಿ (ಹಿರಾಕಸು), ಒಂದೊಂದು ೨೪ ಗ್ರೇನ್* ತೂಕ, ಹುಡಿ ಮಾಡಿದ ಲವಂಗಚೆಕ್ಕೆ (ದಾಲ್ಚಿನಿ) ೬೦ ಗ್ರೇನ್, ಈ ಮೂರು ಬಗೆಯನ್ನು ಚನ್ನಾಗಿ ಚೂರ್ಣ ಮಾಡಿ, ಸ್ವಲ್ಪ ಜೇನು ಕೂಡಿಸಿ, ೨೪ ಮಾತ್ರೆಗಳು ಮಾಡಿ, ಒಂದು ಸಾರಿಗೆ ೨ರ ಪ್ರಕಾರ ದಿವಸಕ್ಕೆ ಎರಡಾವರ್ತಿ ತಕ್ಕೊಳ್ಳುವದು. ಆದರೆ ಈ ಮಾತ್ರೆಗಳು ಗರ್ಭಿಣಿಗಳಿಗಾಗಲಿ ಮುಟ್ಟಾದ ದಿನಗಳಲ್ಲಾಗಲಿ ಕೊಡ ಬಾರದು.

೨. ೧೦ ಗ್ರೇನ್ ಬಿಳೀಗಾರ†, ೧೦ ಗ್ರೇನ್ ಲವಂಗಚಕ್ಕೆ ಕೂಡಾ ಚೂರ್ಣ ಮಾಡಿ, ದಿವಸಕ್ಕೆ ಮೂರು ಸಾರಿ ಗಂಜಿ ನೀರಿನಲ್ಲಿ ಕೊಡುವದು.

ಸೂತಕದ ನೆತ್ತರು ಮಿತಿ ಮಿೀರಿ ಅಥವಾ ಅನೇಕ ದಿನ ಹರಿದರೆ (ಕುಸುಮ ರೋಗಕ್ಕೆ)—

೩. ೧೦ ಯಾ ೧೨ ಗ್ರೇನ್ ಘಟಿಕಾರ ೧ ಪೈಂಟ್‡ ಹಾಲಿನಲ್ಲಿ ಬೇಯಿಸಿ ಗಾಳಿಸ ಬೇಕು. ಇದನ್ನು ದಫೆಗೆ ೧½—೨ ಔನ್ಸ್ ಪ್ರಕಾರ ದಿನಕ್ಕೆ ಮೂರು ಸಾರಿ ಕೊಡುವದು. ಮತ್ತು

೪. ಸಿರ್ಕ (ಹುಳಿರಸ) ಬಿಶಿ ನೀರಲ್ಲಿ ಮಿಶ್ರ ಮಾಡಿ ಶೇಕ ಕೊಟ್ಟರೆ, ಹಿತಕರವಾಗುವದು ಮಾತ್ರವಲ್ಲಾ ರಕ್ತ ಹೋಗುವದು ಸಹಾ ನಿಲ್ಲುವದು. ಬಹಳ ನೋವೂ ಸಂಕಟವೂ ಇದ್ದರೆ, ಈ ಕೆಳಗಿನ ಮುಲಾಮುಗಳಲ್ಲಿ ಒಂದು ನಡುವಿಗೆ ಹಚ್ಚಿದರೆ ಒಳ್ಳೇದು:

* ೧ ಗ್ರೇನ್=೧/೪ ಮಂಜೂಟಿ ತೂಕ. (ನಾಲ್ಕಾಣೆ ಪಾವಲಿ=೪೫ ಗ್ರೇನ್.)

† Engl: Borax; ಹಿಂದು: ಸೋಹಾಗಾ; ಮಲ: ಪೊನ್‌ಕಾರಂ; ತೆಲು: ಎಲೆಗಾರಂ; ತಮ: ವೆಳ್‌ಕಾರಂ.

‡ ೧ ಪೈಂಟ=೨೦ ಔನ್ಸ (ಅಂದರೆ ೨೦ ಮೇಜಿನ ಚಮ್ಚ=೪೮೦ ತಟುಕು).

೫. ಅಫೀಮಿನ ಮುಲಾಮು: ಅಂಗಡಿಗಳಲ್ಲಿ ಸಿಕ್ಕುವ ಅಫೀಮು ೨ ದ್ರಮ್* ತೆಂಗಿನ ಎಣ್ಣೆಯಲ್ಲಿ (ಎಳ್ಳೆಣ್ಣೆ ಅಥವಾ ಬೇರೆ ಯಾವ ಸಾಧಾರಣ ಎಣ್ಣೆ ಆದರೂ ಆದೀತು) ಕಲಸಿ ಚನ್ನಾಗಿ ಮರ್ಧಿಸಿ, ಹಚ್ಚುವದು. ಬೇಕಾದರೆ ಅದಕ್ಕೆ ಕರ್ಪೂರದ ಮುಲಾಮು (೧ ಔನ್ಸು ಕರ್ಪೂರವನ್ನು ೬ ಔನ್ಸು ತೆಂಗಿನ ಎಣ್ಣೆಯಲ್ಲಿ ಕಲಕಿಸಿ ಮಾಡುವದು) ಸಹಾ ಕೂಡಿಸಿದರೆ, ಇನ್ನಷ್ಟು ಗುಣ ಬಂದೀತು.

೬. ಉಮ್ಮತ್ತದ† ಎಲೆಗಳು ಚನ್ನಾಗಿ ಜಜ್ಜಿ, ಅದಕ್ಕೆ ಸ್ವಲ್ಪ ನೀರು ಮತ್ತು ಅಷ್ಟೇ ಅಕ್ಕಿ ಹುಡಿ ಸಹಾ ಕೂಡಿಸಿ, ಒಳ್ಳೇ ಮಸಾಲೆ ಮಾಡಿ, ಬೇಯಿಸಿ, ಪೋಲ್ಟಿಸಾಗಿ ಹಚ್ಚುವದು. ಅಥವಾ ೧ ಔನ್ಸ್ ಉಮ್ಮತ್ತದ ಬೀಜವನ್ನು ಜಜ್ಜಿ, ೧ ಪೈಂಟ್ ಎಳ್ಳೆಣ್ಣೆಯಲ್ಲಿ ಏಳು ದಿವಸದ ವರೆಗೆ ಹಾಕಿಟ್ಟು, ಆ ಎಣ್ಣೆಯನ್ನು ಕಿಬ್ಬೊಟ್ಟೆಗೆ ಹಚ್ಚುವದು.

ಅಂತರಾಯಾಮವೆಂಬ ವಾತ Chorea or St. Vitus's Dance.

ಇದೊಂದು ಶರೀರನರಗಳ ವಿಪರೀತ ತಾರುಮಾರು ಆಗುವ ರೋಗವಾಗಿದ್ದು ರುಚಿಭೇದ, ಅಗ್ನಿಮಾಂದ್ಯ, ಮಲಬದ್ಧ, ಕಿಬ್ಬೊಟ್ಟೆ ಉಬ್ಬುವದು, ಅವಿಶ್ರಾಂತಿ, ಕಂಗಾಲತನ, ದೇಹದ ಮತ್ತು ಮನಸ್ಸಿನ ಚೈತನ್ಯ ಕುಂದುವದು. ತರುವಾಯ ನರಗಳ ಶಿಡಿಯೋಣ, ತಿವಿಯೋಣ, ಎಳದಾಟ ಮುಂತಾದ್ದು ಉಂಟಾಗುತ್ತವೆ. ಇದರಿಂದ ಮುಖವು ವಿಕಾರವಾಗಿ, ಕಣ್ಣುಗಳು ಉರುಳಿ, ನುಂಗಲಿಕ್ಕೂ ಮಾತಾಡಲಿಕ್ಕೂ ಆಗದೆ, ಮೋರೆ ಸಪ್ಪನವಾಗಿ, ಮೈ ಸೊರಗಿ, ಮೂತ್ರವು ನರೆದಾಗಿ ಬಹಳ ಹೋಗುವದು—ಈ ಮುಂತಾದ್ದು ರೋಗದ ಲಕ್ಷಣಗಳಾಗಿವೆ. ಈ ರೋಗ ಸಾಧಾರಣವಾಗಿ ೮—೧೬ ವರ್ಷದೊಳಗಿನ ಪ್ರಾಯದಲ್ಲಿ ಆಗುತ್ತದೆ. ಆದರೆ ಇದು ಗಂಡಸರಿಗಿಂತ ಹೆಂಗಸರಿಗೆ ವಿಶೇಷವಾಗಿ ಬರುವದು. ಇದು ಮತ್ತು ಇತರ ನರಸಮ್ಮಂಧವಾದ ರೋಗಗಳು ಒಳಗಣ ಕ್ರಿಮಿಗಳ ಉಪದ್ರವದಿಂದ ಸಹಾ ಆಗುವದುಂಟು. ಈ ರೋಗಕ್ಕೆ ಕೆಳಗಿನ ವಿವರ ಪ್ರಕಾರ, ಮೀನಿನ ಎಣ್ಣೆ (೬)‡, ಜಟಾಮಾಂಸಿಯ ಕಲ್ಕ (೮), ಅನ್ನಭೇದಿ (೯), ವಿದ್ಯಮಾನದ ಪ್ರಕಾರ, ಒಂದಾಗಿಯಾಗಲೀ ಒಟ್ಟಾಗಿಯಾಗಲೀ ಕೊಟ್ಟು ನೋಡಿದರೆ, ಗುಣ ಕಾಣುವದು.

☞ ೨೪ನೆ ಪುಟದ ಅಡಿಯಲ್ಲಿರುವ, ೩ನೇ ನೋಟಿನಲ್ಲಿ: "೨೦ ಮೇಜಿನ ಚಮ್ಚೆ" ಎಂತ ಇರುವಂಥಾದ್ದು ತಿದ್ದಿ "೪೦ ಮೇಜಿನ ಚಮ್ಚೆಯಂತ ಮಾಡ ಬೇಕು.—ಮೇಜಿನ ಚಮ್ಚೆ (ಸೌಟು), table spoon; ದೆಸರ್ತ ಚಮ್ಚೆ (ಸೌಟು), dessert spoon; ಚಾ ಚಮ್ಚೆ (ಸೌಟು), tea spoon.

* ಅಂದರೆ ೧೫ ಮಂಜೂಟಿ ತೂಕ, ಇಲ್ಲವೆ ½ ರೂಪಾಯಿ ತೂಕ.—ಅಫೀಮು = Engl. Opium; ಹಿಂದು: ಅಫ್ಯುನ್; ತಮ: ತೆಲು: ಅಬಿನಿ; ಮಲ: ಕಷಕಷಕರಪ್ಪಾ.

† Engl. Datura; ಹಿಂದು: ದತೂರಾ. ತಮ: ಉಮತ್ತೈ; ತೆಲು: ಉಮೆತ್ತ, ದತ್ತೂರಮು; ಮಲ: ಉಮಮ್ಮತ್ತ.

‡ ( ) ಆವರ್ಣದೊಳಗೆ ಬರುವ ಅಂಕೆಗಳು ಆಯಾ ಅಂಕೆಗಳಲ್ಲಿ ವಿವರಿಸಿದ ಔಷಧಗಳನ್ನು ನೋಡ ಬೇಕೆಂದೂ, ದಪ್ಪವಿರುವ ಅಂಕೆಗಳು ವಿಶೇಷ ಗುಣವುಳ್ಳ ಔಷಧಗಳೆಂದೂ ಸೂಚಿಸುತ್ತವೆ.

೭. ಮೀನಿನ ಎಣ್ಣೆಯನ್ನು* ಒಮ್ಮೆಗೆ ೧ ಚಾ ಸೌಟು ಪ್ರಕಾರ ದಿನಕ್ಕೆ ೩ ಸಾರಿ ಕುಡಿಯುವದು. ಇದು ಶರೀರಕ್ಕೆ ಹಿತವಾದರೆ, ಅದರ ಪರಿಮಾಣವನ್ನು ಕ್ರಮೇಣವಾಗಿ ಹೆಚ್ಚಿಸಿ, ೧ ಮೇಜಿನ ಸೌಟನಷ್ಟರ ವರೆಗೆ ತಕ್ಕೊಳ್ಳ ಬಹುದು. ಇದಕ್ಕಿಂತ ಹೆಚ್ಚು ತಕ್ಕೊಂಡರೆ, ಅಥವಾ ಅದು ಜೀರ್ಣವಾಗದಿದ್ದರೆ, ಅನ್ನಕೋಶದ ಇಲ್ಲವೆ ಕಲಿಜದ ಅಕ್ರಮ ಬರುವದು, ಇಲ್ಲವೆ ಜೀರ್ಣವಾಗದೆ ಝಾಡಿಸಿ ಹೋಗುವದು. ಎಣ್ಣೆಯನ್ನು ತಕ್ಕೊಳ್ಳಲಿಕ್ಕೆ ತಕ್ಕದ್ದಾದ ಸಮಯವು ಊಟವಾದ ಕೂಡಲೇ ಆಗಿರುತ್ತದೆ; ಹಿತವಾದರೆ, ಊಟದ ಸಮಯದಲ್ಲಿಯೂ ತಕ್ಕೊಳ್ಳ ಬಹುದು. ಬರೀ ಹೊಟ್ಟೆಯಲ್ಲಿ ತಕ್ಕೊಂಡ ಪಕ್ಷಕ್ಕೆ ವಾಕರಿಕೆ ಬಂದೀತು. ಹೊಟ್ಟೆಯಲ್ಲಿ ಇಷ್ಟಾದರೂ ಹಿಡಿಯಲಾರದವರು ಸಹ ರಾತ್ರೆ ಊಟವಾದ ಮೇಲೆ ಮಲಗುವಾಗ ತಕ್ಕೊಳ್ಳಲಾಗಿ ಅವರಿಗೆ ವಾಂತಿಯಾಗಲಿಲ್ಲ. ಎಣ್ಣೆ ತಕ್ಕೊಳ್ಳುವಾಗ ವಾಕರಿಕೆಯೂ, ಅನಂತರ ಅದರ ತೇಗೂ ಬರುವದಾದರೆ, ಹಾಗೆ ಆಗದಂತೆ ಒಳ್ಳೇ ಉಪಾಯವೇನಂದರೆ: ಎಣ್ಣೆ ಕುಡಿಯುವಾಗಲೂ ಕುಡಿದಾದ ಮೇಲೆಯೂ ಸ್ವಲ್ಪ ಉಪ್ಪು ತಿಂದು ಬಿಟ್ಟರೆ ಸೈ. ಎಣ್ಣೆಗೆ ಬೆರಿಕೆಯಾಗಿ ಸ್ವಲ್ಪ (orange wine) ಕಿತ್ತಲೆವೈನ್ ಆಗಲೀ, (quinine) ಕ್ವಯ್ನಾನಿನ ನೀರಾಗಲೀ, ಲಿಂಬೇ ರಸವಾಗಲೀ, ಹಾಲು ಹಾಕದ ಬಿಶೀ ಕಾಫಿಯಾಗಲೀ ತಕ್ಕೊಳ್ಳ ಬಹುದೆಂತ ಹಲವು ವೈದ್ಯರು ಹೇಳುತ್ತಾರೆ. ಆದರೆ ಸ್ವಲ್ಪ ಓಮದ ಸತ್ವ ಇವೆಲ್ಲಕ್ಕಿಂತ ಉತ್ತಮ ಬೆರಿಕೆಯಾದೀತು. ಎಣ್ಣೆಯು ಒಂದೇ ಗುಟುಕಿನೊಳಗೆ ತೆಗದು ಕೊಳ್ಳುವಷ್ಟು ಇರ ಬೇಕಾದ್ದರಿಂದ, ಅದಕ್ಕೆ ಬೆರಿಕಿ ಮಾಡುವ ಪದಾರ್ಥವು ಹ್ಯಾಗೂ ಒಂದು ಮೇಜಿನ ಸೌಟಿಗೆ ಮಿಕ್ಕ ಬಾರದು. ಎಣ್ಣೆಯನ್ನು ಒಂದು ಸೌಟಿನಲ್ಲಿ ತೆಗದು ನಾಲಿಗೆಗೆ ತಾಗಿಸದಂತೆ ಗಂಟ್ಲೊಳಗೆನೇ ಸುರಿಸಿ ನುಂಗಿದರೆ, ಅಸಹ್ಯವಾಗಲಿಕ್ಕಿಲ್ಲ. ಈ ಎಣ್ಣೆ ಹೀಗೆ ಕುಡಿಯಲಿಕ್ಕಾದರೆ, ಅತ್ಯುತ್ತಮ.

ಎಣ್ಣೆ ಕುಡಿಯುತ್ತಿರುವ ಕಾಲದಲ್ಲಿ ಊಟ ಸಾಧಾರಣವಾಗಿಯೂ ಪುಷ್ಟಿಕರವಾಗಿಯೂ ಇರ ಬೇಕು. ಮೃಷ್ಟಾನ್ನ ಮೇಲೋಗರಗಳನ್ನು ವರ್ಜಯ ಮಾಡ ಬೇಕು. ಪಕ್ವರಸ (wine) ಸ್ವಲ್ಪ ತಕ್ಕೊಂಡರೆ ದೋಷವಿಲ್ಲ.

ಈ ಎಣ್ಣೆ ತಕ್ಕೊಳ್ಳುವ ಕಾಲದಲ್ಲಿ ಪಿತ್ತೋದ್ರೇಕವಾದರೆ, ಅಥವಾ ಅಜೀರ್ಣವಾಗಿ ಮಲಶೋಧನೆಯಾದರೆ, ಎಣ್ಣೆ ತತ್ಕಾಲ ಬಿಡ ಬೇಕು. ಅದು ಗುಣವಾಗಿ ಕೆಲವು

*ಈ ಎಣ್ಣೆಯನ್ನು (shark) ಶಾರ್ಕ ಎಂಬ ಮೀನಿನಿಂದಾಗಲೀ ಇತರ ಮೀನಿನಿಂದಾಗಲೀ ಹಿಂದುಸ್ಥಾನದ ತೀರಪ್ರದೇಶಗಳಲ್ಲಿ ತೆಗಿಯುತ್ತಾರೆ. ತಕ್ಕ ರೀತಿಯಲ್ಲಿ ತೆಗದರೆ, ಸುಮಾರು ಅರಶಿನ ಬಣ್ಣದ್ದಾಗಿದ್ದು, ರುಚಿಯಲ್ಲಿಯೂ ವಾಸನೆಯಲ್ಲಿಯೂ (cod liver oil) ಕೊಡ್ ಎಂಬ ಮೀನಿನ ಯಕೃತ್ತಿನ ಎಣ್ಣೆಯ ಹಾಗಾಗುವದು. ಕುಡಿಯಲಿಕ್ಕೆ ವಾಕರಿಕೆಯಾಗುತ್ತದೆ ಎಂಬದೊಂದೇ ಆಕ್ಷೇಪಣೆಗೆ ಮಾತ್ರ ಆಸ್ಪದ ಉಳಿದೀತು. ಆದರೆ, ಸಾಧಾರಣವಾಗಿ ಮಾಡುವ ಪ್ರಕಾರ, ಯಕೃತ್ತನ್ನು ಬೇರೆ ಮಾಡಿ ಎಣ್ಣೆ ತೆಗಿಯುವಷ್ಟರೊಳಗೆ ಅದನ್ನು ಕೊಳಿಸುವದಕ್ಕೆ ಬದಲಾಗಿ ಹೊಸತ್ತಾಗಿ ತೆಗದ ಯಕೃತ್ತನ್ನು ಬೇಯಿಸಿ ಎಣ್ಣೆ ತೆಗದರೆ, ಆ ದೋಷ ಹೋದೀತು. ಈ ಎಣ್ಣೆಯು ಗುಣದಲ್ಲಿ (cod liver oil) ಕೊಡ್ ಮೀನಿನ ಯಕೃತ್ತಿನ ಎಣ್ಣೆಗೆ ಸಮವಾಗಿದ್ದು, ಅದರಲ್ಲಿರುವಷ್ಟೇ ಔಷಧ ಸಾರವಿರುತ್ತದೆ.

ದಿವಸವಾದ ಬಳಿಕ ಎಣ್ಣೆಯನ್ನು ಪುನಹಾ ಸ್ವಲ್ಪ ಸ್ವಲ್ಪ ತೆಗೆದು ಶುರು ಮಾಡ ಬಹುದು. ರೋಗಿಯು ಈ ಔಷಧ ಸೇವನ ಮಾಡುವಾಗ ಆತನಿಗೆ ನಿರ್ಮಲವಾದ ಘಾಳಿಯ ಸಂಸರ್ಗವಿರ ಬೇಕು, ಆತನು ಶರೀರಸಾಧನೆಯನ್ನು ಮಾಡ ಬೇಕು.— ಮೇಲಿನ ಅಂತರಾಯಾಮವೆಂಬ ವಾತಕ್ಕೆ ಬೇರೆ ಔಷಧಗಳು ನಿಷ್ಫಲವಾದಲ್ಲಿ ಈ ಔಷಧವು ಬಹಳ ಪ್ರಯೋಜನವಾದ್ದುಂಟು.

೮. ಜಟಾಮಾಂಸಿಯು* (anti-spasmodic) ಶಳವುನಿವಾರಕ ಔಷಧವೆಂತ ಕೀರ್ತಿ ಹೊಂದಿರುತ್ತದೆ. ಅದನ್ನು ತೆಕ್ಕೊಳ್ಳುವ ಕ್ರಮ ಹ್ಯಾಗಂದರೆ: ೨ ದ್ರಮ್ ಜಟಾಮಾಂಸಿಯ ಬೇರನ್ನು ಜಜ್ಜಿ, ¼ ಪೈಂಟ್ (ಕಾಲು ಶೀಸೆ) ಕುದಿಯುವ ನೀರನ್ನು ಅದರ ಮೇಲೆ ಹೊಯಿದು, ಮುಚ್ಚಿ ಇಟ್ಟು, ತಣ್ಣಗಾದ ಮೇಲೆ ಜಿಗಟೆ ಹಿಂಡಿ ಬಿಸಾಡಿ, ಆ ಕಲ್ಕ ನೀರನ್ನು ಗಾಳಿಸಿಡ ಬೇಕು. ೧ ವೈನ್‌ಗ್ಲಾಸ್† ಪ್ರಕಾರ ದಿನಕ್ಕೆ ೨ ಯಾ ೩ ಸಾರಿ ತಕ್ಕೊಳ್ಳುವದು. ಇದರ (tincture) ಧೃತಿಯನ್ನು ಸಹಾ ಮಾಡುತ್ತಾರೆ; ಹ್ಯಾಗಂದರೆ: ೫ ಔನ್ಸ್ ಜಜ್ಜಿದ ಜಟಾಮಾಂಸಿ ಮತ್ತು ೨ ಪೈಂಟ್ (proof spirit) ದ್ರಾವಕವನ್ನು ಕೂಡಿಸಿ ಮಾಡುವದು. ಇದಾದರೆ, ಒಮ್ಮೆಗೆ ೧-೨ ದ್ರಮ್ ಪ್ರಕಾರ ತಕ್ಕೊಳ್ಳುವದು. ಇದು ಗರ್ಭಾಶಯದಾಹ, ಗುಂಡಿಗೆ ಬಡಿಯೋಣ, ಅಂತರಾಯಾಮವಾತ, ವಾಯುವುಪದ್ರವ ಮುಂತಾದ್ದಕ್ಕೆ ಆಗುತ್ತದೆ.

೯. ಅನ್ನಭೇದಿ (ಹಿರಾಕಸು)‡, ಸ್ತ್ರೀಯರಿಗೆ ಆಗುವ ನರಸಮ್ಮಂಧವಾದ ರೋಗಗಳಲ್ಲಿ ರಕ್ತಬೋಳದ ಸಂಗಡ ಕೊಡುತ್ತಾರೆ (೧).

ಅಜೀರ್ಣ, ಅಗ್ನಿಮಾಂದ್ಯ Indigestion, (Dyspepsia).

ಬಹಳ ಹೆಚ್ಚಾದ ಅಥವಾ ಬಹಳ ಕಡಿಮೆಯಾದ ಅಥವಾ ಶರೀರಕ್ಕೆ ಹಿತವಲ್ಲದ ಆಹಾರ; ಬಹಳ ಕಾಲ ಉಪವಾಸವಿದ್ದು ಒಮ್ಮೆಯೇ ಹೆಚ್ಚು ಉಣ್ಣುವದು; ಶರೀರಾಭ್ಯಾಸವಿಲ್ಲದಿರುವದು; ಅಮಲು ಹುಟ್ಟಿಸುವ ಮದ್ಯ ಮುಂತಾದ್ದರ ಅತ್ಯುಪಯೋಗ; ಅಫೀನಿ, ಹೊಗೆಸೊಪ್ಪು, ಇಂಥಾದ್ದರ ಅಭ್ಯಾಸ; ಉಷ್ಣಪಾನಗಳು; ಅನ್ನಕೋಶ, ಕಲಿಜ, ಪ್ಲೀಹ ಇವುಗಳು ಕೆಡುವದು; ಇವೆಲ್ಲಾ ಅಜೀರ್ಣಕ್ಕೆ ಕಾರಣಗಳಾಗಿರುತ್ತವೆ. ಅಜೀರ್ಣರೋಗವಿದ್ದವರಿಗೆ ನಾಲಿಗೆ ದೊರಗು, ದುರ್ಗಂಧ ಶ್ವಾಸ, ಗುಂಡಿಗೆ ಬಡಿಯುವದು,

* **Engl: Indian Spikenard**; ಹಿಂದು: ಜಟಾಮಾಸಿ, ಬಾಲ್ಛರ್; ಮಹಾ: ಜಟಾಮಾವಸಿ; ಮಲ: ಜಟಾಮಾಂಚಿ.—ಈ ಹೆಸರಿನ ಬೇರುಗಳನ್ನು ಅಂಗಡಿಗಳಲ್ಲಿ ಬಾತಿನ ಗರಿಯಷ್ಟು ಸಪುರವಾದ ಚಿಕ್ಕ ತುಂಡುಗಳಾಗಿ ಮಾರುತ್ತಾರೆ. ಅದರ ಅಂಚಿನಲ್ಲಿ ಸುತ್ತಲೂ ಕೂದಲಿನಂಥ ನಾರಿನಿಂದ ಮುಚ್ಚಿರುತ್ತದೆ. ಅದಕ್ಕೆ ವಿಶೇಷ ಸುಗಂಧವುಳ್ಳ ಪರಿಮಳವೂ ಕಹಿ ರುಚಿಯೂ ಉಂಟು. ಅಂಗಡಿಗಳಲ್ಲಿ ಹಳೆದಾಗಿ ಹುಳ ತಿಂದು ನಿಷ್ಪ್ರಯೋಜನವಾದ ಬೇರುಗಳು ಸಹಾ ಮಾರುವದರಿಂದ, ಮದ್ದಿಗಾಗಿ ಹೊಸತಾದ ಒಳ್ಳೇ ಜಾತಿಯ ಬೇರುಗಳನ್ನು ಸಂಪಾದಿಸ ಬೇಕು.

† ೧ ವೈನ್‌ಗ್ಲಾಸ್ (wine-glass) =೧½ ಔನ್ಸ್ (=೩ ಮೇಜಿನ ಸೌಟು).

‡ **Engl: Sulphate of Iron**; ಹಿಂದು: ಹಿರಾಕಸಿಸ್, ಕಷಿಷ್; ತಮು: ತೆಲು: ಮಲ: ಅನ್ನಭೇದಿ.

ನಾಡಿಗಳ ಕ್ಷೀಣತೆ, ದೃಷ್ಟಿಮಾಂದ್ಯ, ಕಣ್ಣುಗಳ ಮುಂದೆ ಅಣುಗಳಂತೆ ತೋರುವದು, ಶಿರೋಭ್ರಮಣೆ, ತಲೆನೋವು, ಸುಸ್ತಿ, ಜಡರಕ್ತಭಾವ, ಅಲ್ಪವಿಷಯಗಳಲ್ಲಿ ಬಹಳ ಚಿಂತೆ—ಇವು ಮುಂತಾದ್ದು ದೀರ್ಘಕಾಲದ ಅಜೀರ್ಣದ ಲಕ್ಷಣಗಳು. ಇದಕ್ಕೆ ಈ ತರದ ಅಗ್ನಿದೀಪಕ ಔಷಧಗಳು ಕೊಡ ಬೇಕು:—

೧೦. ೧ ಔನ್ಸ್ ಜಜ್ಜಿದ ಕಿರಿಯಾತು (ನೆಲಬೇವು) ತಂದು ೧ ಪೈಂಟ್ (ಬಾಟ್ಲಿ)* ಕುದಿಯುವ ನೀರಲ್ಲಿ ೨ ತಾಸು ವರೆಗೆ ತೋಯಿಸಿಟ್ಟು, ಆ ನೀರನ್ನು ಗಾಳಿಸಿಡುವದು. ಒಂದು ಸಾರಿಗೆ ೨-೩ ಔನ್ಸ್ ಪ್ರಕಾರ ದಿನಕ್ಕೆ ಮೂರಾವರ್ತಿ ಕೊಡುವದು. ೧ ದ್ರಮ್ ಜಜ್ಜಿದ ಲವಂಗವಾಗಲೀ, ದಾಲಚಿನಿಯಾಗಲೀ, ಏಲಕ್ಕಿಯಾಗಲೀ ಆ ನೀರಿಗೆ ಕೂಡಿಸಿದರೆ, ಅದರ ಸಾರ ಇನ್ನಷ್ಟು ಹೆಚ್ಚಿ, ರುಚಿಕರವಾಗುತ್ತದೆ. ಇದು ಮುಖ್ಯವಾಗಿ ಜ್ವರ ಬಂದ ಮೇಲೆ ಉಂಟಾಗುವ ಅಶಕ್ತಿ, ಅಜೀರ್ಣ, ಅರುಚಿ ಇತ್ಯಾದಿಗಳಲ್ಲಿ ಕೊಡುವದು. ಇದು ಸಾಧಾರಣವಾದ ಛಳಿಜ್ವರ ಅಥವಾ ವರಿಸೇಜ್ವರಕ್ಕೂ ಕೊಡುವದುಂಟು.

೧೧. ಈ ಕಿರಿಯಾತು ಒಳ್ಳೇ ಅಗ್ನಿದೀಪಕವಾಗಿ ಕೊಡುವದು ಹ್ಯಾಗಂದರೆ: ೨ ಔನ್ಸ್ ಜಜ್ಜಿದ ಕಿರಿಯಾತನ್ನು ಒಂದು "ಶೆರಿವೈನ್" (sherry wine) ಎಂಬ ಮದ್ಯದಲ್ಲಿ ಹಾಕಿ, ಏಳು ದಿವಸದ ವರೆಗೆ ಇಡುವದು. ಇದನ್ನು ಊಟಕ್ಕೆ ೧ ತಾಸು ಮುಂಚೆ ೧ ವೈನ್‌ಗ್ಲಾಸ್ (ಅಂದರೆ ೧½ ಔನ್ಸ್) ಪ್ರಕಾರ ದಿನಕ್ಕೆ ಎರಡಾವರ್ತಿ ಕುಡಿದರೆ, ಅಜೀರ್ಣ, ಅರುಚಿ ಇತ್ಯಾದಿ ಪರಿಹಾರವಾಗುವದು.

೧೨. ಬಜೆಯು † ಅಗ್ನಿದೀಪಕವೂ ಜೀರ್ಣಕರವೂ ಆಗಿರುವ ಉತ್ತಮ ಮೂಲಿಕೆಯಾಗಿರುತ್ತದೆ. ೧ ಔನ್ಸ್ ಬಜೆ ತಂದು ಜಜ್ಜಿ, ಅರ್ಧ ಬಾಟ್ಲಿ ಕುದಿಯುವ ನೀರಲ್ಲಿ ಹಾಕಿ, ಕಲ್ಕ ತೆಗಿಯ ಬೇಕು. ಈ ಕಲ್ಕವೂ ಮೇಲೆ ಹೇಳಿದ ಕಿರಿಯಾತಿನ ಕಲ್ಕವೂ ಇವೆರಡನ್ನು ಸಮಭಾಗ ಕೂಡಿಸಿ, ಒಮ್ಮೆಗೆ ೧ ವೈನ್‌ಗ್ಲಾಸ್ ಪ್ರಕಾರ ದಿನಕ್ಕೆ ೨ ಯಾ ೩ ಸಾರಿ ಕುಡಿಯುವದರಿಂದ ವಾಯುಸಮ್ಮಂಧವಾದ ಅಜೀರ್ಣವೂ ಅರುಚಿಯೂ ಸ್ವಾಭಾವಿಕ ಅಶಕ್ತಿಯೂ ಪರಿಹಾರ.

೧೩. ಸುಗಂಧಿ ಬೇರು‡ (ಅಥವಾ ನಾಮದ ಬೇರು, ನನ್ನಾರಿ ಬೇರು) ಸಹಾ ಅದೇ ಗುಣವುಳ್ಳದ್ದು. ಹೊಸತ್ತಾದ ಬೇರುಗಳು (ಹಳೆತಾದರೆ ಪ್ರಯೋಜನವಿಲ್ಲ) ೧ ಔನ್ಸ್ ತಂದು ಜಜ್ಜಿ, ½ ಶೀಸೆ ಕುದಿಯುವ ನೀರಲ್ಲಿ ಹಾಕಿ, ಬಾಯಿ ಮುಚ್ಚಿ, ೧ ತಾಸು ವರೆಗೆ ಇಡ ಬೇಕು. ಅನಂತರ ತೆಗದು, ಗಾಳಿಸಿ, ಬರುವ ಕಲ್ಕವನ್ನು ಒಮ್ಮೆಗೆ ೨-೩ ಔನ್ಸ್ ಪ್ರಕಾರ ದಿನಕ್ಕೆ ಮೂರಾವರ್ತಿ ಕುಡಿಯುವದು ಒಳ್ಳೇದು; ಮಕ್ಕಳಿಗಾದರೆ, ಇದರ ಅರೆವಾಶಿ ಸಾಕು. ಅದು ಬೆಚ್ಚಗಿರುವಾಗಲೇ ಕುಡಿದರೆ, ಹೆಚ್ಚು ಪ್ರಯೋಜನ ಉಂಟು. ಇದಕ್ಕೆ ಹಾಲೂ ಸಕ್ಕರೆಯೂ ಕೂಡಿಸಿ, ಚಾ ನೀರಿನಂತೆ ಕುಡಿಯ ಬಹುದು. ಹೀಗೆ

* ೧ ಪೈಂಟ್=೨೦ ಔನ್ಸ್. † Engl: Acorus, or Sweet Flag Root; ಮಹಾ: ವೇಖಂಡ; ಮಲ: ವಯಂಬು; ತಮ: ವಶಂಬು.

‡ Engl: Country Sarsaparilla; ತೆಲು: ಪಾಲಚುಕ್ಕಂ, ಸುಗಂಧಪಾಲ; ಮಲ: ನನ್ನಾರಿಕಿಟಿಂಜ, ನರುನೀಂಟಿ.

ಮಾಡಿದರೆ, ಮಕ್ಕಳು ಸಹಾ ಸಂತೋಷದಿಂದ ಕುಡಿದಾರು. ಇದನ್ನು ಕಳೆಗುಂದಿದ ಅಶಕ್ತ ಮಕ್ಕಳಿಗೆ ಕೊಟ್ಟರೆ, ಬಹಳ ಪ್ರಯೋಜನವಾಗುವದು.

೧೪. ಅಮೃತಬಳ್ಳಿ* ಸಹಾ ಉತ್ತಮ ಅಗ್ನಿದೀಪಕ ಔಷಧ. ಇದರ ಸಹಮೂಲವನ್ನು ಬೇಸಿಗೆಕಾಲದಲ್ಲಿ ತೆಗಿಯ ಬೇಕು; ಯಾಕಂದರೆ, ಆಗ ಅದಕ್ಕೆ ಒಳ್ಳೇ ಗುಣವಿರುವ ಕಹಿ ವಿಶೇಷ ಉಂಟು. ಇದರ ೧ ಔನ್ಸ್ ಜಜ್ಜಿ, ಅರ್ಧ ಶೀಸೆ ತಣ್ಣೀರಲ್ಲಿ ನೆನೆ ಹಾಕಿ, ೩ ತಾಸು ವರೆಗಿಟ್ಟು, ಬಳಿಕ ಗಾಳಿಸಿ ತೆಗಿಯ ಬೇಕು. ಈ ನೀರು ೧-೩ ಔನ್ಸ್ ದಿನಕ್ಕೆ ಮೂರಾವರ್ತಿ ಕುಡಿಯುವದು. ಇದಕ್ಕೆ ಅಷ್ಟೇ ಲವಂಗಚಕ್ಕೆಯ ಕಲ್ಕನೀರನ್ನು ಕೂಡಿಸಿದರೆ, ಇನ್ನಷ್ಟು ಹಿತರಕರವಾಗುವದು. ಇದು ದೇಹದ ಅಶಕ್ತಿಗೂ, ಅಜೀರ್ಣ ರೋಗಕ್ಕೂ, ಸಾಧಾರಣ ಜ್ವರಕ್ಕೂ, ಅದರಿಂದಾಗಲೀ ಇತರ ಜ್ವರಗಳಿಂದಾಗಲೀ ಬರುವ ಅರುಚಿಗೂ, ದೀರ್ಘಕಾಲದ ವಾತಕ್ಕೂ ಒಳ್ಳೇ ಫಲಕರವೇ.

೧೫. ಓಮವು† ತೀವ್ರವಾದ ಸುಗಂಧವುಳ್ಳದ್ದಾಗಿ, ಊರೌಷಧಗಳಲ್ಲಿ ವಿಶೇಷವಾಗಿರುತ್ತದೆ. ಇದರಲ್ಲಿ ಸಾಸಿವೆಯಂಥಾ ಉತ್ತೇಜಕ ಗುಣವೂ, ಕಿರಿಯಾತಿನಂಥ ಸ್ವಲ್ಪ ಕಹಿ ಗುಣವೂ, ಹಿಂಗಿನಂಥಾ ಶಳವುನಿವಾರಕ ಗುಣವೂ ಕೂಡಿರುತ್ತವೆ. ಇದರ ಸಾಧಾರಣ ಉಪಯೋಗದಿಂದ ಉಗುಳುನೀರು ಹೆಚ್ಚುತ್ತದೆ, ಜಠರದ್ರವ ವೃದ್ಧಿಸುತ್ತದೆ. ಒಟ್ಟಾರೆ ಇದು ಉತ್ತೇಜಕವಾಗಿಯೂ, ವಾಯುಹರವಾಗಿಯೂ, ಅಗ್ನಿದೀಪಕವಾಗಿಯೂ ಇರುತ್ತದೆ. ಅಜೀರ್ಣದಿಂದ ಕಾರುವದು; ಆಹಾರದೋಷದಿಂದ ಉಂಟಾಗುವ ಹೊಟ್ಟೆ ನೋವು ಅಥವಾ ಅತಿಸಾರ; ಸಾಧಾರಣ ವಾಯುವುಪದ್ರವ, ಕುಕ್ಷಿಯು ವಾಯುವಿನಿಂದ ಉಬ್ಬೋಣ; ಮೂರ್ಛೆ, ನಿತ್ರಾಣ; ಕೀಳ್ಕರುಳುಗಳ ವ್ಯಾಧಿ, ಛರ್ದಿಯಾತಿಸಾರ; ಮತ್ತು ಮುಖ್ಯವಾಗಿ ಮಕ್ಕಳ ಅತಿಸಾರ, ವಾಯುಸಮ್ಮಂಧವಾದ ಉದರಶೂಲೆ; ಇವುಗಳಲ್ಲಿ ಓಮದ ಸತ್ವ ತೆಗದು ಕೊಡುವದು ಬಹಳ ಗುಣಕರ. ಸತ್ವ ತೆಗಿಯುವ ಕ್ರಮ ಹ್ಯಾಗಂದರೆ: ೩೧ ರಾತ್ಲ ಓಮವನ್ನು ಜಜ್ಜಿ, ಒಂದು ತೆಳ್ಳಗಾದ ವಸ್ತ್ರದಲ್ಲಿ ಕಟ್ಟಿ, ೬ ಬಾಟ್ಲಿ ನೀರಿನಲ್ಲಿ ಬಟ್ಟಿ ಇಳಿಸುವದು. ಇದಕ್ಕಾಗಿ ನೀರನ್ನು ಬಟ್ಟಿ ಇಳಿಸಲಿಕ್ಕನುಕೂಲವಿರುವ ಒಂದು ಪಾತ್ರೆಯಲ್ಲಿ ಹಾಕಿ, ಒಲೆಯ ಮೇಲಿಟ್ಟು, ಅದರೊಳಗೆ ನೀರಿಗೆ ಮುಟ್ಟದಂತೆ, ಉಬ್ಬೇ ಮೇಲೆ ಆ ಓಮದ ಗಂಟನ್ನು ಕಟ್ಟೆ, ಬಾಯಿ ಮುಚ್ಚ ಬೇಕು. ಹೀಗೆ ಬಟ್ಟಿ ಕಟ್ಟೆ ೪ ಬಾಟ್ಲಿ ನೀರು ಇಳಿದು ಹೋಗ ಬೇಕು. ಈ ಪ್ರಕಾರ ತೆಗದ ಸಾರವನ್ನು ಅವಶ್ಯಬಿದ್ದಾಗ ೧-೨ ಔನ್ಸ್ ಕುಡಿಯ ಬಹುದು. ಮಕ್ಕಳಿಗಾದರೆ, ಅವರ ಪ್ರಾಯಕ್ಕನುಸಾರವಾಗಿ, ೧ ಚಾ ಚಮ್ಚೆಯಿಂದ ಮೇಜಿನ ಚಮ್ಚೆ ವರೆಗೆ ಕೊಡ ಬಹುದು. ಈ ಓಮವನ್ನು ಬಟ್ಟಿ ಇಳಿಸಿ ಎಣ್ಣೆ ಸಹಾ ತೆಗಿಯುತ್ತಾರೆ. ಹಾಗೆ ತೆಗದ ಎಣ್ಣೆಯು ಒಂದಿಷ್ಟು ಸಕ್ಕರೆಯಲ್ಲಿ ೧-೩ ತಟುಕುಗಳು ಹಾಕಿ, ಅಥವಾ ಅರಬಿ ಗೋಂದಿನ ಸಂಗಡ ಲೇಹ್ಯ ಮಾಡಿ ಸಹಾ ಕೊಡ ಬಹುದು.

* Engl: Gulancha; ಮಹಾ: ಗುಲವೇಲಿ; ತೆಲು: ಗಡೂಚಿ; ಹಿಂದು: ಗುಲ್‌ಬೇಲ್, ಗುಲಂಚಾ.

† Engl: Ptychotis, Ajwain or Omum Seed; ಹಿಂದು: ಅಜ್ವಾನ್; ತಮ: ಓಮುಮ್; ತೆಲು: ವಾಮಮು; ಮಲ: ಅಯಮೋದಕಂ; ಮಹಾ: ವೋವಾ.

೧೬. ಅಜೀರ್ಣದಿಂದ ವಿಶೇಷ ಮಲಶೋಧನೆ ಉಂಟಾದರೆ, ೧೦-೧೩ ಗ್ರೇನ್ ಮುತ್ತಗದ ಗೋಂದು* ಹುಡಿ ಮಾಡಿ, ಸ್ವಲ್ಪ ಗ್ರೇನ್ ಲವಂಗಚಕ್ಕೆಯ ಚೂರ್ಣದ ಸಂಗಡ ಕೂಡಿಸಿ ಕೊಡುವದು. ಇದಕ್ಕೆ ಸ್ತಂಭಕ ಗುಣವಿದ್ದು, ಫಲದಲ್ಲಿ ಸೌಮ್ಯವಾಗಿರುವದರಿಂದ, ಮಕ್ಕಳಿಗಾಗಲೀ ಬಲಹೀನ ಸ್ತ್ರೀಯರಿಗಾಗಲೀ ಈ ಔಷಧ ತಕ್ಕದ್ದಾಗಿರುತ್ತದೆ. ಇದು ಬಹಳ ಕಾಲದ ಅತಿಸಾರಕ್ಕೂ ಆಗುತ್ತದೆ. ಆ ಚೂರ್ಣಕ್ಕೆ ಬಹು ಸ್ವಲ್ಪ ಅಫೀಮ್ ಕೂಡಿಸಿ ಸೇವಿಸಿದರೆ, ಅದಕ್ಕೆ ಇನ್ನಷ್ಟು ಗುಣ ಬಂದೀತು.

೧೭. ಅಜೀರ್ಣದಿಂದ ಅನ್ನಕೋಶದಲ್ಲಿ ಹುಳಿವು ಆಮ್ಲ ಬಂದರೆ, (ದೊಡ್ಡವರಿಗಾದರೆ) ೧½-೨ ಔನ್ಸ್ ಸುಣ್ಣದ ತಿಳಿನೀರಿಗೆ ಸಮ ಭಾಗ ಹಾಲು ಕೂಡಿಸಿ, ದಿನಕ್ಕೆ ೨-೩ ಸಾರಿ ಕುಡಿಯುವದು. ಇದು ಅನ್ನಕೋಶದ ಹುಳಿವು, ಎದೆಯುರಿ ಇಂಥಾದ್ದು ಗುಣಪಡಿಸುವದು ಮಾತ್ರವಲ್ಲದೆ ಮೂತ್ರ ಅರಶಿನ ಬಣ್ಣದ್ದಾಗಿ ತಟುಕಾಗಿ ಬೀಳುವದು, ವಾಂತಿ, ಹುಳಿ ತೇಗು ಮುಂತಾದ ಲಕ್ಷಣಗಳುಳ್ಳ ಅಜೀರ್ಣ ಸಹಾ ನಿಲ್ಲಿಸಿ ಬಿಡುತ್ತದೆ. ಆ ಸುಣ್ಣದ ತಿಳಿನೀರು ಮಾಡುವದು ಹ್ಯಾಗಂದರೆ:—

೧೮. ೨ ಔನ್ಸ್ ಹೊಸ್ತಾಗಿ ಸುಟ್ಟ ಸುಣ್ಣವನ್ನು ೧ ಗೆಲ್ಲೋನ್ (ನಾಲ್ಕು ಶೀಸೆ) ನೀರು ಹಾಕಿದ ಒಂದು ಪಾತ್ರದಲ್ಲಿ ಹಾಕಿ, ಬಾಯಿ ಮುಚ್ಚಿ, ೨-೩ ನಿಮಿಷಗಳ ವರೆಗೆ ಚನ್ನಾಗಿ ಅಲಗಾಡಿಸ ಬೇಕು. ಮತ್ತು ಕನಿಷ್ಟ ಪಕ್ಷಕ್ಕೆ ೧೨ ತಾಸು ವರೆಗಾದರೂ ಅದನ್ನು ಅಲಗಾಡಿಸದೆ ಒತ್ತಟ್ಟಿಗೆ ಇಡ ಬೇಕು. (ಉರಿ ಮುಂತಾದ್ದಕ್ಕೆ, ಅವಶ್ಯವಿದ್ದರೆ, ½ ಘಂಟೆಯಾದರೂ ಇಟ್ಟರೆ ಸಾಕು.) ಸುಣ್ಣವೆಲ್ಲ ಅಡಿಯಲ್ಲಿ ಇಳಿದು ಕೂಡಲು, ಮೇಲಿನ ತಿಳಿನೀರು ಮಾತ್ರ ಬೇರೊಂದು ಬಾಟ್ಲಿಯಲ್ಲಿ ತೆಗಿಯ ಬೇಕು. ಈ ಪ್ರಕಾರ ಒಮ್ಮೆಯೇ ಬೇಕಾದಷ್ಟು ನೀರು ಮಾಡಿ, ಘಾಳಿ ಹೊಗದಂತೆ ಬಿಮ್ಮಗಿನ ಬೂಚು ಇರುವ ಒಂದು ಶೀಸೆಯಲ್ಲಿ ಹಾಕಿ ದಾಸ್ತಾನು ಇಡ ಬಹುದು.

೧೯. ಮಕ್ಕಳಿಗಾದರೆ, ಸುಣ್ಣದ ಶೀನೀರು ಮಾಡಿದರೆ, ಹೊಟ್ಟೆಯೊಳಗೆ ಕೊಡಲಿಕ್ಕೆ ಒಳ್ಳೇದು; ಅದು ಹ್ಯಾಗಂದರೆ: ೧ ಔನ್ಸ್ ಸುಟ್ಟ ಸುಣ್ಣಕ್ಕೆ ೨ ಔನ್ಸ್ ಬಿಳೀ ಸಕ್ಕರೆ ಕೂಡಿಸಿ, ೧ ಪೈಂಟ್ ನೀರಲ್ಲಿ ಹಾಕಿ, ಮೇಲೆ ಹೇಳಿದಂತೆ ಮಾಡಿ, ತಿಳಿನೀರು ತೆಗಿಯುವದು. ಇದನ್ನು ಸಹಾ ಬಾಟ್ಲಿಯಲ್ಲಿ ಹಾಕಿ ಬಂದೋಬಸ್ತಾಗಿ ಇಡ ಬೇಕು. ಈ ನೀರು ಹಾಲಿನಲ್ಲಿ ೧೫-೨೦ ತಟುಕುಗಳು ಹಾಕಿ ದಿವಸಕ್ಕೆ ೨-೩ ಸಾರಿ ಕೊಡ ಬಹುದು.

೨೦. ಅಜೀರ್ಣದಿಂದ ಕೀಳ್ಕರುಳುಗಳು ಸ್ತಬ್ಧವಾದರೆ, ಸಣ್ಣ ಚೂರು ಮಾಡಿದ ೬ ಔನ್ಸ್ ಕಿರಿಯಾತು (ನೆಲಬೇವು), ದೊರಗಾಗಿ ಪುಡಿ ಮಾಡಿದ ಬೋಳ (ಬೋಲಿ myrrh) ಮತ್ತು ರಕ್ತಬೋಳ, ಒಂದೊಂದು ಔನ್ಸ್, ಈ ಮೂರು ಬಗೆಯನ್ನು ೨ ಪೈಂಟ್ ಬ್ರ್ಯಾಂಡಿ (brandy) ಎಂಬ ಸಾರಾಯಿಯಲ್ಲಿ ತೋಯಿಸಿ, ಮುಚ್ಚಿ, ಆಗ್ಯಾಗ್ಯೆ ಅಲಗಾಡಿಸುತ್ತಾ ಏಳು ದಿವಸದ ವರೆಗೆ ಇಡ ಬೇಕು. ತರುವಾಯ ಅದರಲ್ಲಿರುವ ಜಿಗಟಿಯ

*Engl: Butea Gum; Bengal Kino; ಹಿಂದು: ಪಲಾಶಕೀಗೋಂದ್; ಮಲ: ಪ್ಲಾಚ್ಚ ಪಶ; ತೆಲು: ಮೋದುಗಬಂಕ, ಪಲಾಶಬಂಕ; ತಮ: ಮುರುಕ್ಕನ್‌ಪಿಶಿನ್, ಪಲಾಶಪಿಶಿನ್.

ನ್ನು ಹಿಂಡಿ ತೆಗದು, ಗಾಳಿಸ ಬೇಕು. ಆ ಬ್ರಾಂಡಿ ಕಡಿಮೆಯಾದರೆ, ಅದಕ್ಕೆ ಒಟ್ಟು ೨ ಪೈಂಟಿಗೆ ಭರ್ತಿಯಾಗಿ ಹೆಚ್ಚಿಗೆ ಬ್ರಾಂಡಿ ಕೂಡಿಸ ಬಹುದು. ಇದರಿಂದ ೧-೪ ಚಮ್ಚೆಯಷ್ಟು ತೆಗದು ಸ್ವಲ್ಪ ನೀರಲ್ಲಿ ಕೂಡಿಸಿ, ಬರೀ ಹೊಟ್ಟೆಯಲ್ಲಿ ತಕ್ಕೊಳ್ಳುವದು. ಇದು ಮಲಭೇದಿಕರವಾಗಿದೆ, ಮೇಲೆ ಹೇಳಿದ ಅಜೀರ್ಣ ಹರ.

ರೋಗಿಯು ಅನ್ನಪಾನಾದಿಗಳಲ್ಲಿ ಬಹಳ ನಿಯತವಾಗಿದ್ದು ತಕ್ಕ ಪಥ್ಯ ಮಾಡಿ ಮಲಶೋಧನೆ ಮುಂತಾದ್ದರಲ್ಲಿ ಕ್ರಮ ಪಡಿಸಿದ ಹೊರ್ತು ಔಷಧಗಳಿಂದ ಮಾತ್ರ ಫಲ ನಿರೀಕ್ಷಿಸಲಾಗದು.

ಅಜೀರ್ಣಾಂಶ (ಅಂತರ್ವಮಿ, ಒಂದು ತರದ ಆಮ್ಲಪೈತ್ಯ)
Waterbrash (Pyrosis).

ಇದೊಂದು ಅಜೀರ್ಣದ ಲಕ್ಷಣ. ಬಹುಶಾ ಸಸ್ಯಾದಿ ಮಾತ್ರವೇ ತಿನ್ನುವ ಅಭ್ಯಾಸದಿಂದ ಉಂಟಾಗುತ್ತದೆ. ಇದು ಸಾಧಾರಣವಾಗಿ ಹೊಟ್ಟೆಯಲ್ಲಿ ಉರಿಯೂ (ಮುಖ್ಯವಾಗಿ) ವೇದನೆಯೂ ಶುರುವಾಗಿ ತೊಡಗುತ್ತದೆ. ತರುವಾಯ ತೀಕ್ಷ್ಣವಾದ ಆಮ್ಲರಸವುಳ್ಳ ತೇಗು ಬರುವದು, ಮತ್ತು ಎದೆ ಉರಿ ಮುಂತಾದ ಇತರ ಅಜೀರ್ಣಚಿನ್ಹೆಗಳು ತೋರುವವು.

೨೧. ಇದಕ್ಕೆ ಮುತ್ತಗದ ಗೋಂದಿನ ಚೂರ್ಣವನ್ನು (೧೬) ಸೇವಿಸಿದರಿಂದಲೂ, ಸುಣ್ಣದ ತಿಳಿನೀರನ್ನು (೧೭) ಹಾಲಿನಲ್ಲಿ ತೆಗದು ಕೊಳ್ಳುವದರಿಂದಲೂ ಬಹಳ ಪ್ರಯೋಜನ ಉಂಟಾಗುವದು.

ಅಡಲಭ್ರಮಣೆ (ಸ್ಮರಣೆ ತಪ್ಪುವದು) Delirium.

ಇದು ಸಾಧಾರಣವಾಗಿ ಜ್ವರ ಮುಂತಾದ ಬೇರೆ ಅಸ್ವಸ್ಥದ ಸಮ್ಮಂಧವಾಗಿ ಉಂಟಾಗುವದು. ಇದಕ್ಕಾಗಿ ತಲೆಗೆ "ಉಗೆನೀರು" (೨೨) ಹಚ್ಚುವದರಿಂದಲೂ, ಕಾಲಿಗೆ ಸಾಸಿವೇ ಒತ್ತಡ (೨೩) ಆಗಲಿ, ಕೈಕಾಲುಗಳಿಗೆ ಕರ್ಪೂರ ತೈಲದ ನೀರುಗಾವು (೨೪) ಆಗಲಿ ಮಾಡಿ, ಜೋರಾದ ಭೇದಿ ಕೊಡುವದು.

೨೨. ಶಿರ್ಕ (ಹುಳಿರಸ)*, ಕಳ್ಳು, ಮತ್ತು ನೀರು, ಈ ಮೂರು ಸಮ ಭಾಗ ಕೂಡಿಸಿ, ನೆತ್ತಿಗೆ ಲೇಪಿಸುವದು. ಈ ಲೇಪ ಜ್ವರದ ಭ್ರಮೆಗೆ ಸಹಾ ಮಾಡಿ ಹಚ್ಚುತ್ತಾರೆ.

೨೩. ಸಾಸಿವೇ ಪೋಲ್ಟಿಸು ಕಾಲಡಿಗಳಿಗೂ ಮಿಾನಕಂಡಗಳಿಗೂ ಕಟ್ಟುವದರಿಂದ ಶಿರೋಭ್ರಮಣೆ ಉತಾರಾಗುತ್ತದೆ. ರೋಗಿಯು ಕೂತು ಕೊಳ್ಳಲಿಕ್ಕಾದರೆ, ಸಾಸಿವೇ ನೀರಿನ "ಪಾದಮಜ್ಜನ" ಮಾಡಿಸುವದರಿಂದ ಇನ್ನಷ್ಟು ಪ್ರಯೋಜನವುಂಟು. ಇದಕ್ಕಾಗಿ ಒಂದು ಹಿಡಿ ಸಾಸಿವೇ ಕಾಳುಗಳನ್ನು ನೀರಿನಲ್ಲಿ ಹಾಕಿ ಕಾಸಿ, ತಾಳಲಿಕ್ಕಾಗುವಷ್ಟು ಹದ ಬಿಸಿ ಇರುವಾಗ ಅದರಲ್ಲಿ ಕಾಲುಗಳು ಇರಿಸ ಬೇಕು. ಕಾಲುಗಳು ಆ ನೀರಲ್ಲಿ ಎಷ್ಟು ಮೇಲೆ ವರೆಗೆ ಮುಣುಗುತ್ತವೋ ಅಷ್ಟು ಒಳ್ಳೇದು. ಇದಾಗಲೀ ಅಥವಾ

* Engl: Vinegar; ಹಿಂದು: ಶಿರ್ಕಾ; ತಮ: ಕಾಡಿ; ತೆಲು: ಕಾಡಿನೋಳು; ಮಲ: ಕಾಟಿ.

೨೪. ಕರ್ಪೂರದ ತೈಲ (ಅಂದರೆ ತರ್ಪೆಂಟೈನ ಎಣ್ಣೆ)* ಬಾಹ್ಯ ಲೇಪನಕ್ಕೆ ಬಹಳ ಒಳ್ಳೇದು. ಇದರ ನೀರುಗಾವು ಕೊಡುವದರಿಂದ ಉರುತ ಮುಂತಾದ್ದು ಶಾಂತವಾಗುವದು ಮಾತ್ರವಲ್ಲ, ಅದರ ಶೇಕ ತಾಗದ ಇತರ ಭಾಗಗಳಿಗೂ ಸಹಾ ಗುಣಕರವಾಗಿರುತ್ತದೆ. ಈ ನೀರುಗಾವು ೨ ವಿಧವಾಗಿ ಕೊಡ ಬಹುದು:

a. ಒಂದು ಕವಳಿಗೆಯಲ್ಲಿ ಕಾಸಿದ ನೀರು ಹಾಕಿ, ಅದರಲ್ಲಿ ಕರ್ಪೂರ ತೈಲವನ್ನು ಸ್ವಲ್ಪ ಚಿಮಿಕಿಸ ಬೇಕು. ಮತ್ತು ಅದು ಬಿಶಿ ಇರುವಾಗಲೇ ಒಂದು ಉಣ್ಣೇ ವಸ್ತ್ರದ ತುಂಡನ್ನು ಅದರಲ್ಲಿ ಅದ್ದಿ ತೆಗದು, ಹಿಂಡಿ, ಶೇಕ ಕೊಡುವದು.

b. ಒಂದು ನಾರಿನ ಅಥವಾ ಹಳೇ ವಸ್ತ್ರದ ತುಂಡನ್ನು ಕರ್ಪೂರದ ತೈಲದಲ್ಲಿ ಅದ್ದಿ, ಅಸ್ವಸ್ಥದ ಜಾಗದ ಮೇಲೆ ಇಟ್ಟು, ಅದರ ಮೇಲೆ ತಾಳಿ ಕೊಳ್ಳುವಷ್ಟು ಬಿಶಿ ಮಾಡಿದ ಉಣ್ಣೇ ವಸ್ತ್ರದಿಂದ ಶೇಕ ಕೊಡುವದು.

ಇವೆರಡರಲ್ಲಿ ಯಾವದಾದರೂ ಒಂದರ ಪ್ರಕಾರ ಪಾದಗಳಿಗೂ ಕಾಲಿನ ಮೀನಕಂಡಗಳಿಗೂ ಮೈಕೊನೆಗಳಿಗೂ ಶೇಕ ಕೊಟ್ಟರೆ, ಸ್ವಯ ತಪ್ಪಿದ್ದಕ್ಕೂ ಮಂದಸನ್ನಿಗೂ ಜ್ವರದಿಂದಾಗಲೀ ಅನ್ಯಥಾ ಆಗಲೀ ಬರುವ ಅಡಲಭ್ರಮಣೆಗೂ ಒಳ್ಳೇ ಗುಣ ಶಿಕ್ಕುವದು.

ಇದು ಹೊರ್ತು ಚನ್ನಾಗಿ ಜುಲಾಬು ಆಗುವ ಔಷಧ ಸಹಾ ಕೊಡ ಬೇಕು.

ಅತಿಸಾರ (ಹೊಟ್ಟೆ ಝಾಡಿಸುವದು) Diarrhœa (Looseness of the Bowels).

ಅತಿಸಾರವಂದರೆ ತೆಳು ಜುಲಾಬು ಆಗುವದೊಂದು ಕೀಳ್ಕರುಳುಗಳ ಅಕ್ರಮ. ಸಾಧಾರಣವಾಗಿ ಇದಕ್ಕೆ ಕಾರಣಗಳು: ಶೀತವಾಗಲೀ ತ್ಯಾವವಾಗಲೀ (ನೀರುಚಮ್ಮವಾಗಲೀ) ಥಂಡಿಯಾಗಲೀ ಮೈಗೆ ತಟ್ಟುವದು, ನೀರಿನಿಂದ ಮೈ ಚಂಡಿಯಾಗುವದು, ತಿಂದ ಆಹಾರ ಹೆಚ್ಚಾದದರಿಂದಾಗಲೀ ಜೀರ್ಣಕ್ಕೆ ಪ್ರಯಾಸವಾದ ಆಹಾರ ತಿಂದದರಿಂದಾಗಲೀ ಅಜೀರ್ಣವಾಗುವದು. ಭಯ, ದಿಗಿಲು, ಕಳವಳ, ವ್ಯಸನ, ವ್ಯಾಕುಲ ಮುಂತಾದ ತಾಪೋದ್ರೇಕದಿಂದ ಸಹಾ ಅತಿಸಾರವಾಗುವದುಂಟು. ಅತಿಸಾರವು ಬೇರೆ ರೋಗಗಳ ಸಂಗಡಲೂ ಅವಕ್ಕೆ ಹಿಂದಾಗಿಯೂ ಬರುತ್ತದೆ. ಹೊಟ್ಟೆ ಕಳೆಯುವ ಈ ರೋಗದಲ್ಲಿ ವಾಯುವುಪದ್ರವ, ಹೊಟ್ಟೆಯಲ್ಲಿ ಕಠಿಣ ನೋವು, ವಾಕರಿಕೆ, ಬಾಯಾರಿಕೆ, ನಾಲಿಗೆ ಮೇಲೆ ಬಿಳಿದಾದ ಅಗ್ರ, ನಾತವುಳ್ಳ ಶ್ವಾಸ, ಕ್ಷೀಣತೆ ಇತ್ಯಾದಿ ಅದರ ಚಿನ್ಹೆಗಳು. ಅತಿಸಾರಕ್ಕೂ ರಕ್ತಾತಿಸಾರಕ್ಕೂ (dysentery) ಭೇದ ಇಷ್ಟೇ: ಮೊದಲನೇದಕ್ಕೆ ಜ್ವರ ಬರುವದಿಲ್ಲ; ಮಲವಾಗುವಾಗ ಬಸಿದು ಕೊಳ್ಳುವದಿಲ್ಲ; ರಕ್ತವಾಗಲೀ ಆಮವಾಗಲೀ ಹೋಗುವದಿಲ್ಲ; ಮಲವು ತೆಳುವಾಗಿ ಬಹಳ ಹೋಗುವದು.

* **Engl: Oil of Turpentine.** ಅಂಗಡಿಗಳಲ್ಲಿ ಶಿಕ್ಕುವ ಈ ಎಣ್ಣೆಯು ಸಾಧಾರಣವಾಗಿ ಅಷ್ಟು ಶುದ್ಧವಿಲ್ಲವಾದರಿಂದ, ಅಂಥಾದ್ದು ಹೊಟ್ಟೆಯೊಳಗೆ ತಕ್ಕೊಳ್ಳಲಿಕ್ಕೆ ತಕ್ಕದ್ದಲ್ಲ.

ಇದರ ಶುರುವಿನಲ್ಲಿ ಸ್ವಲ್ಪ ಮೈಬಿಸುಪು ಇದ್ದು, ಆಹಾರ ಜೀರ್ಣವಾಗದೆ ಹೊಟ್ಟೆಯಲ್ಲಿ ಉಳದಿರುತ್ತದೆಂದು ನೆನಸುವದಕ್ಕೆ ಕಾರಣವಿದ್ದರೆ, ಮೊದಲಾಗಿ ಸಾಧಾರಣ ವಿರೇಚನೆಯಾಗುವದಕ್ಕೆ ಹರಳೆಣ್ಣೆಯಾಗಲೀ ಬೇರೆ ಭೇದಿಯಾಗಲೀ ತಕ್ಕೊಂಡು, ಮತ್ತೆ ಕಿರುಮಂಜಿಯನ್ನೂ (೨೫), ಇಸಬಕೋಲ ಬೀಜವನ್ನೂ (೨೬) ತಕ್ಕೊಳ್ಳಬೇಕು. ಹ್ಯಾಗಂದರೆ:

೨೫. ಅತಿಸಾರ ಮತ್ತು ರಕ್ತಾತಿಸಾರದ ಶುರುವಿನಲ್ಲಿ (ಮೈ ಕಾಯುವದಿದ್ದರೂ) ೫-೧೦ ಗ್ರೇನ್ ಕಿರುಮಂಜಿ* ಎಲೆಯ ಹುಡಿಯನ್ನು ೨೦ ಗ್ರೇನ್ ಗೋಂದು ಮತ್ತು ೧/೨ ಗ್ರೇನ್ ಅಫೀಮಿಯ ಸಂಗಡ ಬೆರಿಸಿ, ದಿನಕ್ಕೆ ೩-೪ ಸಾರಿ ಕೊಡುವದು. ರಕ್ತಾತಿಸಾರವು ವರಿಸೇ ಜ್ವರದ ಅಥವಾ ಮಲೇ ಜ್ವರದ ಸಮ್ಮಂಧವಾಗಿ ಉಂಟಾದ್ದಾಗಿದ್ದರೆ, ಆ ಎಲೆಗಳ ಚೂರ್ಣವನ್ನು (quinine) ಕೊಯನನ್ ಸಂಗಡ ಕೊಡ ಬೇಕು.

೨೬. ಇಸಬಕೋಲ ಬೀಜ† ದೀರ್ಘಕಾಲದ ಅತಿಸಾರದಲ್ಲಿ (ಮುಖ್ಯವಾಗಿ ಈ ದೇಶಕ್ಕೆ ಬಂದು ವಾಸವಾಗಿರುವ ವಿಲಾಯತಿಯವರಿಗೆ) ಇತರ ಯಾವ ಮದ್ದಿಗಿಂತಲೂ ಮೇಲಾದ ಔಷಧವಾಗಿರುತ್ತದಂತೆ. ದೊಡ್ಡವರಾದರೆ, ೨೧/೨ ದ್ರಮ್ ಆ ಬೀಜಗಳನ್ನು ೧/೨ ದ್ರಮ್ ಕಲ್ಲುಸಕ್ಕರೇ ಸಂಗಡ ತಕ್ಕೊಳ್ಳುವದು. ಆದರೆ ಆ ಬೀಜಗಳು ಮುಂಚಿತಾಗಿ ಸ್ವಲ್ಪ ಒಣಗಿಸಿ ಅಥವಾ ಕಾಸಿ ಉಪಯೋಗಿಸಿದರೆ, ಅದಕ್ಕೆ ತಕ್ಕಷ್ಟು ಸ್ತಂಭಕ ಮತ್ತು ಅಗ್ನಿದೀಪಕ ಗುಣ ಬರುವದು.

ಅತಿಸಾರವು ಕಠಿಣವಾದರೆ ಅಥವಾ ದೀರ್ಘ ಕಾಲದ್ದಾದರೆ, ಮೈಲತುತ್ತು (೨೭), ಕಾಚು (೨೮), ಘಟಿಕಾರ (೨೯), ಇಲ್ಲವೆ ಈ ಕೆಳಗಿನ ಯಾವದಾದರೊಂದು ಗುಣಕರವಾಗಿ ಕೊಡ ಬಹುದು: ಕರಿಜಲೀ ಮರದ (ಕರಿಜಾಲೀಶಕ್ಕೆ ಇಲ್ಲವೆ ಶಮಿ ಮರದ) ಕೆತ್ತೆಯ ಕಷಾಯ (೩೦), ಬಜೆಯ ಕಲ್ಕ ನೀರು (೩೧), ಬಿಲ್ವಪತ್ರಿಯ ಪಾನಕ (೩೨), ಮುತ್ತಗದ ಗೋಂದು (೩೩), ಮಾಚೀಕಾಯಿಯ ಚೂರ್ಣ (೩೪), ದಾಳಿಂಬೀ ಕಷಾಯ (೩೫), ಮತ್ತು ಓಮದ ಸತ್ವ (೩೬).—ಇವುಗಳಲ್ಲಿ ಯಾವದಾದರೂ ತಕ್ಕೊಳ್ಳುವಾಗ, ಅದಕ್ಕೆ ಸ್ವಲ್ಪ ಅಫೀಮಿ ಸಹಾ (ಅವಶ್ಯ ಕಂಡರೆ) ಕೂಡಿಸಿ ತಕ್ಕೊಳ್ಳ ಬಹುದು. ಇವುಗಳಲ್ಲಿ ಒಂದೊಂದನ್ನು ಕೊಡುವ ವಿಧ ಹ್ಯಾಗಂದರೆ:—

---

* **Engl: Country Ipecacuanha (*or* Tylophora)**; ಹಿಂದು: ಅಂತಮೂಲ್, ಜಂಗ್ಲಿಪಿಕ್ವಾನ್; ತಮ: ಪೆಯ್ಪಾಲೈ; ನಾಯ್ಪಾಲೈ; ತೆಲು: ಕುಕ್ಕಪಾಲ, ವೆರ್ರಿಪಾಲ; ಮಲ: ವಳ್ಳಿಪಾಲ.—ಇದರ ಸಹಮೂಲವು ವಿಶೇಷ ವಾಂತಿ ಮಾಡುವ ಗುಣ ಉಳ್ಳದ್ದು. ಅಂಗಡಿಗಳಲ್ಲಿ ಇದರ ತುಂಡು ಮಾಡಿದ ಬೇರು ಶಿಕ್ಕುತ್ತದೆ. ರಕ್ತಾತಿಸಾರ ನಿಲ್ಲಿಸುವದಕ್ಕೂ ಕಾರುವ ಔಷಧವಾಗಿಯೂ ಇದು ಬಹಳ ಪ್ರಶಸ್ತವಾದ್ದು.

† **Engl: Plantago (*or* Ispaghul Seed)**; ಹಿಂದು: ಇಸ್ಪಘೂಲ್, (ಸಬ್ಜಾ?); ತಮ: ಇಸ್ಕೋಲ್ವಿರೈ; ತೆಲು: ಇಸಪಗಾಲ ವಿತ್ತುಲು; ಮಹಾ: ಇಸಬಗೋಲ.—ಈ ಬೀಜಗಳು ನೀರಿನಲ್ಲಿ ಹಾಕಲು ಉಬ್ಬಿ ಮೆತ್ತಗಾಗುವ ವಿಶೇಷ ಜಿಗಟಾದ ಕಾಳುಗಳಾಗಿರುತ್ತವೆ.

೨೭. ಸಣ್ಣ ಹುಡಿ ಮಾಡಿದ ೬ ಗ್ರೇನ್ ಮೈಲತುತ್ತು* ಅಷ್ಟೇ ಅಫೀಮಿಯ ಸಂಗಡ ಕೂಡಿಸಿ, ಚನ್ನಾಗಿ ಮರ್ಧಿಸಿ, ಸ್ವಲ್ಪ ಜೇನು ಸಹಾ ಕೂಡಿಸಿ, ಸರಿಯಾದ ೧೨ ಮಾತ್ರೆಗಳು ಮಾಡಿ, ೧ ಮಾತ್ರೆ ದಿನಕ್ಕೆ ೩ ಸಾರಿ ತೆಗದು ಕೊಳ್ಳುವದು ಪ್ರಾಯದವರಿಗೆ ತಕ್ಕದ್ದು. ಇದರಿಂದ ಝಾಡೆ ನಿಂತು ಹೋಗುವದು.

೨೮. ಕಾಚು† ಸಣ್ಣ ಹುಡಿ ಮಾಡಿ, ೧೦ ಯಾ ೧೫ ಗ್ರೇನ್ ತೆಗದು, ಅದಕ್ಕೆ ಅಷ್ಟೇ ಲವಂಗಚಕ್ಕೇ ಕೂಡಿಸಿ, ಸ್ವಲ್ಪ ಜೇನಿನಲ್ಲಾಗಲೀ ಬೆಲ್ಲದಲ್ಲಾಗಲೀ ಕಲಕಿಸಿ, ದಿವಸಕ್ಕೆ ೩-೪ ಸಾರಿ ಕೊಡುವದು. ಇಲ್ಲದಿದ್ದರೆ, ಅವೆರಡು ಬಗೆಯ ಕಲ್ಕನೀರು ಮಾಡಿ ಸಹಾ ಕೊಡ ಬಹುದು; ಹ್ಯಾಗಂದರೆ: ೩ ದ್ರಮ್ ಜಜ್ಜಿದ ಕಾಚು ಮತ್ತು ೧ ದ್ರಮ್ ಲವಂಗಚಕ್ಕೆ ಅರ್ಧ ಪೈಂಟ್ ಕುದಿಯುವ ನೀರಲ್ಲಿ ೨ ತಾಸು ವರೆಗೆ ಕಲ್ಕಕ್ಕೆ ಇಟ್ಟು, ಗಾಳಿಸುವದು. ಇದನ್ನು ಒಮ್ಮೆಗೆ ೧½-೨ ಔನ್ಸ್ ಪ್ರಕಾರ ದಿನಕ್ಕೆ ೩ ಸಾರಿ ತಕ್ಕೊಳ್ಳ ಬಹುದು. ತಕ್ಕೊಳ್ಳುವಾಗ ಇದರಲ್ಲಿ ಅಫೀಮಿ ಸತ್ವದ (laudanum) ೫-೧೦ ತಟುಕುಗಳನ್ನು ಬಿಟ್ಟರೆ, ಇನ್ನಷ್ಟು ಗುಣಕರವಾದೀತು. ಇದು ದೊಡ್ಡವರಿಗೆ ಮಾತ್ರ ಕೊಡಲಿಕ್ಕೆ ತಕ್ಕದ್ದು.

೨೯. ೧೦ ಗ್ರೇನ್ ಘಟಿಕಾರವನ್ನು‡ ಒಂದುವರೆ ಔನ್ಸ್ ಬಜೀ ಕಲ್ಕದಲ್ಲಿ (೧೨) ಕಲಕಿಸಿ, ಅದರಲ್ಲಿ ೫ ತಟುಕು ಅಫೀಮಿ ಸತ್ವ ಬಿಟ್ಟು, ದಿನಕ್ಕೆ ೩-೪ ಸಾರಿ ತಕ್ಕೊಳ್ಳುವದು. ವಾಂತಿಭ್ರಾಂತಿಗೆ ಮುಂದಾಗಿ ಬರುವ ಅತಿಸಾರವಾದರೆ, ಇದೊಂದು ಚೂರ್ಣ ಮಾಡಿ ತಕ್ಕೊಳ್ಳ ಬಹುದು: ಘಟಿಕಾರ, ಕಾಚು, ಲವಂಗಚಕ್ಕೆ, ಒಂದೊಂದು ಬಗೆ ೧೦ ಗ್ರೇನ್, ಪುಡಿ ಮಾಡಿ, ಒಟ್ಟು ಕೂಡಿಸಿ, ಜೇನಿನಲ್ಲಿ ಕಲಸಿ ತಕ್ಕೊಳ್ಳುವದು. ಇದು ಸಂಗತ್ಯಾನುಸಾರವಾಗಿ, ತಾಸಿಗೆ ಅಥವಾ ೨ ತಾಸಿಗೆ ಒಂದು ಸಾರಿ ಪ್ರಕಾರ ಸೇವಿಸ ಬಹುದು. ಇದು ಕ್ಷಯರೋಗದ ಅತಿಸಾರವನ್ನು ಸಹಾ ನಿಲ್ಲಿಸುವದಕ್ಕೆ ಪ್ರಯೋಜನವಾಗಿದೆ.

೩೦. ಕರಿಜಲೀ ಮರದ§ (ಕರಿಜಾಲೀಶಕ್ಕೆ ಇಲ್ಲವೆ ಶಮಿ ಮರದ) ಕೆತ್ತೆ ೧½ ಔನ್ಸ್ ಜಜ್ಜಿ, ೧ ಪೈಂಟ್ ನೀರಲ್ಲಿ ೧೦ ನಿಮಿಷ ವರೆಗೆ ಬೇಯಿಸಿ, ಕಷಾಯ ತೆಗಿಯುವದು. ದೀರ್ಘಕಾಲದ ಅತಿಸಾರ ಮುಂತಾದ್ದಕ್ಕೆ ೧½-೨ ಔನ್ಸ್ ಪ್ರಕಾರ ದಿನಕ್ಕೆ ಎರಡಾವರ್ತಿ ಅಥವಾ ಹೆಚ್ಚು ಸಾರಿ ತಕ್ಕೊಳ್ಳುವದು. ಈ ಕೆತ್ತೆ ಬಾಹ್ಯಲೇಪನಕ್ಕೂ ಉಪಯೋಗಿಸುತ್ತಾರೆ.

---

* **Engl: Sulphate of Copper, (Blue Stone)**; ಹಿಂದು: ನೀಲತೂತಾ; ತಮ: ತುರಿಚು, ತುತ್ತಮ್‌ತುರಿಚಿ; ತೆಲು: ಮಲ: ಮಯಿಲ್‌ತುತ್ತಮ್.—ಇದು ಕರೆ ನೀಲ ಬಣ್ಣದ ಕಲ್ಲಿನಂತಿದ್ದು, ಶುಮಾರು ಹಸುರು ಅಥವಾ ಬಿಳುಪು ಹುಡಿ ಅದಕ್ಕೆ ಹತ್ತಿ ಕೊಂಡಿರುತ್ತದೆ. ಔಷಧಕ್ಕೆ ಆ ಹುಡಿ ಅಲ್ಲ, ಸ್ವಭವಾದ ಕಲ್ಲೇ ಉಪಯೋಗಿಸ ಬೇಕು.

† **Engl: Catechu**; ಹಿಂದು: ಕಾತ್; ತಮಿ: ಕಾಷು; ತೆಲು: ಕಾಂಚು; ಮಲ: ಕಾತ್ತ.—ಇದಕ್ಕೆ ಸ್ತಬ್ಧಕ ಗುಣ. ಇದರಲ್ಲಿ ಕೆಲವು ಜಾತಿಗಳವೆ. ಔಷಧಕ್ಕೆ ಬೇಕಾದ್ದು ಸ್ವಲ್ಪ ಕರ್‍ರಗಾಗಿದ್ದು, ಬಹಳ ಚೊಗುರು ರುಚಿಯುಳ್ಳದ್ದು.

‡ **Engl: Alum**; ಹಿಂದು: ಫಿತ್ಕಾರಿ; ಮಲ: ಚೀನಿಕ್ಕಾರಂ.—ಒಳ್ಳೆ ಘಟಿಕಾರವು ಸ್ಫಟಿಕದಂತೆ ಶುದ್ಧವಾಗಿದ್ದು, ಒಗರೂ ಶೀಯೂ ತೀಕ್ಷ್ಣವೂ ಮಿಳಿತವಾದ ರುಚಿಯುಳ್ಳದ್ದು.

§ **Engl: Acacia, or Babul Bark**; ಹಿಂದು: ಬಾಬುಲ್ಕೆ (*or* ಕಿಕಾರ್ಕೆ) ಚಾಲ್; ತಮ: ಕರುವೇಲಂ ಪತ್ತಯಿ.—ಈ ಕೆತ್ತೆಯು ದಪ್ಪವಾಗಿಯೂ, ನಾರುಳ್ಳದ್ದಾಗಿಯೂ, ಕಂದು ಬಣ್ಣದ್ದಾಗಿಯೂ, ಒಗರು ಕಹಿ ರುಚಿಯುಳ್ಳದ್ದಾಗಿಯೂ ಇರುತ್ತದೆ.

೩೧. ದೀರ್ಘಕಾಲದ ಅತಿಸಾರಕ್ಕಾಗಲಿ ವಾಂತಿಭ್ರಾಂತಿಗೆ ಮುಂದಾಗಿ ಬರುವ ಅತಿಸಾರಕ್ಕಾಗಲಿ ಬಜೆಯ ಕಲ್ಕನೀರು (೧೨) ಅದರಲ್ಲಿ ಅಫೀಮಿ ಸತ್ವದ ಕೆಲವು ತಟುಕುಗಳನ್ನು ಬಿಟ್ಟು, ತೆಗದು ಕೊಳ್ಳುವದರಿಂದ ಪ್ರಯೋಜನವಾದೀತು.

೩೨. ಈ ದೇಶಸ್ಥರ ಅಭಿಪ್ರಾಯದ ಪ್ರಕಾರ, ಜ್ವರ ಬಾರದೆ ಅಶಕ್ತಿಯೂ ಅದೀಪನವೂ ಮಾತ್ರ ಇರುವ ಅತಿಸಾರಕ್ಕೆ (ಬಿಲ್ವ) ಬೆಲಪತ್ರಿ ಹಣ್ಣಿನ* ಪಾನಕವು ಅಮೂಲ್ಯವಾದ ಔಷಧವಾಗಿರುತ್ತದೆಂಬದು ವಿಲಾಯತಿಯವರಿಗೆ ಸಹಾ ಅನುಭವಸಿದ್ಧಾಂತವಾಗಿರುತ್ತದೆ. ಅದು ಮಾಡುವದು ಹ್ಯಾಗಂದರೆ: ಕಾಯಿಯನ್ನು ಒಡದು, ಅದರಿಂದ ೨ ಔನ್ಸ್ ಗೋಂದನ್ನು ತೆಗದು, ೩ ಯಾ ೪ ಔನ್ಸ್ ನೀರಿನಲ್ಲಿ ಕಲಕಿಸಿ, ರುಚಿಗೆ ತಕ್ಕದ್ದಾಗಿ ಶೀ ಮಾಡಿ, ಕುಡಿಯುವದು. ಈ ಪ್ರಕಾರ ದಿನಕ್ಕೆ ೨-೩ ಸಾರಿ ಮಾಡ ಬಹುದು. ಶಿಕ್ಕಿದ ಪಕ್ಷಕ್ಕೆ, ಆ ಪಾನಕಕ್ಕೆ ಒಂದು ನೀರುಗಡ್ಡೇ ತುಂಡು ಸಹಾ ಕೂಡಿಸಿದರೆ ಆದೀತು. ಕಠಿಣ ಅತಿಸಾರವಿರುವ ಮಕ್ಕಳಿಗೂ ಇದನ್ನು ಭಯವಿಲ್ಲದೆ ಕೊಡ ಬಹುದು. ಅವರ ಪ್ರಾಯಕ್ಕನುಸಾರವಾಗಿ, ಮೇಲೆ ಹೇಳಿದಷ್ಟು ಪಾನಕದ ೧/೪ ಆಗಲೀ ೧/೨ ಆಗಲೀ ಕೊಡ ಬಹುದು.

೩೩. ಮುತ್ತಗದ ಗೋಂದು ಸಹಾ ದೀರ್ಘಕಾಲದ ಅತಿಸಾರದಲ್ಲಿ ಕೊಡುತ್ತಾರೆ. (ಕೊಡುವ ಕ್ರಮವನ್ನು ಕುರಿತು ೧೬ನೇ ಅಂಕೆಯಲ್ಲಿ ನೋಡ ಬೇಕು.)

೩೪. ಈ ದೇಶಸ್ಥರಲ್ಲಿ ಆಗುವ ದೀರ್ಘಕಾಲದ ಅತಿಸಾರಕ್ಕೆ ೧೫ ಗ್ರೇನ್ ಮಾಚೀಕಾಯಿ† ಚೂರ್ಣವನ್ನು ದಿನಕ್ಕೆ ಮೂರು ಸಾರಿ ತಕ್ಕೊಳ್ಳುವದು. ಇದಕ್ಕೆ ೧/೨ ಗ್ರೇನ್ ಅಫೀಮು ಕೂಡಿಸಿದರೆ, ಅದರ ಫಲ ಹೆಚ್ಚುವದು. (ರಕ್ತಾತಿಸಾರದಲ್ಲಿ ಇದರ ಪ್ರಯೋಗವನ್ನು ಕುರಿತು ಮುಂದೆ ನೋಡ ಬೇಕು.)

೩೫. ದಾಳಿಂಬೆಯ‡ ಹಣ್ಣಿನ ಶಿಪ್ಪೆಯು ವಿಶೇಷ ಒಗರು ಗುಣದ್ದಾಗಿ ಅತಿಸಾರ

---

* Engl: **Bael Fruit**; ಹಿಂದು: ಬೇಲ್, ಶೀಫಲ್; ತಮ: ವಿಲ್ವ, ಬಿಲ್ವ ಪಟಂ; ಮಲ: ಕೂವಲ್ ಪಟಂ.—ಔಷಧಕ್ಕೆ ಅರ್ಧಹಣ್ಣಾದ ಕಾಯಿ ಬೇಕು. ಅಂಗಡಿಗಳಲ್ಲಿ ಶಿಕ್ಕುವ ಹಳೆತಾದ ಕಾಯಿಗಿಂತ ಆಗಲೇ ಮರದಿಂದ ತೆಗದ ಕಾಯಿ ಶಿಕ್ಕಿದರೆ ಒಳ್ಳೇದು. ಅಂಗಡಿಗಳಲ್ಲಿ ಇದೆಂತ ಹೇಳಿ ಇದರ ಹಾಗೆ ತೋರುವ ಇನ್ನೊಂದು ಕಾಯಿ (wood-apple) ಕೊಡುತ್ತಾರೆ. ಅದು ನೋಡಲಿಕ್ಕೆ ಇದೇ ಪ್ರಕಾರ ಕಾಣುವದಾದರೂ, ಬೆಲಪತ್ರಿ ಕಾಯಿ ಒಡದು ನೋಡಿದರೆ, ಅದರೊಳಗೆ ಬಹಳ (೫ರ ಮೇಲೆ ೧೪ರೊಳಗೆ) ತೂತುಗಳೂ ಇವುಗಳಲ್ಲಿ ಬೀಜಗಳೂ ಜಿಗಟೂ ಇದ್ದದ್ದು ತೋರುವದು. ಆದರೆ ಆ ಠಕಾರಿ ಕಾಯಿಯಲ್ಲಿ ಆ ತೂತುಗಳಿಲ್ಲ, ಬೀಜಗಳೆಲ್ಲ ಆ ಜಿಗಟಿನಲ್ಲಿ ಮಿಶ್ರವಾಗಿರುತ್ತವೆ.

† Engl: **Galls**; ಹಿಂದು: ಮಾಯಿ (*or* ಮಾಜೂ) ಫಲ್; ತಮ: ತೆಲು: ಮಲ: ಮಾಷಿಕ್ಕಾಯಿ; ಮಹಾ: ಮಾಯಿಫಲ, ಮಾಷಿಕಾ.—ಮಾಚೀಕಾಯಿಯಲ್ಲಿ ವಿವಿಧ ಜಾತಿಯುಂಟು. ಮದ್ದಿಗೆ ಉಪಯೋಗಿಸುವಂಥಾದ್ದು ಉರುಟಾಗಿಯೂ, ಒಗರು ರುಚಿಯುಳ್ಳದ್ದಾಗಿಯೂ, ಅದರ ಒಂದು ಕಡೆಯಲ್ಲಿ ಚಿಕ್ಕ ತೂತಿನಂತೆಯೂ ಇರುತ್ತದೆ. ಇದು ಶಿಕ್ಕದಿದ್ದರೆ, ಬೇರೆ ತರದ್ದು ಉಪಯೋಗಿಸ ಬಹುದು; ಯಾಕಂದರೆ ಎಲ್ಲಾದಕ್ಕೆ ಸರಿಸುಮಾರು ಒಗರು ಗುಣವುಂಟು.

‡ Engl: **Pomegranate**; ಹಿಂದು: ಅನಾರ್; ತಮ: ಮಾದಳೈ; ತೆಲು: ದಾಲಿಂಬ, ದಾಡಿಮ; ಮಲ: ಮಾತಳಮ್.—ದಾಳಿಂಬೆ ಮರದಲ್ಲಿ ಔಷಧಕ್ಕೆ ಬೀಳುವಂಥಾದ್ದು ಎರಡು: ಒಂದು ಅದರ ಹಣ್ಣಿನ ಶಿಪ್ಪೆ, ಇನ್ನೊಂದು ಅದರ ಬೇರಿನ ಚಕ್ಕೆ.

ದಲ್ಲಿ ಬಹಳ ಫಲಪ್ರದವಾದ್ದು. ಇದರ ಕಷಾಯ ಮಾಡಿ ಕೊಡುತ್ತಾರೆ; ಹ್ಯಾಗಂದರೆ: ೨ ಔನ್ಸ್ ಆ ಹಣ್ಣಿನ ಶಿಪ್ಪೆಗಳು, ೨ ದ್ರಮ್ ಜಜ್ಜಿದ ಲವಂಗ ಅಥವಾ ದಾಲ ಚಿನಿ. ಇವೆರಡನ್ನು ಒಂದು ಪೈಂಟ್ ನೀರಲ್ಲಿ ಹದಿನೈದು ನಿಮಿಷ ವರೆಗೆ ಬೇಯಿಸಿ (ಬೇಯುವಾಗ ಪಾತ್ರೆ ಮುಚ್ಚಿಡ ಬೇಕು) ಕಷಾಯ ತೆಗಿಯ ಬೇಕು. ಕಷಾಯವು ತಣ್ಣಗಾದ ಮೇಲೆ ಸಾರಿಗೆ ೧½ ಔನ್ಸ್ ಪ್ರಕಾರ ದಿನಕ್ಕೆ ೩ ಯಾ ೪ ಸಾರಿ ತಕ್ಕೊಳ್ಳ ಬಹುದು. ಕಠಿಣ ಸಂಗತಿಗಳಲ್ಲಿ ಈ ಕಷಾಯದಲ್ಲಿ ಅಫೀಮಿ ಸತ್ವದ ೫ ತಟುಕುಗಳನ್ನು ಬಿಟ್ಟು ಕೊಡ ಬಹುದು. ಈ ಕಷಾಯವು ಈ ದೇಶಸ್ಥರ ಅತಿಸಾರದಲ್ಲಿ ವಿಶೇಷವಾಗಿ ಪ್ರಯೋಜನವಾಗುತ್ತದಂತೆ.

೩೬. ಓಮದ ನೀರು ಭೋಜನದೋಷದಿಂದುಂಟಾಗುವ ಅಥವಾ ವಾಂತಿಭ್ರಾಂತಿಯ ಅತಿಸಾರದಲ್ಲಿ ಅಮೂಲ್ಯ ಔಷಧವಾಗಿರುತ್ತದೆ. (ಅದನ್ನು ಕೊಡುವ ಕ್ರಮ ೧೫ನೇ ಅಂಕೆಯಲ್ಲಿ ನೋಡು.)

೩೭. ಕಠಿಣ ಅತಿಸಾರದಲ್ಲಿ ನೋವಿದ್ದರೆ, ಕಿರಿಹೊಟ್ಟೆಗೆ (೨೪ರಲ್ಲಿ ವಿವರಿಸಿದ) ಕರ್ಪೂರತೈಲದ ಶೇಕ ಕೊಡುವದು ಬಹಳ ಒಳ್ಳೇದು.

ಅತಿಸಾರವು ಅನ್ನಕೋಶದ ಹುಳಿವು (ಆಮ್ಲ) ಸಮ್ಮಂಧವಾಗಿ ಉಂಟಾಗಿದ್ದರೆ, ಸುಣ್ಣದ ತಿಳಿನೀರು (೧೮) ಬಹಳ ಪ್ರಯೋಜನಕರವಾಗಿ ಕೊಡುತ್ತಾರೆ. ಹ್ಯಾಗಂದರೆ: ೧೭ರಲ್ಲಿ ವಿವರಿಸಿದ ಪ್ರಕಾರ ತಕ್ಕೊಳ್ಳುವ, ಹಾಲು ಬೆರಿಸಿದ ಸುಣ್ಣದ ತಿಳಿನೀರಲ್ಲಿ ಸ್ವಲ್ಪ ಅರಬೀ ಗೋಂದು (ಇಲ್ಲವೆ ಬೇರೆ ಗೋಂದು) ಕಲಕಿಸಿ ಕೊಡುವದು. ಕಠಿಣವಾದ ಸಂಗತಿಯಲ್ಲಾದರೆ, ಪ್ರತಿ ಸರ್ತಿಗೆ ಅದರಲ್ಲಿ ಅಫೀಮಿ ಸತ್ವದ ೧೦ ತಟುಕುಗಳು ಸಹಾ ಹಾಕಿ ಕೊಡ ಬಹುದು. ಸುಣ್ಣದ ತಿಳಿನೀರನ್ನು ಓಮದ ನೀರಿನ ಸಂಗಡ (೧೫) ಇನ್ನಷ್ಟು ಫಲಕರವಾಗಿ ಕೊಡ ಬಹುದು.

ಹದ ಮೀರಿ ಉಂಡದರಿಂದಾಗಲೀ ಜೀರ್ಣವಾಗದ ಆಹಾರ ತಿಂದದರಿಂದಾಗಲೀ ಅತಿಸಾರವಾದರೆ, ಸಾಸಿವೆಯಿಂದಾದರೂ (೩೮), ಕಿರುಮಂಜಿ ಚೂರ್ಣದಿಂದಾದರೂ (೩೯) ವಾಂತಿ ಮಾಡಿಸಿ ಹೊಟ್ಟೆಕಳಿಯ ಬೇಕು. ತರುವಾಯ ಓಮದ ನೀರು (೪೦) ಕುಡಿಯುವದು. ಆ ಮೇಲೆ ಒಂದಿಷ್ಟು ಹರಳೆಣ್ಣೆ ತಕ್ಕೊಳ್ಳುವದು.

೩೮. ಬಾಟ್ಲಿಗಳಲ್ಲಿ ಮಾರುವಂಥಾ ಇಂಗ್ಲಿಷ ಸಾಸಿವೆ* ಒಳ್ಳೇ ವಾಂತಿಯಾಗ ತಕ್ಕ ಔಷಧವಾಗಿ ಕೊಡ ಬಹುದು. ಒಂದು ಚಾಸೌಟು ತುಂಬ ಅದರ ಹುಡಿಯನ್ನು ಒಂದು ಟಂಬ್ಲರು ತುಂಬ ಬಿಶಿ ನೀರಲ್ಲಿ ಕಲಸಿ ತೆಗದು ಕೊಂಡರೆ, ಸರಳವಾಗಿ ವಾಂತಿಯಾಗುತ್ತದೆ. ಹಾಗಾಗದಿದ್ದರೆ, ೫ ಇಲ್ಲವೆ ೧೦ ಮಿನಿಟುಗಳ ಬಳಿಕ ಪುನಹಾ ಅಷ್ಟೇ ತಕ್ಕೊಳ್ಳುವದು. ಹಾಗೆಯೂ ಆಗದಿದ್ದರೆ, ಅಷ್ಟೇ ಹೊತ್ತಿನ ತರುವಾಯ ಮೂರನೇ ಸಾರಿ ಅದೇ ಪ್ರಕಾರ ತಕ್ಕೊಳ್ಳುವದು. ಇದರಿಂದ ಸಹಾ ಪ್ರಯೋಜನವಾಗದಿ

* ಇದು ಪ್ರತಿ ಗೃಹದಲ್ಲಿ ದಾಸ್ತಾನು ಇಟ್ಟರೆ, ಬಹಳ ಕೆಲಸಕ್ಕೆ ಬರುತ್ತದೆ. ಇದು ಹತ್ತರ ಇಲ್ಲದಿದ್ದರೆ, ಊರ ಸಾಸಿವೆಯಾದರೂ ಅದಕ್ಕೆ ಬದಲಾಗಿ ಉಪಯೋಗಿಸ ಬಹುದು.

ದ್ದರೆ, ಬೇರೆ ವಾಂತೀ ಔಷಧ ನೋಡ ಬಹುದು. ಇದು ಹೊಟ್ಟೆಯಲ್ಲಿ ಭಾರವಾಗಿರುವಂಥಾ ತೀನಿಯನ್ನು ಕಾರಿಸಿ ಹೊರಗ್ಹಾಕುತ್ತದೆ. ಆದರೆ ಊರ ಸಾಸಿವೆಯು ಎಷ್ಟರ ಮಟ್ಟಿಗೆ ಹೊಟ್ಟೆಯೊಳಗೆ ಕೊಡ ಬಹುದು ಎಂದು ಖಂಡಿತ ಹೇಳಲಾಗುವದಿಲ್ಲ.

೩೯. (೨೫ನೆ ಅಂಕೆ ಸರಿ ನೋಡು.) ಕಿರುಮಂಜೀ ಎಲೆಗಳಾಗಲೀ ಬೇರುಗಳಾಗಲೀ ಒಳ್ಳೇ ವಾಂತಿಕರ ಔಷಧವೆಂಬದು ಪ್ರಶಸ್ತವಿರುತ್ತದೆ. ಇದರ ಒಣಗಿದ ಎಲೆಗಳು ಇದೇ ಹೆಸರಿನ ವಿಲಾಯಿತೀ (ipecacuanha) ಸತ್ವದಷ್ಟೇ ಗುಣವೂ ಫಲವೂ ಉಳ್ಳದ್ದು ಎಂಬದು ನಿಶ್ಚಯವೇ. ಜೋರಾಗಿ ಕಾರ ಬೇಕಾದರೆ, ಈ ಎಲೆಗಳ ಪುಡಿ ೨೫ ಗ್ರೇನಿನಿಂದ ೩೦ ಗ್ರೇನ್ ವರೆಗೆ ತಕ್ಕೊಳ್ಳ ಬಹುದು. ತಕ್ಕೊಳ್ಳುವಾಗ ಅದಕ್ಕೆ ೧ ಗ್ರೇನ್ (tartar emetic) ವಾಂತೀ ಹುಡಿ (ಇದು ಸಾಧಾರಣ ಆಸ್ಪತ್ರಿಯಲ್ಲ್ಯಾಗಲೀ ವಿಲಾಯತೀ ಔಷಧಗಳ ಅಂಗಡಿಗಳಲ್ಲಿ ಆಗಲೀ ಶಿಕ್ಕುತ್ತದೆ) ಅದರಲ್ಲಿ ಮಿಶ್ರ ಮಾಡಿ ತಕ್ಕೊಳ್ಳಬೇಕು. ಆ ಮೇಲೆ ಬಹಳ ಬಿಸಿ ನೀರು ಕುಡಿಯುತ್ತಾ ಇದ್ದರೆ, ಚನ್ನಾಗಿ ವಾಂತಿ ಮಾಡುವದು. ಸಾಧಾರಣ ವಾಂತಿಗಾದರೆ, ಆ ಎಲೆಗಳ ಹುಡಿ ೪ರಿಂದ ೮ ಗ್ರೇನ್ ವರೆಗೆ ತಕ್ಕೊಳ್ಳ ಬಹುದು. ಇದರಿಂದ ಒಳಗಿನ ಕಫ ಹೊರಗೆ ಹಾಕುವ ಹಾಗೆಯೂ ಹೆಚ್ಚು ಬೆವರು ಬರುವ ಹಾಗೆಯೂ ಮಾಡುತ್ತದೆ.

೪೦. ಅಜೀರ್ಣದಿಂದಾಗುವ ಅತಿಸಾರಕ್ಕೆ ಮೇಲೆ ವಿವರಿಸಿದ ಮದ್ದಿನಿಂದ ವಾಂತಿಯಾಗಲಾಗಿ, ೧೫ನೇ ಅಂಕೆಯಲ್ಲಿ ವಿವರಿಸಿದ ಪ್ರಕಾರ, ಓಮದ ಸತ್ವವನ್ನು ಕೊಡಬೇಕು. ತರುವಾಯ ವಿರೇಚನೆ ಆಗುವ ಹಾಗೆ ಹರಳೆಣ್ಣೆ ಕೊಡ ಬೇಕು.

ಮೀನು ಮುಂತಾದ ಕೊಳತ ಆಹಾರವನ್ನು ತಿಂದದರಿಂದ ಅತಿಸಾರ ಉಂಟಾದರೆ, ಅದಕ್ಕೆ ಮೆಣಸಿನ ಕಾಯಿ ವಿಶೇಷ ಉಪಯೋಗವಂತೆ. ಹ್ಯಾಗಂದರೆ:

೪೧. ಅರ್ಧ ಗ್ರೇನ್ ಮೆಣಸಿನಕಾಯಿ* ಅರದು, ಮಾತ್ರೆ ಕಟ್ಟಿ, ಸೇವನ ಮಾಡುವದು.

ಮಕ್ಕಳ ಅತಿಸಾರಕ್ಕೆ, ಪ್ರಾರಂಭದಲ್ಲ್ಯಾದರೆ, ಒಂದಿಷ್ಟು ಹರಳೆಣ್ಣೆ ಕೊಟ್ಟು ಝಾಡೆಯಾಗಲು, ಗುಣವಾಗುವದು. ಇಲ್ಲವಾದರೆ, ಈ ಕೆಳಗಿನ ಯಾವದಾದರೊಂದು ಔಷಧ ಪ್ರಯೋಜನಕರವಾಗಿ ಕೊಡ ಬಹುದು:

೪೨. ಬಿಲ್ವಪತ್ರಿ ಕಾಯಿಯ ಪಾನಕ ಮಾಡಿ ಕೊಡ ಬಹುದು (೩೨).

೪೩. ಕಾಚುವಿನ ಚೂರ್ಣ (೨೮) ಮಾಡಿ ೩-೪ ಗ್ರೇನ್ ತೆಗದು, ಅದಕ್ಕೆ ಅಷ್ಟೇ ಲವಂಗಚಕ್ಕೆ ಕೂಡಿಸಿ, ಮಕ್ಕಳಿಗೆ ಕೊಡುವದು.

* Engl: Capsicum; ಹಿಂದು: ಲಾಲ್‌ಮಿರ್ಚಿ; ತಮು: ಮುಬಗ್ಯಾ, ಮಿಬಗ್ಯಾ; ತೆಲು: ಮಿರಪಕಾಯಿ; ಮಲ: ಕಪ್ಪಲ್‌ಮೊಟಿಕು; ಮಹಾ: ಮಿರಸಿಂಗಾ.—ಇದು ತೀಕ್ಷ್ಣ ಉತ್ತೇಜಕ ಪದಾರ್ಥ. ಇದನ್ನು ಅರದು ಒತ್ತಡ ಕಟ್ಟಿದರೆ, ರಕ್ತ ತಿಳಿ ಮಾಡುತ್ತದೆ. ಸಾಸಿವೇ ಒತ್ತಡದ ಸಂಗಡ ಇನ್ನಷ್ಟು ಫಲಕರವಾಗುವದು. ಸಾಸಿವೇ ಬದಲಾಗಿ ಇದರ ಪೋಲ್ಟಿಸು ಮಾಡ ಬಹುದು. ಆದರೆ ಇದು ಬಹಳ ತೀಕ್ಷ್ಣವಾಗಿರುವದರಿಂದ ಸ್ವಲ್ಪ ಜಾಗ್ರತೆಯಾಗಿರ ಬೇಕು; ಯಾಕಂದರೆ ಬಹಳ ಸಮಯ ಇಟ್ಟರೆ, ಸ್ಫೋಟವಾಗುವದು (ಅಂದರೆ ಬೊಕ್ಕೆ ಏಳುವದು).

೪೪. ದೀರ್ಘಕಾಲದ ಅತಿಸಾರವಿರುವ ಮಕ್ಕಳಿಗೆ ಮೈಲತುತ್ತು (೨೭) ೨ ಗ್ರೇನ್ ಪುಡಿ ಮಾಡಿ, ೧೨ ದ್ರಮ್ ಓಮದ ಸತ್ವದಲ್ಲಿ (೧೫) ಕಲಕಿಸಿ, ಸಾರಿಗೆ ಒಂದು ಚಾ ಸೌಟಿನ ಪ್ರಕಾರ ದಿನಕ್ಕೆ ೩ ಸಾರಿ ತಕ್ಕೊಳ್ಳುವದು. ಇದರಿಂದ ಒಂದೆರಡು ದಿವಸದೊಳಗೆ ಗುಣ ಕಾಣದಿದ್ದರೆ, ಆಗಲೆ ಬಿಟ್ಟು ಬಿಡ ಬೇಕು.

೪೫. ಶಕ್ತಿಯೂ ರಕ್ತಬಲವೂ ಇಲ್ಲದ ಮಕ್ಕಳಿಗೆ ದೀರ್ಘಕಾಲದ ಅತಿಸಾರವಿದ್ದರೆ, ಈ ಮಿಶ್ರದಿಂದ ಬಹಳ ಗುಣ ಬರುವದು: ಅನ್ನಭೇದಿ (೯) ನಾಲ್ಕು ಗ್ರೇನ್; ಅಫೀಮಿ ಸತ್ವ ಆರು ತಟುಕು; ಓಮದ ಸತ್ವ ೧೦ ದ್ರಮ್. ಈ ಮೂರು ಬಗೆಯನ್ನು ಒಟ್ಟು ಮಾಡಿ ಕಲಸಿ, ೧ ವರ್ಷದ ಮಗುವಿಗೆ ಪ್ರತಿ ೬ ತಾಸಿಗೊಮ್ಮೆ ೨ ಚಾ ಸೌಟಿನ ಪ್ರಕಾರ ಕೊಡುವದು; ಹೆಚ್ಚು ಪ್ರಾಯದ್ದಾದರೆ, ಅದೇ ದರದಲ್ಲಿ ಹೆಚ್ಚಿಸುವದು.

೪೬. ಕೂಸುಗಳಿಗಾಗಲೀ ಚಿಕ್ಕ ಮಕ್ಕಳಿಗಾಗಲೀ ಹಿತವಾಗದ ಆಹಾರವೇನಾದರೂ ಕೊಟ್ಟದರಿಂದ ಅತಿಸಾರವೂ ವಾಂತಿಯೂ ಉಂಟಾದರೆ, ಸುಣ್ಣದ ಶೀ ನೀರು (೧೯) ಕೊಡ ಬಹುದು. ಅಥವಾ

೪೭. ಇಸಬಕೋಲು ಬೀಜ (೨೬ನೇ ಅಂಕೆಯಲ್ಲಿ ಹೇಳಿದ ಪ್ರಕಾರ) ಸಕ್ಕರೆಯಲ್ಲಿ ಕಲಸಿ, ಕೊಡುವದು ದೀರ್ಘಕಾಲದ ಅತಿಸಾರವಿರುವ ಈ ದೇಶದ ಅಥವಾ ವಿಲಾಯತೀ ಮಕ್ಕಳಿಗೂ ಪರಮೌಷಧವಾಗಿರುತ್ತದೆ.

೪೮. ಓಮದ ಸತ್ವ (೧೫) ಮೇಲಿನ ಯಾವ ಔಷಧದ ಸಂಗಡವಾದರೂ ದೋಷವಿಲ್ಲದೆ ಕೊಡ ಬಹುದು. ಇದರಿಂದ ಅತಿಸಾರದಲ್ಲಿ ಬಹಳ ಗುಣವುಂಟು.

ವಾಂತಿಭ್ರಾಂತಿಗೆ (ಸನ್ನಿಗೆ) ಮುಂಚಿತಾಗಿ ಬರುವ ಅತಿಸಾರವನ್ನು ಕುರಿತು ಅದರ ವಿವರದಲ್ಲಿ ನೋಡ ಬೇಕು.

ಸೂಚನೆ: ಅತಿಸಾರವುಳ್ಳ ರೋಗಿಗಳಿಗೆ ಆಹಾರವು ಮೃದುತರವಾಗಿಯೂ ಹೊಟ್ಟೆಗೆ ಹಿತಕರವಾಗಿಯೂ ಇರ ಬೇಕು. ಕೊವೆ ಹಿಟ್ಟಿನ ಪಾಕ ಒಂದು ವೇಳೆ ತಕ್ಕದಾದ ಆಹಾರವಾದೀತು. ಕಠಿಣವಾದ ಅಥವಾ ದೀರ್ಘಕಾಲದ ಅತಿಸಾರವುಳ್ಳವರು ಉಣ್ಣೇ ವಸ್ತ್ರದ ಒಂದು ಪಟ್ಟಿಯನ್ನು ಕಿಬ್ಬೊಟ್ಟೆಯ ಸುತ್ತಲೂ ಕಟ್ಟಿ ಕೊಳ್ಳುವದು ಒಳ್ಳೇದು.

☞ "ಶರೀರ ಚಿಕಿತ್ಸೆ"ಯನ್ನು ಕುರಿತಾದ ಮೇಲಿನ ವಿವರವು ತೀರಲಿಲ್ಲ. ಬರುವ ವರ್ಷಗಳ ಪಂಚಾಂಗಗಳಲ್ಲಿ ಮುಂದರಿಸೋಣಾಗುವದು; ಆದ್ದರಿಂದ ಇದರಲ್ಲಿ ಪ್ರಯೋಜನ ಹುಡುಕುವವರು ಈ ಪಂಚಾಂಗವನ್ನು ತೊಡಗಿ ಈ ವಿಷಯ ಮುಗಿಯುವ ವರೆಗಿನವುಗಳನ್ನು ಜೋಕೆ ಮಾಡಿ ಇಟ್ಟಾರೆಂದು ನಿರೀಕ್ಷಿಸುತ್ತೇವೆ; ಹೀಗೆ ಮಾಡುವದರಿಂದ ಔಷಧಗಳನ್ನು ಒಂದಕ್ಕೊಂದು ತಾಳೆ ನೋಡುವದಕ್ಕೆ ಅನುಕೂಲವಾಗುವದು.

ಟಿಪ್ಪಣಿ: ೧೬ನೇ ಪುಟದ ೧೮ನೇ ಪಂಕ್ತಿಯಲ್ಲಿ: "ಮದೋಷ್ಣ" ಎಂತಲ್ಲ, "ಮಂದೋಷ್ಣ" ಎಂತ ಇರ ತಕ್ಕದ್ದು.

ಭಕ್ತಿಸಾರಬೋಧಕ ಪ್ರಸಂಗವು.

೧೮೭೫ನೇ ಇಸವಿಯ ಪಂಚಾಂಗದಲ್ಲಿ "ವಿದ್ಯಾಸಾಫಲ್ಯಸೂಚಕವು" ಎಂಬದೊಂದು ಪ್ರಬಂಧವನ್ನು ಛಾಪಿಸಿ ಕೊಟ್ಟಿರುತ್ತೇವೆ. ವಿದ್ಯೆಯು ದ್ವಿವಿಧವಾಗಿದೆ, ಅಂದರೆ ಸದ್ವಿದ್ಯೆಯು ಉಂಟು, ಕುವಿದ್ಯೆಯು ಉಂಟು ಎಂಬದನ್ನು ಮಾತ್ರವಲ್ಲಾ, ಸದ್ವಿದ್ಯೆಯ ಪ್ರಯೋಜನವೇನು? ಸದ್ವಿದ್ಯೆಯ ಪ್ರಯೋಜನ ಹೊಂದಲಿಕ್ಕಾಗಿ ತಕ್ಕ ಸಾಧನೆ ಏನು? ಎಂಬದನ್ನು ಸಹಾ ಪಂಚಾಂಗಪಾಠಕರು ಆ ಪ್ರಬಂಧದಿಂದ ತಿಳುಕೊಳ್ಳ ಬಹುದಾಯಿತು.

ಸದ್ವಿದ್ಯೆಗಳಾದರೂ ಎರಡು ತರವು: ಲೌಕಿಕ ವಿದ್ಯೆಗಳೂ ಸದ್ವೈದಿಕ ವಿದ್ಯೆಗಳೂ. ಲೌಕಿಕ ವಿದ್ಯೆಗಳಾದರೂ ಮನುಷ್ಯನಿಗೆ ದೊಡ್ಡ ಭೂಷಣವಾಗಿರುವದಲ್ಲದೆ, ಬಹಳ ಪ್ರಯೋಜಕವೂ ಆಗಿದ್ದಾವೆ. ವಿದ್ಯೆಯಿಂದ ಕೀರ್ತಿ ಬರುವದು. ಆದರೆ ಸದ್ವೈದಿಕ ವಿದ್ಯೆ ಲೌಕಿಕ ವಿದ್ಯೆಗಿಂತ ಬಹಳ ಪ್ರಯೋಜನವುಳ್ಳದ್ದೇ, ಯಾಕಂದರೆ ಅದರ ಸಂಬಂಧವಾಗಿ ಭಕ್ತಿ ಹುಟ್ಟಿ ನೆಲೆಗೊಳ್ಳ ಬಹುದು. "ವಿದ್ಯೆಗಿಂತ ನೀತಿ, ಕೀರ್ತಿಗಿಂತ ಭಕ್ತಿ ಲಾಭವೇ." ಮತ್ತು "ಧರ್ಮಾರ್ಥಿಯಲ್ಲದ ವಿದ್ಯಾರ್ಥಿಯೂ, ಕಾವಿಲ್ಲದ ಕೊಡ್ಲಿಯೂ, ಹುರುಳಿಲ್ಲದ ಅತ್ತೀಹಣ್ಣೂ ಸಮವೇ." ಆದ್ದರಿಂದ ವಿದ್ಯಾಸಾಧನೆ ಮನುಷ್ಯನಿಗೆ ಬಹಳ ತಕ್ಕದ್ದೂ ಪ್ರಯೋಜಕವೂ ಆಗಿರಲಾಗಿ, ಭಕ್ತಿಸಾಧನೆ ಎಷ್ಟೋ ಹೆಚ್ಚಾಗಿ ಅವಶ್ಯವೂ ಪ್ರಯೋಜಕವೂ ಆಗಿರುವದು. ಭಕ್ತಿ ಇಹಕ್ಕೂ ಪರಕ್ಕೂ ಪ್ರಯೋಜನವುಳ್ಳದ್ದು. ಭಕ್ತಿಯಿಲ್ಲದೆ ಚತುರ್ವಿಧ ಪುರುಷಾರ್ಥ ಸಾಧನೆಯಾಗದು. ಭಕ್ತಿಹೀನನು ಅದಕ್ಕೆ ಒಂದು ವೇಳೆ ಹತ್ತಿದರೂ, ಅದರಲ್ಲಿ ಸಫಲನಾಗನು.

ಭಕ್ತಿ ಎಂಬದು ಇಷ್ಟು ವಿಶೇಷವಾಗಿರುವದರಿಂದ, ಅದರ ವಿಷಯವಾದ ಬೋಧನೆ ಸಕಲರು: ವೈದಿಕರೂ ಲೌಕಿಕರೂ, ವಿದ್ಯಾಸಂಪನ್ನರೂ ಮೂಢರೂ ಕಿವಿ ಕೊಟ್ಟು ಕೇಳ ತಕ್ಕದ್ದು.

"ವಿಕೀರ್ಣಸುಭಾಷಿತಪ್ರಸಂಗಶತಕ" ಎಂಬ ಪುಸ್ತಕದಲ್ಲಿ*

ಶ್ರವಣಂ ಕೀರ್ತನಂ ಚೈವ ಸ್ಮರಣಂ ಪಾದಸೇವನಂ |
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ ||

ಎಂಬುವ ಶ್ಲೋಕದ ತಾತ್ಪರ್ಯವು ಬಹು ಸಂಕ್ಷೇಪವಾಗ್ಯಾದರೂ ಬಹು ಚನ್ನಾಗಿ ಹೇಳಿ ಕೊಟ್ಟದೆ. ಇದು "ನವವಿಧಭಕ್ತಿ"ಯೆನ್ನಿಸಿ ಕೊಳ್ಳುವ ಭಕ್ತಿಸಾರ. ಭಕ್ತಿಯ ಮನೆ ಅಂದರೆ ಭಕ್ತಿಯೆಂಬ ದಿವ್ಯಾಲಯ ಶೇರ ಬೇಕಾದರೆ, ಒಂಭತ್ತು ಪಾವಟಿಗೆಗಳನ್ನು ಒಂ

* ಮಂಗಳೂರ ಮಿಶ್ಯನ್ ಛಾಪಖಾನೆಯಲ್ಲಿ ಛಾಪೆಯಾದ ಈ ಪುಸ್ತಕವು ೧ ಆಣೆಗೆ ಶಿಕ್ಕುತ್ತದೆ.

ದೊಂದಾಗಿ ಏರ ಬೇಕು. ಈ ಒಂಭತ್ತು ಪಾವಟಿಗೆಗಳಲ್ಲಿ ಶ್ರವಣವೆಂಬದು ಮೊದಲ ನೇದಾಗಿದೆ. ಶ್ರವಣವಂದರೆ: ಕೇಳುವದು.

ಎಲ್ಲಾದಕ್ಕಿಂತ ಮೊದಲೇ ದೇವರ ಮಹತ್ತ್ವಾದ ಕೃತ್ಯಗಳನ್ನೂ ಜ್ಞಾನವನ್ನೂ ಶಕ್ತಿಯನ್ನೂ ಮಹಿಮೆಯನ್ನೂ, ಲೋಕಪರಿಪಾಲನೆಯಲ್ಲಿ ಕಂಡು ಬರುವ ಆತನ ಸತ್ಯ, ನೀತಿ, ಕರುಣೆ, ಕೃಪೆ, ಪ್ರೀತಿ ಎಂಬಿತ್ಯಾದಿ ಗುಣಗಳನ್ನೂ ವರ್ಣಿಸಿ, ಆತನಲ್ಲಿ ಭಯವನ್ನೂ ವಿಶ್ವಾಸವನ್ನೂ ಪ್ರೀತಿಯನ್ನೂ ಇಡ ತಕ್ಕದ್ದು ಎಂಬದಾಗಿ ಬೋಧಿಸುವ ಸದ್ವೇದವಾದ ಬೈಬಲೆಂಬ ದೇವವಾಕ್ಯವನ್ನು ಓದಿ ಕೊಳ್ಳಲೂ, ದೇವವಾಕ್ಯದ ಪ್ರಸಂಗಾದಿಗಳನ್ನು ಕಿವಿಕೊಟ್ಟು ಕೇಳಲೂ ಬೇಕು. ಇದು ಅವಶ್ಯವೇ ಎಂಬದು ನಿಮ್ಮ ಹಿರಿಯರಿಗೆ ಚನ್ನಾಗಿ ತಿಳಿದ ಖಚಿತ ಸಂಗತಿಯಾಗಿತ್ತು. ಆದರೆ ಕಲಿಯುಗವೆನ್ನಿಸಿಕೊಳ್ಳುವ ಈಗಿನ ಕಾಲದ ಬ್ರಾಹ್ಮಣ ಮೊದಲಾದ ವರ್ಣದವರಿಗೆ ಅದರ ಗೊತ್ತು ಕುಂದಿ, ಇಲ್ಲದೆ ಹೋಯಿತು. ಈಗಿನ ಹಿಂದುಗಳಲ್ಲಿ ಅನೇಕಾನೇಕರು ಚಾರ್ವಾಕಮತ, ನಾಸ್ತಿಕ್ಯ ಮೊದಲಾದ ಅಧರ್ಮಮಾರ್ಗಗಳಲ್ಲಿ ಶೇರಿ, ದಿವ್ಯ ವಾಕ್ಯವು, ದೈವಪ್ರೇರಣೆಯಿಂದ ರಚಿತವಾದ ವೇದಶಾಸ್ತ್ರವು ಉಂಟೆಂಬುವದನ್ನು ನಂಬುವದೇ ಇಲ್ಲಾ. ವೇದವುಂಟು, ನಾಲ್ಕು ವೇದವುಂಟು ಎಂತ ಹೇಳುವಂಥವರಾದರೂ ವೇದವನ್ನು ಓದಿದ್ದೂ ಇಲ್ಲಾ, ಕೇಳಿದ್ದೂ ಇಲ್ಲಾ, ನೋಡಿದ್ದಾದರೂ ಇಲ್ಲಾ; ಹಾಗಾದ ಮೇಲೆ ವೇದವನ್ನು ಅಭ್ಯಾಸ ಮಾಡಿ ಗ್ರಹಿಸಿ ಕೊಂಡ ಮಾತು ಎಲ್ಲಿ? ಹಾಗಾಗಿ ಹೋದ್ದಕ್ಕೆ ಬ್ರಾಹ್ಮಣರೇ ಹೆಚ್ಚಾಗಿ ಕಾರಣ. ಯಾಕಂದರೆ ಪೂರ್ವದಲ್ಲಿ ಯಜ್ಞಸೂತ್ರವನ್ನು, ಈಗ ಜನಿವಾರವೆಂಬ ಹತ್ತೀ ನೂಲನ್ನು ಹಾಕಿಸಿ ಕೊಂಬುವ ಬ್ರಾಹ್ಮಣ ಜಾತಿಯಲ್ಲಿ ಹುಟ್ಟದವರಿಗೆ ವೇದವೂ, ವೇದಗಳ ಗೊತ್ತೂ ಇರ ಬಾರದು ಎಂಬ ಅನ್ಯಾಯದ ವಿಧಿಯನ್ನು ಅವರೇ ಹುಟ್ಟಸಿದ್ದಾರೆ. ಸಂಸ್ಕಾರಾದಿಗಳ ಪ್ರಸ್ತಾಪದಲ್ಲಿ ವೇದಗಳ ಏನೊಂದು ಪರಿಛೇದವೂ ಮಂತ್ರಾದಿಗಳೂ ಪಠಣವಾದರೂ, ಸಾಧಾರಣವಾಗಿ ಎಲ್ಲರಿಗೆ ತಿಳಿಯದೆ ಹೋಗುವದರಿಂದ ಅಂಥಾದ್ದನ್ನು ಶ್ರವಣ ಮಾಡುವದರಲ್ಲಿ ಸದ್ಭಕ್ತಿ ಎಂಬದು ಹ್ಯಾಗೆ ಹುಟ್ಟಿ ನೆಲೆಗೊಳ್ಳ ಬಹುದು? ಈ ವಿಷಯದಲ್ಲಿ ಕ್ರೈಸ್ತರ ವಿಚಾರಕ್ಕೂ ಹಿಂದು ಜನರ ವಿಚಾರಕ್ಕೂ ಬಹಳ ಹೆಚ್ಚು ಕಡಿಮೆಯದೆ. ಕ್ರೈಸ್ತರ ದೇವಾಲಯಗಳಲ್ಲಿಯೂ ಮನೆಗಳಲ್ಲಿಯೂ ಪೂಜೆಗೀಜೆ ಏನೂ ನಡಿಯದೆ, ಸದ್ವೇದ ಓದೋಣವೂ ಉಪದೇಶಿಸೋಣವೂ ಕೇಳೋಣವೂ ಮಾತ್ರ ಆಗುತ್ತದೆ. ಅವರಲ್ಲಿ ನಡೆಯುವ ಧರ್ಮಬೋಧನೆಗೂ ನೀತ್ಯುಪದೇಶಕ್ಕೂ ಚರ್ಯೆ ಆಚಾರಾದಿಗಳಿಗೂ ಸದ್ವೇದವು ಆಧಾರವೂ ಪ್ರಮಾಣವೂ ಆಗಿರುವಂಥಾದ್ದು. ತಮ್ಮ ಸದ್ವೇದಶಾಸ್ತ್ರ ದಿವ್ಯವೇ, ದೇವರು ಪ್ರಕಟಿಸಿ ಬರಿಸಿದ್ದೇ, ಆದ್ದರಿಂದ ಅದು ಅಪ್ರತಿ, ಅತುಲ್ಯ ಗ್ರಂಥವೇ ಎಂಬದು ಅವರಿಗೆ ಸ್ವಾನುಭವದ ಪೂರ್ಣ ಖಚಿತ ಮಾತಾಗಿರುವದರಿಂದ ಬೈಬಲೆಂಬ ತಮ್ಮ ವೇದವನ್ನು ಸಕಲ ಭಾಷೆಗಳಲ್ಲಿ ಎಲ್ಲಾ ದೇಶಗಳ ಸರ್ವ ಕುಲದವರ ಕೈಗೆ ಮುಟ್ಟಸುವರೆ ಯಾವ ಯಾವ ಪ್ರಯತ್ನಕ್ಕೂ ಖರ್ಚು ವೆಚ್ಚಕ್ಕೂ ಹೆದರದಿದ್ದಾರೆ. ಅರ್ಧಾಣೆಗೆ, ೧ ಆಣೆಗೆ, ೨ ಆಣೆಗೆ, ೧ ಪಾವಲಿಗೆ, ೩ ರೂಪಾಯಿಗೆ ಆ ಶಾಸ್ತ್ರದ ಏನಾದರೊಂದು

ಭಾಗವನ್ನು ಚನ್ನಾಗಿ ಮುದ್ರಾಕ್ಷರಗಳಿಂದ ಛಾಪಿಸಿದ್ದಾಗಿ ಎಲ್ಲೆಲ್ಲಿಯೂ ಕೊಂಡುಕೊಳ್ಳ ಬಹುದು. ಈ ಬೈಬಲಿನ ಸಂಗತಿಯನ್ನೂ ಹಿಂದು ಜನರ ವೇದಾದಿಗಳ ಸಂಗತಿಯನ್ನೂ ಒಂದಕ್ಕೊಂದು ಸರಿ ನೋಡಿದರೆ, ಹಿಂದು ಜನರ ವೇದಾದಿಗಳು ಸೊಂಟ ಮುರಿದು ಮೂಲೆಗೆ ಬಿದ್ದ ಮುದುಕಿಯಂತೆಯೂ ತಿಪ್ಪೇ ಪಾಲಾಗಿ ಹೋದ ಎಂಜಲಿನಂತೆಯೂ ಕಾಣುವಾಗ್ಯೆ, ಬೈಬಲು ಹದಿನಾರು ಬಣ್ಣವುಳ್ಳ ಚಿನ್ನದಪರಂಜಿಯ ಹರಿವಾಣದಲ್ಲಿ ಶೋಭಿಸುವ ಶೀ ಕೆಂಮಾವಿನಹಣ್ಣಿನಂತೆಯೂ, ನವರತ್ನಖಚಿತ ಗಾಜಿನ ಕುಡಿಕೆಯಲ್ಲಿರುವ ಅಮೃತದಂತೆಯೂ, ದಿಗ್ವಿಜಯಕ್ಕೆ ಹೊರಟ ಯುವರಾಜನಂತೆಯೂ ಕಾಣುವಂಥಾದ್ದು. ಆದರೆ ಈ ವಿಷಯದಲ್ಲಿ ಹೆಚ್ಚಿನ ಮಾತು ಇರಲಿ. ಒಂದೇ ಮಾತನ್ನು ಮಾತ್ರ ಇನ್ನು ಹೇಳುತ್ತೇವೆ; ಏನಂದರೆ: ಸದ್ಭಕ್ತಿ ಎಂಬ ಕಲ್ಪವೃಕ್ಷದೋಪಾದಿಯಾದ ಸಸಿ ದೇವವಾಕ್ಯವೆಂಬ ಬೀಜವನ್ನು ತನ್ನ ಹೃದಯದಲ್ಲಿ ಇಟ್ಟುಕೊಂಡು, ಬೇರೂರಿಸಿ ಕೊಂಡಂಥವರಲ್ಲಿ ಮಾತ್ರವೇ ಇದ್ದು, ಬೆಳದು, ಫಲ ಫಲಿಸುತ್ತಿರುತ್ತದೆ. ದೇವರನ್ನು ನಾವು ಚನ್ನಾಗಿ ಅರಿತುಕೊಂಡು ಸ್ಮರಿಸುವವರೂ ಪ್ರಾರ್ಥಿಸುವವರೂ ಆಗ ಬೇಕಾದರೆ, ಆತನ ವಾಕ್ಯವನ್ನು ಕೇಳಿ, ಅಂಗೀಕಾರ ಮಾಡಿರ ಬೇಕು.

ಕೀರ್ತನವೆಂಬದು ಎರಡನೇದಾಗಿದೆ. ದೇವರ ಕರುಣಾತಿಶಯವನ್ನೂ ಮಹೋಪಕಾರಗಳನ್ನೂ ಅನುಭವಿಸಿ, ಆತನಿಗೆ ಕೃತಜ್ಞತಾಭಾವಪೂರ್ವಕ ಸಂತೋಷ ಪಟ್ಟು, ಸ್ತುತಿಸ್ತೋತ್ರ ಅರ್ಪಿಸಿ, ಆತನ ನಾಮವನ್ನು ಕೊಂಡಾಡ ಬೇಕು. ಭಕ್ತಿಯ ಈ ಎರಡನೇ ವಿಧ ನಿಮ್ಮಲ್ಲಿ ಚನ್ನಾಗಿ ಕಾಣುತ್ತದೋ? ಸಕಲ ದೇಶದವರು ಹ್ಯಾಗೋ ಹಾಗೆಯೇ ಹಿಂದು ಜನರು ಸಹಾ ದೇವರಿಂದ ಅಪರಿಮಿತ ದಯಾದಿಗಳನ್ನು ಹೊಂದಿದಾಗ್ಯೂ, ಹೆಚ್ಚಾದವರು ಒಬ್ಬನೇ ನಿಜ ದೇವರನ್ನು ನೆನಸದೆಯೂ ಭಜಿಸದೆಯೂ, ಬೇರೆ ಬೇರೆ ದೇವತೆಗಳನ್ನು ಕಲ್ಪಿಸಿ, ದೆವ್ವ ಭೂತಾದಿಗಳನ್ನೂ ಮಂತ್ರ ಶಕುನ ಶೂನ್ಯಾದಿಗಳನ್ನೂ ಭಯದಿಂದಲೂ ಮೂಢ ಭಕ್ತಿಯಿಂದಲೂ ಲಕ್ಷಿಸಿ ಸೇವಿಸುತ್ತಿದ್ದಾರಕಟಾ! ಅನೇಕ ವಿದ್ಯೆಗಳನ್ನು ಅಭ್ಯಾಸ ಮಾಡಿ ಕೊಂಡು, ತಿದ್ದುಪಾಟು, ನಾಗರೀಕತನ ಮೊದಲಾದ್ದರಿಂದ ಶೋಭಿಸಿ, ವಿಗ್ರಹಗಳು ದೇವರಲ್ಲಾ, ಶೂನ್ಯವೇ, ನಿಜ ದೇವರು ಒಬ್ಬನೇ ಸರಿ ಎಂಬದನ್ನು ತಿಳಿದಂಥವರಾದರೂ ದಯಾಸಾಗರನೂ ಸರ್ವೋತ್ತಮನೂ ಆದ ಆತನನ್ನು ಸ್ತುತಿಸಿ, ಆತನ ಲೆಖ್ಖವಿಲ್ಲದ ಮಹೋಪಕಾರಗಳನ್ನು ನೆನಸುತ್ತಿದ್ದಾರೋ? ಇಲ್ಲಾ. ಕ್ರೈಸ್ತರಾದರೂ ದೇವರನ್ನು ತಕ್ಕಷ್ಟು ಕೀರ್ತಿಸದೆ, ಆತನ ಉಪಕಾರಗಳನ್ನು ನೆನಸದೆ ಹೋಗುತ್ತಾರೆ. ಆದರೂ ಕ್ರೈಸ್ತರಿಗೂ ಹಿಂದುಗಳಿಗೂ ಈ ವಿಷಯದಲ್ಲಿಯೂ ಹೆಚ್ಚು ಕಡಿಮೆಯುಂಟು. ಕ್ರೈಸ್ತರಲ್ಲಿ ದೇವರ ಅಪಾರ ಪ್ರೀತಿಯನ್ನೂ ಮಹೋಪಕಾರಗಳನ್ನು ಮರತು ಬಿಟ್ಟು ಆತನನ್ನು ಸ್ತುತಿಸದೆ ಹೋಗ ಬಾರದೆಂಬದಾಗಿ ಎಚ್ಚರಿಸುವದೂ ಬುದ್ಧಿ ಹೇಳುವದೂ ಉಂಟು: ಹಿಂದುಗಳಲ್ಲಿ ಇಷ್ಟಾದರೂ ಕಾಣದು. ಅದಲ್ಲದೆ ಅನೇಕ ಕ್ರೈಸ್ತರು ದೇವರ ಅಪರಿಮಿತ ಪ್ರೀತಿಯನ್ನೂ ಕರುಣಾತಿಶಯವನ್ನೂ ನೆನಸುವವರಾಗಿ, ಆತನನ್ನು ಕೃತಜ್ಞತಾಭಾವಪೂರ್ವಕವಾಗಿ ಕೊಂಡಾಡುತ್ತಿ

ದ್ಧಾರೆ. ಹಿಂದು ಜನರಲ್ಲಿ "ದೇವರೇ! ದೇವರೇ!" ಎಂತ ಕೂಗುವದು ಬಹಳ ವಾಡಿಕೆಯಾದ ಸಂಗತಿ. ಆತನು ಸರ್ವಕರ್ತನೂ ಜ್ಞಾನಾಕರನೂ ದಯಾಸಾಗರನೂ ಎಂತ ಬಾಯಿಯಿಂದ ಅರಿಕೆ ಮಾಡುವದು ಸಹಾ ಬಹಳ ರೂಢಿ; ಆದರೂ ಆತನಲ್ಲಿ ಪೂರ್ಣ ವಿಶ್ವಾಸವಿಟ್ಟು, ಆತನ ದಯೋಪಕಾರಾದಿಗಳನ್ನು ತಕ್ಕಷ್ಟಾಗಿ ನೆನಸಿ, ಆತನನ್ನು ಕೊಂಡಾಡುವದೂ ಕೀರ್ತಿಸುವದೂ ಆತನ ಹೆಸರಿನ ಮಹಿಮೆಯನ್ನು ಸಾರುವದೂ ಆನೇಮುತ್ತಿನಷ್ಟು ಅಪರೂಪವಾದ್ದೇ. ಕೃತಜ್ಞತೆಯಲ್ಲಾ ಕೃತಘ್ನತೆ ಎಂಬದು ಹಿಂದು ಜನರಲ್ಲಿ ಬಹಳವೇ. ಕಾರಣ: ದೇವರನ್ನೂ ಆತನ ದಯಾಗುಣಾದಿಗಳನ್ನೂ ಚನ್ನಾಗಿ ಅರಿತು ಕೊಳ್ಳದವರಾಗಿದ್ದಾರೆ. ಚನ್ನಾಗಿ ತಿಳುಕೊಂಡದ್ದಾದರೆ, ದೇವರು ಪಾಪವೂ ಪುಣ್ಯವೂ, ದ್ವೇಷವೂ ಪ್ರೇಮವೂ ಇಲ್ಲದ ನಿರ್ಗುಣನೆಂತ ಹೇಳುತ್ತಿದ್ದಾರೋ? ದೇವರು ನಿರ್ಗುಣನೆಂತ ಬೊಗಳುತ್ತಾರಲ್ಲಾ! ನಿರ್ಗುಣನಾದ ದೇವರಿಗೆ ಕೃತಜ್ಞತಾಭಾವಪೂರ್ವಕ ಸ್ತೋತ್ರ ಮಾಡುವದು ಹ್ಯಾಗೆ? ದೇವರು ನಿರ್ಗುಣಿ ಎಂತ ಬೊಗಳುವವರು ಪಾಪ, ಕಪಟ, ಅನ್ಯಾಯ, ದ್ವೇಷ ಇತ್ಯಾದಿಗಳಿಂದ ತುಂಬಿದ ದೇವತೆಗಳನ್ನು ಕಲ್ಪಿಸಿಕೊಂಡದ್ದು ಆಶ್ಚರ್ಯವಲ್ಲಾ. "ಆಚಾರ್ಯರ ಮಗನಾಗಿ ಪುರಾಣಿಕನ ಅಳಿಯನಾಗಿ ಕ್ಷೀರಘೃತ ಅಂದರೆ ಅರಿಯೆನೇ? ಎಮ್ಮೇ ಶಗಣಿ!" ಎಂಬ ಗಾದೆಯಂತಾಯಿತು. ಆದರೆ ಅಂಥಾ ಕಲ್ಪಿತಗಳೂ, ಅಂಥಾ ಬಹುದೇವಮತವೂ, ಅಂಥಾ ಮೂರ್ತಿಪೂಜೆಯೂ ದೇವರನ್ನು ಸ್ತುತಿಸಿ ಸನ್ಮಾನಿಸುವ ಸಂಗತಿಯೋ? ತುಪ್ಪಕ್ಕೆ ಎಮ್ಮೇ ಶಗಣಿ ಎಂತ, ಎಮ್ಮೇ ಶಗಣಿಗೆ ತುಪ್ಪವೆಂತ ಹೇಳಿದರೆ, ತುಪ್ಪಕ್ಕೆ ನಿಂದಿಸಿದ ಹಾಗಾಯಿತಲ್ಲಾ? ಮೂರ್ತಿಪೂಜೆ ದೇವರನ್ನು ನಿಂದಿಸಿ, ಅಪಮಾನಿಸಿ ದುಃಖ ಪಡಿಸುವ ಮಹಾ ಪಾತಕವೇ ಸೈ.

ಹೀಗಿರಲಾಗಿ ಮೂರನೇ ಭಕ್ತಿವಿಧವಾದ **ಸ್ಮರಣ**ವೆಂಬ ಪಾವಟಿಗೆಯನ್ನು ಏರುವದು ಅತ್ಯವಶ್ಯವಾಗಿದೆ. ಸ್ಮರಣವಂದರೆ: ನೆನಸುವದು, ಧ್ಯಾನಗೊಂಡು ಯೋಚಿಸುವದು. ನಾವು ಯಥಾರ್ಥವಾಗಿಯೂ ಚನ್ನಾಗಿಯೂ ನಮ್ಮ ವಿಷಯದಲ್ಲೂ, ವಿಶ್ವದ ವಿಷಯದಲ್ಲೂ, ವಿಶ್ವಪಾಲಕನಾದ ದೇವರ ವಿಷಯದಲ್ಲೂ ಧ್ಯಾನಿಸಿ ಯೋಚಿಸಿದರೆ, ದೃಶ್ಯಾದೃಶ್ಯವಾದ್ದು ಸಮಸ್ತವು ಜ್ಞಾನಾಕರನೂ ದಯಾಸಾಗರನೂ ಸರ್ವಶಕ್ತನೂ ಆದ ಸೃಷ್ಟಿಕರ್ತನೊಬ್ಬನಿಂದ ಉಂಟಾದ್ದೇ; ಆತನು ನಮಗೆ ತಂದೆ, ನಾವು ಆತನಿಗೆ ಮಕ್ಕಳೂ ಆಳುಗಳೂ ಎಂಬ ಹಾಗೆ ಇರುವವರೂ, ಇರ ತಕ್ಕದ್ದೂ ಎಂತ ಗ್ರಹಿಸಿಕೊಂಡೇವು. ಈ ಗ್ರಹಿಕೆಯಲ್ಲಿ ಎರಡುಂಟು: ಭಯಭಕ್ತಿ ಎಂಬದೊಂದೂ ಮಮಕಾರಪೂರ್ವಕ ವಿಶ್ವಾಸವೂ. ದೇವರು ನಮಗೆ ಮಾಡುತ್ತಾ ಬಂದ ದಯಾತಿಶಯಗಳನ್ನೂ, ನಾವು ಆತನಿಗೆ ವಿರೋಧವಾಗಿ ಮಾಡುತ್ತಾ ಬಂದ ಪಾಪಗಳನ್ನೂ ನಾವು ಎಷ್ಟಕ್ಕೆ ತಿಳಿದು ನೆನಸುತ್ತೇವೋ ಅಷ್ಟಕ್ಕೆ ದೇವರ ಭಯವೂ ಪ್ರೀತಿಯೂ ವಿಶ್ವಾಸವೂ ನಮ್ಮಲ್ಲಿ ಹೆಚ್ಚಿ, ನಮ್ಮನ್ನು ಆತನ ಮುಂದೆ ಅಡ್ಡ ಬೀಳ ಮಾಡುವದು.

ಇದೇ ನಾಲ್ಕನೇ ಭಕ್ತಿವಿಧವಾದ **ಪಾದಸೇವನ** ಎಂಬದರ ಅಭಿಪ್ರಾಯವಾಗಿದೆ. ನಾವು ಏನಾದರೊಂದು ಪಂಚಲೋಹ ಶಿಲಾದಿಗಳಿಂದ ರಚಿತವಾದ ವಿಗ್ರಹದ

ಮುಂದೆ ನಮಸ್ಕಾರ ಮಾಡುವದರಿಂದಲೂ, ಇಂಥಾ ವಿಗ್ರಹದ ಪಾದಕ್ಕೆ ಹಾಲನ್ನಾಗಲಿ ತುಪ್ಪವನ್ನಾಗಲಿ ಎರೆಯುವದರಿಂದಲೂ, ಪುಷ್ಪಾದಿಗಳನ್ನು ಹಾಕುವದರಿಂದಲೂ ನಿಜ ದೇವರಿಗೆ ಪ್ರಯೋಜನವೇನು? ಅಥವಾ ಗುರುಗಳೂ ಬ್ರಾಹ್ಮಣರೂ ತಮ್ಮ ಕಾಲುಗಳನ್ನು ತೊಳಕೊಂಡ ಮಲಿನ ನೀರನ್ನು ಕುಡಿಸುವದಾಗಲಿ ಕುಡಿಯುವದಾಗಲಿ ದೇವರಿಗೆ ಮೆಚ್ಚುವವೋ? ಎಂದೂ ಮೆಚ್ಚದು. ಅದೊಂದು ಪಾದಸೇವೆ ಸೈ, ಆದರೆ ದೇವಸೇವೆ, ದೇವಾರಾಧನೆ ಅಲ್ಲವೇ ಅಲ್ಲಾ. ತನ್ನ ಪಾಪಕ್ಕೆ ಮನಸ್ತಾಪಗೊಂಡು, ಪವಿತ್ರನಾದ ದೇವರ ಮುಂದೆ ಅಡ್ಡ ಬಿದ್ದು, ಆತನು ಲೋಕಕ್ಕೆ ಕಳುಹಿಸಿದ ಅವತಾರ ಪುರುಷನಾದ ಯೇಸುವೆಂಬ ಶ್ರೀನಾಮವುಳ್ಳ ಜಗದ್ರಕ್ಷಕನ ಪಾದ ಹಿಡಿದು, ಆತನನ್ನು ಶರಣು ಹೊಗುವದೇ ನಾವು ದೇವರಿಗೆ ಮಾಡ ತಕ್ಕ ಪಾದಸೇವೆಯಾಗಿದೆ. ದೇವರು ಗರ್ವಿಷ್ಟರಿಗೆ ಎದುರಾಳಿ, ದೀನರಿಗೆ ಕೃಪಾಳು ಆಗಿದ್ದಾನೆ.

ಈ ಪ್ರಕಾರ ಜಗದ್ರಕ್ಷಕನನ್ನು ಶರಣು ಹೊಕ್ಕು, ತನ್ನನ್ನು ದೇವರ ಮುಂದೆ ತಗ್ಗಿಸಿ ಕೊಂಡವನು ಮಾತ್ರವೇ ದೇವರನ್ನು ತನ್ನ ದೇವರೆಂತ ಅರ್ಚನೆ ಅಂದರೆ ಆರಾಧನೆ ಮಾಡ ಬಹುದು. ಬೇರೆ ಅರ್ಚನೆಯೆಲ್ಲಾ, ಪೂಜೆಯಾಗಲಿ ಸಾಷ್ಟಾಂಗವಾಗಲಿ ಕೈ ಮುಗಿಯುವದಾಗಲಿ ವ್ಯರ್ಥವೇ. ಲೋಕಾಚಾರದ ಭಕ್ತಿ, ಬರೀ ಬಾಹ್ಯೋಪಾಸನೆ ದೇವರಿಗೆ ಅಸಹ್ಯವಾಗಿದೆ. ಕಪಟಿಗಳು ಎಷ್ಟೋ ಸಾರಿ ಭಕ್ತಿಯ ವೇಷವನ್ನು ಹಾಕಿಕೊಂಡು ಭಕ್ತರೆನ್ನಿಸಿ ಕೊಳ್ಳುತ್ತಾರಲ್ಲ! ಹಿಂದುಗಳ ಪುರಾಣಗಳನ್ನು ನೋಡಿದರೆ, ಬರೀ ಅಸಹ್ಯವಾದ ಸ್ವಾರ್ಥವೂ, ದ್ರವ್ಯಾಶೆಯೂ, ಕಾಮವೂ ಇತ್ಯಾದಿಗಳು ಬಹುಶಾ ಭಕ್ತಿಯ ವೇಷ ಧರಿಸಿ ಕೊಂಡದ್ದಾಗಿ ತೋರುತ್ತವೆ. ಈ ಪ್ರಸಂಗವನ್ನು ಓದುವ ನಿಮ್ಮಲ್ಲಿ ದೇವಭಜನೆಯ ವಿಚಾರವು ಹ್ಯಾಗೆ? ದಿನಾಲು ಸಂಧ್ಯಾವಂದನೆ ಮಾಡುತ್ತಿದ್ದೀರಿ, ದಿನಾಲು ದೇವಸ್ಥಾನಕ್ಕೆ ಹೋಗಿ ಭಜಿಸುತ್ತಿದ್ದೀರಿ. ಇಷ್ಟೆಲ್ಲಾ ಕಪಟದಿಂದ ಮಾಡುತ್ತೀರೋ? ಮನಃಪೂರ್ವಕ ಭಕ್ತಿಯಿಂದ ಮಾಡುತ್ತೀರೋ? ಮನಃಪೂರ್ವಕ ಭಕ್ತಿಯಿಂದ ಹಾಗೆ ಮಾಡಿದರೆ, ದೇವರ ಅನುಭವ ನಿಮಗಾದೀತು. ದೇವರ ಅನುಭವ ನಿಮಗೆ ಹೆಚ್ಚಾಗುತ್ತದೋ? ನೀವು ದೇವರ ಅನುಭವವನ್ನು ಮಾಡದೆಯೂ ಹೊಂದದೆಯೂ ಹೋದರೆ, ನಿಮ್ಮ ಭಜನೆಯೆಲ್ಲಾ ವ್ಯರ್ಥವೇ.

ಇದೇ ಮಾತು ವಂದನೆಯ ವಿಷಯದಲ್ಲಿ ಸಹಾ ಹೇಳ ತಕ್ಕದ್ದು. ನಿಜ ವಂದನೆಯಂದರೆ: ದೇವರ ಸದ್ಗುಣಗಳನ್ನು ಅರಿಕೆ ಮಾಡಿ, ಆತನ ನಾಮವನ್ನು ಮಹಿಮೆ ಪಡಿಸುವದು. ದೇವರ ನಾಮವು ಲೋಕದಲ್ಲೆಲ್ಲಾ ಮಹಿಮೆ ಪಟ್ಟು, ಆತನ ಗುಣಗಳ ಗೊತ್ತು ಸಕಲರಿಗೆ ಆಗಿ, ಎಲ್ಲಾ ಕುಲ, ಜನಾಂಗ, ಭಾಷೆ, ದೇಶಗಳವರಿಂದ ದೇವರು ವಂದನೆ ಹೊಂದಿ ಸ್ತುತಿಸಲ್ಪಡುವ ಹಾಗೆ, ಈ ದೇಶದ ಬ್ರಾಹ್ಮಣರು ಮೊದಲಾದ ಜಾತಿಯವರು ಏನು ಪ್ರಯತ್ನ ಮಾಡಿದ್ದಾರೆ? ಈ ದೇಶದಲ್ಲಿ ಭಕ್ತರೂ ಪಂಡಿತರೂ ಎನ್ನಿಸಿಕೊಳ್ಳುವಂಥ ಜನರು (ಲೌಕೀಕರೂ ವೈದಿಕರೂ) ಕಾಡು ಜನರಿಗೂ ಪಾಮರರಿಗೂ ಮೂಢರಿಗೂ ಪ್ರಸಂಗ ಮಾಡಿ, ಉಪದೇಶ ಕೊಟ್ಟು, ಅವರು ದೇವರನ್ನರಿತು, ಆರಾ

ಧಿಸಿ, ಆತನ ಭಕ್ತಿಯಿಂದ ಏನಾದರೂ ಸಿದ್ಧಿ ಹೊಂದುವ ಹಾಗೆ ಏನಾದರೂ ಮಾಡಿದ್ದಾರೋ? ಇಲ್ಲಾ. ಬ್ರಾಹ್ಮಣರಲ್ಲಿ ಅವಾಚ್ಯ ಕೃತ್ಯಗಳೂ ಅನ್ಯಾಯವೂ ಅಧರ್ಮವೂ ಹೇರಳವಾಗಿ ನಡಿಯುತ್ತದೆ. ದೇವಭಜನೆ, ದೇವಸ್ಥಾನದ ಪಾರುಪತ್ಯ ಮೊದಲಾದವುಗಳ ಸಂಬಂಧದಲ್ಲಾದರೂ ಅಂಥಾದ್ದು ನಡೆಯುತ್ತದೆ. ರಥೋತ್ಸವ ಮುಂತಾದ ಪ್ರಸ್ತಾಪಗಳಲ್ಲಿ ಕುಣಿದಾಡುತ್ತಾ, ಹಾಡುತ್ತಾ, ಕಾಮವಿಕಾರದ ಅಭಿನಯಗಳನ್ನು ಮಾಡುತ್ತಾ, "ಹನುಮಂತನ ಹಿಂದೆ ಬಾಲ" ಎಂಬಂತೆ ದೇವರನ್ನು ಪಾಲ್ಕಿಯಲ್ಲಿ ಕುಂಡ್ರಿಸಿ ಹೊತ್ತು ಕೊಳ್ಳುವ ಪೂಜಾರಿ ಭಟ್ಟರ ಬೆನ್ನಿನಲ್ಲಿ ಮೆರವಣಿಗೆಗೆ ಬರುವ ಮೇಳದವರನ್ನು ನೋಡಿದರೆ, ಈ ಧರ್ಮ ಎಂಥಾ ಅಧರ್ಮವೇ ಎಂತ ಹೇಳ ಬೇಕಾಗುತ್ತದಲ್ಲಾ. ಹಿಂದು ಜನರ ದೇವಪೂಜೆ ಮತಾಚಾರಾದಿಗಳಲ್ಲಿ ಪ್ರತ್ಯಕ್ಷವಾಗಿ ಕಾಣುವ ಅಯೋಗ್ಯತೆಗಳನ್ನೂ, ದೇವಪೂಜೆಯಲ್ಲಾ ದೇವದೂಷಣೆಯೇ ಆಗಿರುವ ಸಂಗತಿಗಳನ್ನೂ ಹೆಚ್ಚು ಬೈಲು ಪಡಿಸಿ ತೋರಿಸಲಿಕ್ಕೆ ನನಗೆ ಮನಸ್ಸಿಲ್ಲಾ. "ಅಂಗೈ ಹುಣ್ಣಿಗೆ ಕನ್ನಡಿಯಾಕೆ?" ಆದರೂ ಹಿಂದು ಮತ ಎಂಥಾದ್ದೆಂದು ಸ್ವಲ್ಪವಾಗಿಯಾದರೂ ಸೂಚಿಸಲಿಕ್ಕಾಗಿ ಮೇಳದವರ ಇತ್ಯಾದಿಗಳ ಸುದ್ದಿ ಸ್ವಲ್ಪ ತೆಗಿಯ ಬೇಕಾಯಿತು. ಫಲವನ್ನು ನೋಡಿ ಗಿಡವು ಎಂಥಾದ್ದೆಂದು ಹೇಳ ಬಹುದಲ್ಲಾ.

ಭಕ್ತಿಯ ಮನೆಗೆ ಶೇರುವ ಮೇಲಿನ ಮೂರು ಪಾವಟಿಗೆಗಳಾದ **ದಾಸ್ಯ, ಸಖ್ಯ, ಆತ್ಮನಿವೇದನ** ಎಂಬುವಂಥಾದ್ದಕ್ಕಿಂತ ಹೆಚ್ಚಿನ ಭಕ್ತಿಯುಂಟೋ? ಇಲ್ಲಾ. ನಾವು ದೇವರನ್ನು ಪೂರ್ಣ ಮನಸ್ಸಿನಿಂದಲೂ ಪೂರ್ಣ ಬುದ್ಧಿಯಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿ ಮಾಡಿ, ಆತನಿಗೆ ಸೇವಿಸಿ, ನಮ್ಮನ್ನೇ ಆತನಿಗೆ ಅರ್ಪಣೆ ಮಾಡಿ ಒಪ್ಪಿಸಿ ಕೊಟ್ಟರೆ, ಭಾಗ್ಯವಂತರಾಗುತ್ತೇವೆ. ಆದರೆ ಈ ಮೂರು ಉತ್ತಮ ಭಕ್ತಿವಿಧಗಳ ವಿಷಯದಲ್ಲಿ ಹಿಂದು ಜನರು ಬಹಳ ತಪ್ಪಿ ಹೋಗಿದ್ದಾರೆ. ದಾಸರಲ್ಲಿಯೂ ಬೈರಾಗಿಗಳಲ್ಲಿಯೂ ಮೊದಲಾದ ವಿಶೇಷ ಭಕ್ತರೆನ್ನಿಸಿ ಕೊಳ್ಳುವ ಜನರಲ್ಲಿಯೂ ಎಂಥಾ ಜಾರರೂ ಕಳ್ಳರೂ ತುಂಟರೂ ಪುಂಡರೂ ಇದ್ದಾರೆ. ದೇವರು ನಿರ್ಗುಣನೆಂತ ಹೇಳುವಂಥಾ ಜನರೂ ಕಾಮಕ್ರೋಧಾದಿಗಳಿಂದಲೂ, ಕಪಟ, ಕೃತ್ರಿಮ, ಠಕ್ಕು ಮೊದಲಾದ್ದರಿಂದಲೂ ತುಂಬಿ, ಕೇವಲ ದುರ್ವಾಸನೆಯ ಹೆಸರನ್ನು ಪಡಕೊಂಡ ಶಿವ ಕೃಷ್ಣ ಇತ್ಯಾದಿ ದೇವರುಗಳಂಥಾ ದೇವತೆಗಳನ್ನು ಭಜಿಸಿ, ಸೇವಿಸುವಂಥಾ ಜನರು ಪವಿತ್ರನೂ ನೀತಿಸ್ವರೂಪನೂ ಆದಂಥಾ ನಿಜದೇವರನ್ನು ಹ್ಯಾಗೆ ಪ್ರೀತಿ ಮಾಡಿ, ಹೊಂದಿ ಕೊಂಡಿದ್ದಾರು? ತಮ್ಮನ್ನು ದೇವರಿಗೆ ಅರ್ಪಣೆ ಮಾಡ ಬೇಕೆಂತ ಅನೇಕರು ಗಂಗೆಯಲ್ಲಿ ಹಾರಿ ಮುಣುಗಿ, ಅಥವಾ ತೇರಿನ ಗಾಲಿಯ ಕೆಳಗೆ ಬಿದ್ದುಕೊಂಡು ನಜ್ಜುಗುಜ್ಜಾಗಿ ಸಾಯುವದು ಆತ್ಮನಿವೇದನವೋ ಆತ್ಮಘಾತವೋ? ಆತ್ಮಘಾತವೇ ಹೊರ್ತು ಆತ್ಮಾರ್ಪಣೆಯಲ್ಲವೇ ಅಲ್ಲಾ. ಹಾಗು ಸನ್ಯಾಸ, ತಪಸ್ಸು, ದೇಹದಂಡನೆ ಮೊದಲಾದ್ದು ಕೇವಲ ನಿಷ್ಪ್ರಯೋಜಕವಾಗಿ, ತನ್ನನ್ನು ದೇವರಿಗೆ ಅರ್ಪಣೆ ಮಾಡಿ ಒಪ್ಪಿಸಿ ಕೊಡುವ ಸಂಗತಿಯಾಗಿರದೆ, ಬಹುಶಾ ಜನ್ಮವನ್ನು ಕೆಡಿಸಿಕೊಂಡು, ಪುರುಷಾರ್ಥವೇನೂ ಹೊಂದದ

ಭ್ರಾಂತಿಯ ಕಾರ್ಯವಾಗಿರುತ್ತದೆ. ಈ ವಿಷಯದಲ್ಲಿ ಹೆಚ್ಚಿನ ಮಾತೇನೂ ಅವಶ್ಯವಿಲ್ಲಾ. ಈ ದೇಶದ ದಾಸ ದಾಸಿಗಳ ವಿಚಾರವೂ, ಸನ್ಯಾಸಿ ಬೈರಾಗಿ ತಪಸ್ವಿಗಳ ವಿಚಾರವೂ ಭಕ್ತಿಯಾಗಲಿ ನೀತಿಯಾಗಲಿ ಮತಿಯಾಗಲಿ ಪ್ರಯೋಜನವಾಗಲಿ ಕಾಣದ್ದೇ ಎಂಬದು ವ್ಯಕ್ತವಲ್ಲವೋ? ಆದರೆ ಈ ಮೂರು ಭಕ್ತಿವಿಧಗಳು ಸದ್ಭಕ್ತರಲ್ಲಿ ಹ್ಯಾಗೆ ಎಂಬದನ್ನು ಇನ್ನು ತೋರಿಸಿ ಕೊಡ ತಕ್ಕದ್ದು.

ಕ್ರೈಸ್ತರೆಲ್ಲರು ದೇವರ ದಾಸರೂ ಆಳುಗಳೂ ಆಗಿರ ಬೇಕಾಗಿತ್ತು. ಆದರೆ ಕ್ರೈಸ್ತರೆನ್ನಿಸಿ ಕೊಂಬುವಂಥವರೆಲ್ಲರು ನಿಜ ಸತ್‌ಕ್ರೈಸ್ತರಲ್ಲಾ. ಸತ್‌ಕ್ರೈಸ್ತರು ದೇವದಾಸರೇ, ದೇವರ ಮನೆಯ ಆಳುಗಳೂ ಮಕ್ಕಳೂ ಆದವರೇ. ಮನುಷ್ಯರೆಲ್ಲರ ಹುಟ್ಟು ಗುಣವನ್ನೂ ಸ್ವಭಾವವನ್ನೂ ನೋಡಿದರೆ, ಅವರೆಲ್ಲರು ಷಡ್ವೈರಿಗಳಿಗೆ ಒಳಗಾಗಿ ಪಾಪಕ್ಕೆ ದಾಸರಾಗಿದ್ದಾರೆ ಎಂತ ಹೇಳ ಬೇಕು. ಇಂಗ್ಲಿಷರ ಮೊದಲಾದ ವಿಲಾಯತೀ ಕ್ರೈಸ್ತರ ಹಿರಿಯರು ಸಹಾ ನಿಜ ದೇವರಿಗೆ ದೂರವಾಗಿ ಮೂರ್ತಿಪೂಜಕರಾಗಿದ್ದರು. ಆದರೆ ದೇವರು ನರಜಾತಿಯನ್ನು ಕರುಣಿಸಿ, ಯೇಸು ಕ್ರಿಸ್ತನೆಂಬ ಅವತಾರಪುರುಷನನ್ನು ಜಗದ್ರಕ್ಷಕನಾಗಿ ಭೂಲೋಕಕ್ಕಿಳಿದು ಬರ ಮಾಡಿದನು. ಯೇಸು ಕ್ರಿಸ್ತನು ಇಂಗ್ಲಿಷರಲ್ಲ್ಯಾಗಲಿ, ವಿಲಾಯತಿಯ ಬೇರೆ ಯಾವ ದೇಶದವರಲ್ಲ್ಯಾಗಲಿ ಹುಟ್ಟಿದವನಲ್ಲಾ: ಆಸ್ಯವೆಂಬ ಭೂಖಂಡಕ್ಕೆ ಶೇರಿದ ಒಂದು ಶೀಮೆಯಲ್ಲಿ ಹುಟ್ಟಿದವನೇ. ಈ ಆಸ್ಯ ಭೂಖಂಡದಲ್ಲಿ ಅರಬಿಸ್ಥಾನ ಹ್ಯಾಗೋ ಹಾಗೆ ಹಿಂದುಸ್ಥಾನ ಸಹಾ ಶೇರಿದ ದೇಶವೇ. ಯೇಸು ಹುಟ್ಟಿ, ಕ್ರೈಸ್ತಧರ್ಮವು ವಿಲಾಯತಿಯಲ್ಲಿ ನೆಲೆಯಾಗಲಿಕ್ಕೆ ಅನೇಕ ವರುಷಗಳು ಕಳದು ಹೋದವು. ಈಗಲಾದರೂ ವಿಲಾಯತಿಯವರೆಲ್ಲರು ಕ್ರೈಸ್ತರಲ್ಲಾ. ಕ್ರೈಸ್ತರೆನ್ನಿಸಿ ಕೊಳ್ಳುವವರಾದರೂ ಎಲ್ಲರು ಸತ್‌ಕ್ರೈಸ್ತರಲ್ಲಾ; ಯಾಕಂದರೆ ಕ್ರೈಸ್ತರಿಂದ ಹುಟ್ಟುವದರಿಂದಲ್ಲಾ, ಕ್ರಿಸ್ತನನ್ನು ಹೊಂದಿ, ಆತನ ಸತ್ಯ ನೀತಿಗಳಲ್ಲಿ ನೆಲೆಗೊಳ್ಳುವದರಿಂದ ಮಾತ್ರವೇ ಒಬ್ಬನು ನಿಜ ಕ್ರೈಸ್ತನಾಗುತ್ತಾನೆ. ನಾನು ಕ್ರೈಸ್ತನಾದ್ದು ಹ್ಯಾಗೆ ಎಂಬದನ್ನು ನಿಮಗೆ ಸ್ವಲ್ಪ ವಿವರಿಸಿ ಹೇಳುತ್ತೇನೆ.

ನನ್ನ ತಂದೆತಾಯಿಗಳು ಭಕ್ತರಾಗಿದ್ದು, ನನಗೆ ಚಿಕ್ಕ ಪ್ರಾಯದಿಂದಲೇ ಸದ್ವೇದದಲ್ಲಿ ಬೋಧನೆ ಕೊಡುತ್ತಾ ಕೊಡಿಸುತ್ತಾ ಬಂದರು. ಕ್ರೈಸ್ತ ಧರ್ಮ ಹ್ಯಾಗೆ? ಕ್ರೈಸ್ತ ಸದಾಚಾರ, ದೇವಾರಾಧನೆ, ಪ್ರಾರ್ಥನೆ ಮುಂತಾದ್ದು ಹ್ಯಾಗೆ? ಎಂಬದನ್ನು ಚನ್ನಾಗಿ ಕಲಿತು ತಿಳುಕೊಂಡೆ. ಆದರೆ ಯೌವನ ಪ್ರಾಯ ಬರಲು, ಲೋಕವೂ ವಿಷಯಾದಿಗಳೂ ನನ್ನನ್ನು ಎಳದು ಮೋಹನಗೊಳ್ಳಿಸಿ, ದೇವರಿಗೆ ದೂರವಾಗ ಮಾಡಿ ಬಿಟ್ಟಿತು. ಷಡ್ವೈರಿಗಳ ಕೈಯಲ್ಲಿ ಬಿದ್ದು, ನಾಶನದ ಮಾರ್ಗದಲ್ಲಿ ವೈಯಲ್ಪಟ್ಟು ನಡೆಯುವವನಾದೆನು. ಮತ್ತು ನಾನು ನಾಶನದ ಮಾರ್ಗದಲ್ಲಿ ನಡೆಯುವವನು ಎಂತ ಬೇಗ ತಿಳುಕೊಂಡಾಗ, ಈ ಮಾರ್ಗವನ್ನು ಬಿಟ್ಟು ಬಿಡ ಬೇಕೆಂದಿರಲಾಗಿ ಷಡ್ವೈರಿಗಳು ನನ್ನನ್ನು ತಮ್ಮ ಶೆರೆಯಲ್ಲಿ ಬಂದೋಬಸ್ತು ಮಾಡಿ, ಆಶೆಗಳೆಂಬ ಬಂಧ ಬೇಡಿಗಳಿಂದ ಕಟ್ಟಿ, ಪಾಪಸೇವೆ ಮಾಡಿಸಿ, ಸುಖ ಸಮಾಧಾನ ತಪ್ಪಿಸಿ, ನನ್ನನ್ನು ಕಂಗೆಟ್ಟ ದುರ್ಗತನಾಗ ಮಾಡಿದವು. ಅಂದು

ನಾನು ಸ್ವಘಾತ ಮಾಡಿ ನನ್ನ ಅರಿಷ್ಟ ಜನ್ಮವನ್ನು ಬೇಗನೆ ತೀರಿಸಿ ಬಿಟ್ಟರೇನು? ಎಂಬ ಯೋಚನೆ ಹುಟ್ಟುವಷ್ಟು ನೀತಿ ಗತಿಗೆಟ್ಟವನಾದೆನು. ಆದರೆ ನಾನು ಸತ್ತರೆ, ನರಕದಲ್ಲಿ ಬೀಳ ಬೇಕಾದೀತಲ್ಲಾ ಎಂಬೀ ಭಯ ಒಂದೇ ನನಗೆ ಸ್ವಘಾತದ ಯೋಚನೆ ತಪ್ಪಿಸಿತು. ನನ್ನ ದುರ್ಗತಿಗೆ ತಪ್ಪಿಸಿ ಕೊಳ್ಳುವ ದಾರಿ ಕಂಡುಕೊಳ್ಳ ಬೇಕೆಂತ ಬೇರೆ ಬೇರೆ ಪುಸ್ತಕಗಿಸ್ತಕಗಳನ್ನು ಓದಲಾರಂಭಿಸಿ ಹುಡುಕುವವನಾದೆನು. ಆದರೂ ಅಂಥಾ ದಾರಿ ಕಾಣದೆ, ಮನಸ್ಸಿಗೆ ಸಮಾಧಾನವಾಗಲೊಲ್ಲದೆ ಹೋಯಿತು. ಕಡೆಗೆ ಸುವಾರ್ತೆ ಎಂಬ ಯೇಸು ಕ್ರಿಸ್ತನ ಚರಿತ್ರಪುಸ್ತಕವು ನನಗೆ ನೆನಪಾಗಿ, ಬಹಳ ದಿನ ಉಪೇಕ್ಷೆ ಮಾಡಿ ಮೂಲೆಯಲ್ಲಿ ಹಾಕಿ ಬಿಟ್ಟಿದ್ದ ಆ ಪುಸ್ತಕವನ್ನು ನಾನು ತೆಗೆದು ಓದಲಾರಂಭಿಸಿದೆನು. ನನ್ನವಸ್ಥೆ ಎಂಥಾದ್ದೆಂದು ನಾನು ಆ ಪುಸ್ತಕ ಓದಿ ಮತ್ತಷ್ಟು ತಿಳುಕೊಳ್ಳಲಾಯಿತು. ಅದರಲ್ಲಿ ನನ್ನ ಪಾಪದಾಸ್ಯದ ಫಲವು ನನ್ನ ಸ್ಥಿತಿಯೂ ಅನುಭವವೂ ಇದ್ದಂತೆಯೇ ವರ್ಣಿಸಿ ಕಾಣಿಸಿದ್ದಾಗಿ ಕಂಡು ಕೊಂಡದರಿಂದ, ನನ್ನ ಪಾಪರೋಗವನ್ನು ಇಷ್ಟು ನೆಟ್ಟಗೆ ವರ್ಣಿಸಿ ಕಾಣಿಸುವ ಶಾಸ್ತ್ರವು ಪಾಪರೋಗಕ್ಕೆ ಒಳ್ಳೇ ವೈದ್ಯಶಾಸ್ತ್ರವೆಂತ, ನನಗೆ ತಕ್ಕದೆಂತ ತಿಳುಕೊಂಡೆ. ಹಾಗೆ ತಿಳುಕೊಂಡ ಮೇಲೆ ನನಗೆ ಆ ಪುಸ್ತಕದ ಮೇಲೆ ಬಹಳ ನಂಬಿಕೆಯೂ ತಾತ್ಪರ್ಯವೂ ಹುಟ್ಟಿತು. ಆದ್ದರಿಂದ ನಾನು ಮತ್ತಷ್ಟು ಓದಿಕೊಳ್ಳ ಮನಸ್ಸೂ ಆಸಕ್ತಿಯೂ ಉಳ್ಳವನಾಗಿ ಓದಲಾಗಿ, ಈ ಪುಸ್ತಕವು ತೋರಿಸುವ ಭವರೋಗ ವೈದ್ಯ ಯೇಸು ನನಗೆ ಬೇಕಾದ ರಕ್ಷಕನೂ ನೀತಿಯೂ ಕೋರಿಕೆಯೂ ಎಂತ ತಿಳುಕೊಂಡೆನು. ಹೀಗೆ ತಿಳು ಕೊಂಡಾಗ ಆತನು ನನ್ನಂಥಾ ಪಾಪಿಗಳಿಗೋಸ್ಕರ ಭೂಲೋಕಕ್ಕವತರಿಸಿ ಕೊಂಡು, ಯಜ್ಞಪುರುಷನಾಗಿ ಮನುಷ್ಯರ ಪಾಪಕ್ಕೆ ಪ್ರಾಯಶ್ಚಿತ್ತಾರ್ಥವಾಗಿ ಮರಣ ತಾಳಿ, ತನ್ನಲ್ಲಿ ವಿಶ್ವಾಸವಿಡುವವರಿಗೆ ಪಾಪ ಪರಿಹಾರವನ್ನೂ ಸಮಾಧಾನವನ್ನೂ ನಿತ್ಯ ಮಂಗಳ ಜೀವವನ್ನೂ ದೊರಕಿಸುವಾತನೇ ಎಂಬುವ ಸಾಕ್ಷಿ ನನ್ನ ಮನಸ್ಸಿಗೆ ಹತ್ತಿತು. ಬಾಯಿಯಾರಿದವನ ಬಾಯಿಯಲ್ಲಿ ದಿವ್ಯ ಜಲವನ್ನು ಎರದು, ಕ್ಷುಧಾಪೀಡಿತ ಬಾಯಿಯಲ್ಲಿ ಮೇಲೋಗರವನ್ನು ಹಾಕಿ ಕೊಟ್ಟ ಹಾಗಾಗಿ, ನಾನು ಯೇಸುವಿಗೆ ಪ್ರಾರ್ಥಿಸಿ--ನಿನ್ನಲ್ಲಿ ನಾನು ವಿಶ್ವಾಸವಿಟ್ಟು ನಿನ್ನವನಾಗಿರುವಂತೆ ನನಗೆ ನಿನ್ನ ಮೇಲೆ ವಿಶ್ವಾಸವನ್ನೂ ಪ್ರೀತಿಯನ್ನೂ ಹೃದ್ಶುದ್ಧಿಯನ್ನೂ ಸಮಾಧಾನವನ್ನೂ ದಯ ಪಾಲಿಸು ಎಂತಾ ಬೇಡಿ ಕೊಂಡದಕ್ಕೆ ಆತನು ದಯಾಪರನಾಗಿ ನನ್ನ ಪಾಪರೋಗವನ್ನು ನಿವಾರಿಸಿ, ನನ್ನನ್ನು ಸ್ವೀಕರಿಸಿ ಕೊಂಡನು. ಅಂದಿನಿಂದ ನಾನು ಇನ್ನು ಪಾಪದಾಸನೂ ಷಡ್ವೈರಿಗಳ ಗುಲಾಮನೂ ಆಗಿರದೆ, ನನಗೋಸ್ಕರ ಮರಣ ತಾಳಿ, ಕ್ರಯವಾಗಿ ತನ್ನ ಪ್ರಾಣವನ್ನು ಕೊಟ್ಟು, ನನ್ನನ್ನು ತನಗೆ ಕೊಂಡು ಕೊಂಡ ಯೇಸುಸ್ವಾಮಿಯ ದಾಸನಾಗಿರುತ್ತೇನೆ. ಆತನಲ್ಲಿ ನನಗೆ ಇಷ್ಟಾರ್ಥ ಪ್ರಾಪ್ತಿ ದೊರಕಿ, ಪ್ರೀತಿ ಹುಟ್ಟಿ ಇರುವದರಿಂದ ನಾನು ಆತನನ್ನೂ, ಆತನ ಮುಖಾಂತರವಾಗಿ ಆತನನ್ನು ಲೋಕಕ್ಕೆ ಕಳುಹಿಸಿ ಕೊಟ್ಟ ದೇವರನ್ನೂ ಪ್ರೀತಿ ಮಾಡಿ, ದೇವರಿಗೆ ಆಳು ಎಂಬ ಹಾಗೆ ಮಾತ್ರವಲ್ಲಾ, ಸಖನು (ಅಂದರೆ ಸ್ನೇಹಿತನು) ಎಂಬ ಹಾಗೂ

ಮಾತ್ರವಲ್ಲಾ, ಮಗುವೇ ಎಂಬ ಹಾಗೆ ಆಗಿ, ಆತನ ಐಕ್ಯದಲ್ಲಿಯೂ ಸಮಾಧಾನದಲ್ಲಿಯೂ ಸೇವೆಯಲ್ಲಿಯೂ ಇದ್ದು, ಇಷ್ಟಾಪೂರ್ತಿಯನ್ನು ಪಡಕೊಂಡವನಾಗಿ, ಕೃತಜ್ಞತೆಯಿಂದಲೂ ಸಂತೋಷ ಆನಂದಗಳಿಂದಲೂ ತುಂಬಿ ಹರ್ಷಿತನಾಗಿರುತ್ತೇನೆ. ಆದ ಕಾರಣ ನಿಮಗೂ ಯೇಸುವಿನ ಮೂಲಕವಾಗಿ ಪಾಪಪರಿಹಾರ ದೊರಕಿ, ಪಾಪದಾಸ್ಯ ತಪ್ಪಿ, ನೀವು ದೇವರ ದಾಸರೂ ಸ್ನೇಹಿತರೂ ಮನೆಯವರೂ ಮಕ್ಕಳೂ ಆಗ ಬೇಕೆಂಬದು ನನ್ನ ಅಭಿಲಾಷೆಯಾಗಿದೆ. ನಾನು ಓದಿ ಸದ್ಗತಿಯನ್ನು ಕಂಡುಕೊಂಡ ಸುವಾರ್ತೆಯನ್ನು ನೀವು ಸಹಾ ತೆಗೆದು ಕೊಂಡು, ಓದಿ ಕೊಂಡು, ನಿಮ್ಮ ಪುರಾಣ ಶಾಸ್ತ್ರಾದಿಗಳಿಗೆ ಸರಿ ನೋಡಿ, ಯಾವದು ಒಳ್ಳೇದೆಂತ ವಿಚಾರಿಸಿ ಕೊಳ್ಳಿರಿ. ನನಗಾದ್ದು ನಿಮಗೂ ಆಗುವಂಥಾದ್ದು. ಅದು ನಿಮಗೂ ಪ್ರಾಪ್ತಿಸಿದರೆ, ನೀವು ಈ ವರೆಗೂ ಮಾಡದ ನವ (ಅಂದರೆ ಒಂಭತ್ತು) ವಿಧಭಕ್ತಿಯನ್ನು ಮಾತ್ರವಲ್ಲಾ, ನವ (ಅಂದರೆ ನವೀನ, ಹೊಸ) ವಿಧವಾಗಿ ಶ್ರವಣ, ಕೀರ್ತನೆ, ಸ್ಮರಣೆ, ಪಾದಸೇವೆ, ಅರ್ಚನೆ, ವಂದನೆ, ದಾಸತ್ವ, ಸಖಿತ್ವ, ಆತ್ಮಾರ್ಪಣೆ ಮಾಡುವವರಾಗುವಿರಿ. ಈ ನವ (ಅಂದರೆ ಹೊಸ) ವಿಧಭಕ್ತಿಯನ್ನು ಸಾಧಿಸಿ, ನೀವು ಕಡೆಗೆ ಎಲ್ಲಾ ಸದ್ಭಕ್ತಿಯ ತುದಿಯೂ ಉತ್ತಮ ಫಲವೂ ಆಗಿರುವ **ದೇವದರ್ಶನ** ಎಂಬುವ ಮಹಾ ಭಾಗ್ಯವನ್ನು ಹೊಂದುವಿರಿ.

ವರ್ತಮಾನಸಂಗ್ರಹವು.

ಓದುವವರೆಲ್ಲರಿಗೂ ಶುಭವಾಗಲಿ! ಮೊದಲಲ್ಲಿ ಅವರಿಗೂ ಬರೆಯುವ ನಮಗೂ ಹಿತವಾದ ಒಂದು ಮಾತೇನಂದರೆ— ಈ ಲೋಕದ ಸಂಸಾರಸಮುದ್ರದಲ್ಲಿ ಇರುವ ಎಲ್ಲರಿಗೂ ಬೇರೆ ಬೇರೆ ಸಾವಿರಾರು ವಿಘ್ನಗಳು ಸುತ್ತುಮುತ್ತಲೂ ಬಂದೊದಗುತ್ತಿರಲಾಗಿ ಅದನ್ನು ಭದ್ರವಾಗಿ ದಾಟಿ ಸ್ವರ್ಗದ ರೇವಿನಲ್ಲಿ ಶೇರುವ ಹಡಗವೇನದು? ನಿಜದೇವರ ಅನಂತ್ಯವಾದ ಧರ್ಮವೇ!

ಧರ್ಮ ಏವ ಪ್ಲವೋ ನಾನ್ಯಃ ಸ್ವರ್ಗಂ ಮಾನವ ಗಚ್ಛತಾಂ |
ಸೈವ ನೌಃ ಸಾಗರಸ್ಯೇವ ವಣಿಜಃ ಪಾರಮಿಚ್ಛತಃ ||

ಎಂದರೆ: ಮಾನವನೇ, ಧರ್ಮವಲ್ಲದೆ ಮತ್ತೊಂದೂ ಹರಗೋಲು ಸ್ವರ್ಗಕ್ಕೆ ಹೋಗುವದಿಲ್ಲ, ಸಾಗರದ ಆಚೆಯ ಧಡಕ್ಕೆ ಹೋಗಲಿಚ್ಛೈಸುವ ವ್ಯಾಪಾರಸ್ಥನ ಹಡಗದಂತೆ ಅದೇ. ಹಾಗಾದರೆ ನಿಜದೇವರ ಸದಾಸ್ಥಿರವಾದ ಧರ್ಮವೆಂಬ ಹಡಗವನ್ನು ಹತ್ತದವರು ಸಹ ಹತ್ತಲಿ; ಆ ಮೇಲೆ ಎಲ್ಲರೂ ಕೂಡ ಅಂಜಿಕೆಯನ್ನೆಲ್ಲಾ ಕಳೆದು, ಸಂಸಾರಸಮುದ್ರವನ್ನು ಉತ್ತರಿಸುತ್ತಿರೋಣ!

ಹಿಂದು ದೇಶವು.

ಹಿಂದು ದೇಶದಲ್ಲಿ ನಡೆದು ಜನರು ಬಹಳ ಮಾತಾಡಿದ ಒಂದು ಸಂಗತಿ ಬಡೋದೆ ಶೀಮೆಯಲ್ಲಿ ಆಯಿತು. ಈ ಶೀಮೆಯನ್ನು ಮಲಹರರಾವು ಎಂಬ ಮಹಾರಾಜನು ನಾಲ್ಕು ವರುಷ ಆಳುತ್ತ ಬಂದಲ್ಲಿ ಪ್ರಜೆಯ ಹಿತವನ್ನು ಒಂದಿಷ್ಟೂ ಬಯಸದೆ ಮನಸ್ಸು ಬಂದಂಥ ನಡತೆಯುಳ್ಳವನಾಗಿರುತ್ತಿದ್ದನು. ಕಡೆಗೆ ಅಲ್ಲಿ ಇಂಗ್ಲಿಷ ಸರ್ಕಾರದ ಅಪ್ಪಣೆಯ ಮೇಲೆ ಇದ್ದ ಮೇಲ್ವಿಚಾರಕನಾದ ಧೊರೆ ಕರ್ನಲ್ ಫೇರ್ ಎಂಬವನು, ಇವನು ಬಹಳ ಸತ್ಯವುಳ್ಳ ಗೃಹಸ್ಥನು; ಇವನ ವಿಚಾರಕ್ಕೆ ಮಲಹರರಾವು ತನ್ನ ಪಕ್ಷದವರು ಸಹಿತವಾಗಿ ಮೆಚ್ಚಲೇ ಇಲ್ಲ. ಹೀಗಿರಲಾಗಿ ಫೇರ್ ಧೊರೆಗೆ ವಿಷಪಾನವು ಕೊಡಲ್ಪಟ್ಟಾಗ ಹಿಂದು ದೇಶದ ಸರ್ವಾಧಿಪತಿ ವಿಷವನ್ನಿಕ್ಕಿಸಿದವರು ಯಾರೆಂಬದನ್ನೂ ಮಲಹರರಾವನ ಆಡಳಿತೆಯ ರೀತಿಯನ್ನೂ ಸೂಕ್ಷ್ಮವಾಗಿ ವಿಚಾರಿಸಲಿಕ್ಕೆ ಹೇಳಿದನು. ಆದ ವಿಚಾರಣೆಯ ಮೇರೆಗೆ ಮಲಹರರಾವನ ಅಧಿಕಾರವನ್ನು ತೆಗೆದು, ಅವನನ್ನು ಮದ್ರಾಸಿಗೆ ಕಳುಹಿಸಿ, ಜೀವನಕ್ಕೋಸ್ಕರ ತಕ್ಕ ಹಣವನ್ನು ನೇಮಿಸಿ, ಕಾವಲಿಯಲ್ಲಿ ಇಟ್ಟಿದ್ದಾರೆ. ಬಳಿಕ ಇಂಗ್ಲಿಷ ಸರ್ಕಾರದವರು ಬಡೋದೆಯ ರಾಣಿಯಾದ ಜಮುನಾಬಾಯಿಗೆ ಗಾಯಕವಾಡಿ ವಂಶದ ಮಲಹರನ ಮೂವರಾದ ನೆಂಟರನ್ನು ಗೊತ್ತು ಮಾಡಿ, ಇವರಲ್ಲಿ ಒಬ್ಬನನ್ನು ಶೀಮೆಯ ಮಹಾರಾಜನಾಗುವದಕ್ಕೆ ಆರಿಸಿಕೊಳ್ಳಿರಿ! ಎಂದು, ಹೇಳಿದಾಗ ಈಕೆ ಹತ್ತು ವರುಷದ ಗೋಪಾಲರಾವನನ್ನು, ಉತ್ತರಾಧಿಕಾರಿಯಾಗಲೆಂದು, ಆದು ಕೊಂಡಳು. ಆದರೆ ಆ ಮೂವರಲ್ಲೊಬ್ಬನಾದ ಮುರರಾವು ಎಂಬವನು ಅದನ್ನು ನೋಡಿ, ಹೊಟ್ಟೆಕಿಚ್ಚಿನಿಂದ ತನ್ನನ್ನೇ ಕೊಂದು ಕೊಂಡನು. ತರುವಾಯ ಮೇ ತಿಂಗಳಿನ ೨೭ನೆಯ ದಿನದಲ್ಲಿ ಸರ್ಕಾರದವರು ಮಹೋತ್ಸವದೊಡನೆ ಗೋಪಾಲರಾವನಿಗೆ ಪಟ್ಟ ಕಟ್ಟಿಸುವಲ್ಲಿ ಅವನಿಗೆ, ಸ್ಯಾಜಿರಾವು ಎಂದು, ಹೆಸರಿಟ್ಟರು. ಆ ಮೇಲೆ ಅಂತರಂಗದಲ್ಲಿ ಬ್ರಾಹ್ಮಣರು ತಮ್ಮ ರೀತಿಯಾಗಿ ಅವನಿಗೆ ಪಟ್ಟಾಭಿಷೇಕ ಮಾಡಿದರು; ಅದರಲ್ಲಿ ಒಬ್ಬ ಯಾಗಿ ಅವನನ್ನು ಪ್ರಮಾಣ ಮಾಡಿಸಿ ನುಡಿಸಿದದೇನಂದರೆ—ರಾಜನಾದ ನಾನು ಯಾಗಿಯಾದ ನಿನಗೆ ಎಂತೂ ಕೇಡು ಪಡಿಸಿದರೆ ಜನ್ಮದಿಂದ ಮರಣದ ವರೆಗೆ ನಾನು ಮಾಡಿ ಮಾಡುವ ಧರ್ಮಕ್ರಿಯೆಗಳನ್ನೂ ಇವುಗಳಿಂದ ಪ್ರಾಪ್ತವಾಗುವಂತಿರುವ ಸ್ವರ್ಗವನ್ನೂ ದೀರ್ಘಾಯುಸ್ಸನ್ನೂ ಸಂತಾನವನ್ನೂ ನೀನು ನನ್ನಿಂದ ತೆಗದು ಹಾಕು! ಇಂಥ ಪ್ರಮಾಣವು ವಿಸ್ಮಯಕರವಾದದಲ್ಲವೋ? ರಾಜರಲ್ಲಿ, ಇವನು ಯಾಗಿ ಅವನು ತೋಟಿಗನೆಂದು, ಮುಖದಾಕ್ಷಿಣ್ಯವಿರ ಬಾರದಲ್ಲ? ಅದಲ್ಲದೆ ಈಗ ಹೇಳಿದ ಆ ಬಡೋದೆಯ ಸಂಗತಿಯು ಸಂಬಂಧದಲ್ಲಿ ಬಹು ದುಃಖಕರವಾದದು ಏನಂದರೆ, ಮಲಹರರಾವನ ಕುರಿತಾದ ವಿಚಾರಣೆ ನಡೆಯುವಾಗ ಪುಣೆ ಪಟ್ಣದಲ್ಲಿಯ ವಿದ್ಯೆ ಕಲಿತವರೆನ್ನಿಸುವವರೊಳಗೆ ಅನೇಕರು ನ್ಯಾಯಾನ್ಯಾಯವನ್ನರಿಯದೆ, ಮಲಹರ ಮಹಾರಾಜನನ್ನು ಹ್ಯಾಗೂ ಗದ್ದುಗೆಯಲ್ಲಿರಗೊಡಿಸ ಬೇಕೆಂದು, ಎರಡು

ಬಾರಿಯೂ ವಿನಂತಿಪತ್ರವನ್ನು ಬರೆದು ಸರ್ಕಾರಕ್ಕೆ ಮುಟ್ಟಿಸಿದಲ್ಲದೆ ಬಳಿಕ ಸರ್ಕಾರದವರು ಮಹಾಪರಾಧಿಯಾದಂಥ ಮಲಹರರಾವನ ರಾಜಾಧಿಕಾರವನ್ನು ತಪ್ಪಿಸಿದ ಮೇಲೆ ಅಲ್ಲಿಯ ಬ್ರಾಹ್ಮಣರು ಅಯೋಗ್ಯವಾದ ಮನಸ್ಸನ್ನು ಬಿಡದೆ—ನಾರಾಯಣನೇ, ಶಿವನೇ, ಗದ್ದುಗೆಯಲ್ಲಿ ಅವನನ್ನು ತಿರಿಗಿ ಕೂಡ್ರಿಸಿರಿ! ಎಂದು, ಪ್ರಾರ್ಥಿಸಿದದು ಸಹ. ಆದರೆ ಜಮುನಾಬಾಯಿ ರಾಣಿ ಜೂನ್ ತಿಂಗಳಲ್ಲಿ ಪುಣೆಯ ಎರಡು ಸಾವಿರದ ಒಂದು ನೂರು ಜನರಾದ ಆ ಬ್ರಾಹ್ಮಣರಿಗೆ ಚನ್ನಾಗಿ ಉಣ್ಣಿಸಿ, ಒಬ್ಬೊಬ್ಬನಿಗೆ ಎಂಟೆಂಟು ಆಣೆಯನ್ನು ಇನಾಮಾಗಿ ಕೊಡಿಸಿದಳು. ಬಡೋದೆ ಶೀಮೆಯ ಸ್ವಾಜಿ ಮಹಾರಾಜನ ಪ್ರಧಾನ ಮಂತ್ರಿ ಯಾರಾದರಂದರೆ ಸರ್ ಮಾಧವರಾವು; ಆದರೆ ಸರ್ ಮೀಡ್ ಎಂಬ ಧೊರೆ ಬಡೋದೆಯ ಮೇಲ್ವಿಚಾರದಲ್ಲಿದ್ದಾರೆ.

ಏಪ್ರಿಲ್ ತಿಂಗಳಿನ ೨೭ನೆಯ ದಿನ ಲೊರ್ಡ್ ಹೋಬರ್ಟ್ ಎಂಬ ಮದ್ರಾಸು ಸಂಸ್ಥಾನದ ಅಧಿಪತಿ ಜ್ವರವಾಗಿ ತೀರಿ ಹೋದನು. ಆತನು ಮೂರು ವರುಷ ತನ್ನ ದೊಡ್ಡ ಉದ್ಯೋಗದ ಕೆಲಸವನ್ನು ನೆಟ್ಟಗೆ ನಡಿಸುತ್ತ ಬಂದಿದ್ದನು. ಅನಕಾ ರೋಬಿನ್ಸನ್ ಧೊರೆ ಆ ಕೆಲಸ ನೋಡುವವನಾಗಿದ್ದಾನೆ; ಇನ್ನು ಮೇಲೆ ಡ್ಯೂಕ್ ಒಫ್ ಬಕ್ಕಿಂಘಮ್ ಎಂಬ ಪ್ರಭು ಅಧಿಪತಿ ಆಗುವನೆಂತ, ನೇಮಿಸಿ ಅದೆ. ನವಂಬರ್ ತಿಂಗಳಿನ ಲನೆಯದರಲ್ಲಿ ಪ್ರಿನ್ಸ್ ಒಫ್ ವೇಲ್ಸ್ ಎಂಬ ಬ್ರಿತಿಷ ಮಹಾಶ್ರೀಮಂತನು ಸೆರಾಪಿಸ್ ಎಂಬ ಹಡಗದಲ್ಲಿ ಇಂಗ್ಲಂದಿನಿಂದ ಬಂದು ಮುಂಬಯಿಗೆ ಮುಟ್ಟುವನೆಂಬಂತೆ ಕಾಣುತ್ತದೆ; ತನ್ನ ತಾಯಿಯಾದ ವಿಕ್ಟೋರಿಯಾ ರಾಣಿಯುವರು ಈಗ ಆಳುವ, ತಾನು ಆ ಮೇಲೆ ಆಳುವವನಾಗುವ ಈ ಹಿಂದು ದೇಶವನ್ನು ಒಮ್ಮೆ ನೋಡ ಬೇಕೆಂದು, ಆತನಿಗೆ ಬಹಳ ಅಪೇಕ್ಷೆ ಉಂಟು.

ಮೇ ತಿಂಗಳಿನ ೧೧ನೆಯ ದಿನ ಸರ್ವಾಧಿಪತಿ ಸರ್ ಫೋರ್ಸಿಥ್ ಎಂಬ ಧೊರೆಯನ್ನು ರಾಯಭಾರಿಯಾಗಿ ಬರ್ಮ ದೇಶದ ರಾಜನ ಬಳಿಗೆ ಕಳುಹಿಸಿದನು. ಇದಕ್ಕೆ ಎರಡು ಕಾರಣಗಳಿದ್ದವು: ಬರ್ಮ ರಾಜನು ತನ್ನ ದೇಶದ ಮೇರೆಯನ್ನು ದಾಟಿ ಇಂಗ್ಲಿಷ ರಾಜ್ಯಕ್ಕೂ ತನ್ನ ರಾಜ್ಯಕ್ಕೂ ನಡುವೆ ಇರುವ ಒಂದು ಶೀಮೆಯನ್ನು ತನ್ನದು ಮಾಡಿ ಕೊಳ್ಳಲಿಕ್ಕೆ ಪ್ರಯತ್ನಿಸುವದು ಒಂದು, ಬರ್ಮ ರಾಜ್ಯ ಹೊಂದಿರುವ ಚೀನ ದೇಶದ ಒಂದು ನಾಡಿನಲ್ಲಿ ಯಾರೊ ಮಾರ್ಗರಿ ಎಂಬ ಒಬ್ಬ ಇಂಗ್ಲಿಷ ಧೊರೆಯನ್ನು ಕೊಲ್ಲಿಸಿ ಇವನ ಸಂಗಡ ಇದ್ದ ಹಲವರು ಇಂಗ್ಲಿಷ ಸರ್ಕಾರಿ ಸಿಪಾಯಿಗಳ ಮೇಲೆ ಒಂದು ಚೀನಿ ದಂಡನ್ನು ಬೀಳಿಸಿದದು ಮತ್ತೊಂದು. ಅಲ್ಲಿ ಕೊಲೆ ಪಟ್ಟ ಈ ಧೊರೆ ಇಂಗ್ಲಿಷ ಸರ್ಕಾದವರ ಸಮ್ಮತಿಯಿಂದ ಯುನ್ನಾನೆಂಬ ಚೀನಿ ಒಳನಾಡಿಗೆ, ಒಂದು ಹೊಸ ವ್ಯಾಪಾರಮಾರ್ಗವು ಲೋಕದ ಉಪಕಾರಕ್ಕಾಗಿ ಸಿಕ್ಕಲಿ ಎಂದು, ಒಬ್ಬ ಕರ್ನಲ್ ಧೊರೆಯ ಕೆಳಗಿರುವ ಹದಿನೈದು ಮಂದಿ ಶಿಕ್ಕರಾದ ಸಿಪಾಯಿಗಳ ಆಶ್ರಯದಲ್ಲಿ ಹಿಂದು ದೇಶದಿಂದ ಹೊರಟು, ಬರ್ಮ ದೇಶದ ಐರಾವತೀ ನದಿಯಲ್ಲಿಯ ಭಾಮೋ ಎಂಬ ಪಟ್ಟವನ್ನು ದಾಟಿ ನಾಲ್ಕು ದಿವಸದ ಪ್ರಯಾಣ ಮಾಡಿದನಂತರ, ಶತ್ರು

ಗಳು ಹತ್ತರದಲ್ಲಿ ಇದ್ದಾರೆಂದು, ಅನುಮಾನವು ಹುಟ್ಟಿತು. ಆಗ ಮಾರ್ಗರಿ ಧೊರೆ ವಿಚಾರಿಸುವದಕ್ಕೋಸ್ಕರವಾಗಿ ಉಳಿದವರನ್ನು ಬಿಟ್ಟು ಒಬ್ಬನೇ ಮುಂದಿನ ಪಟ್ಣಕ್ಕೆ ಹೋದಾಗ ಅವನ ಜೀವವನ್ನು ಅಲ್ಲಿ ತೆಗೆದರು; ಅಷ್ಟರಲ್ಲಿ ಐನೂರು ಮಂದಿ ಚೀನಿ ದಂಡಿನವರು ಕಾಡುಳ್ಳ ಬೆಟ್ಟಗಳಿಂದ ಇಳಿದು, ಆ ಕರ್ನಲ್ ಧೊರೆಯ ಕಡೆಗೂ ಅವನ ಸಿಪಾಯಿಗಳ ಕಡೆಗೂ ಗುಂಡು ಹಾಕುವವರಾದರು. ಆದರೆ ಈ ಹದಿನೈದು ಮಂದಿ ಸಿಪಾಯಿಗಳು ತಮ್ಮ ಮುಖ್ಯಸ್ಥನೊಂದಿಗೆ ಬಹಳ ಶೂರತ್ವ ತೋರಿಸಿ, ಯುಕ್ತಿಯಿಂದ ಅಡಿಗಡಿಗೆ ಹಿಂದೆ ಸರಿದು ಹೋಗಿ, ಜೀವವನ್ನುಳಿಸಿ ಕೊಂಡು ತಿರಿಗಿ ಭಾಮೋ ಪಟ್ಣಕ್ಕೆ ಬಂದರು. ಆ ಕೊಲೆಯೂ ಮುತ್ತುವಿಕೆಯೂ ಆದ ನಾಡು ಲೀಸೀಫಾಬಿ ಎಂಬ ಚೀನಿ ದಳವಾಯಿಯ ಕೆಳಗೆ ಅದೆ. ಚೀನಿ ಜನರೆಲ್ಲರು ಪರಸ್ಥಳದವರೆಲ್ಲರಿಗೂ ಹಗೆ ಮಾಡುವದರಿಂದ ಆ ಪಾತಕಗಳು ಈ ದಳವಾಯಿಯ ಅಪ್ಪಣೆಯ ಮೇಲೆ ನಡೆದವೆಂಬದು ನಿಶ್ಚಯವೆನ್ನಿಸುತ್ತದೆ; ಅದಲ್ಲದೆ ಆ ಮೇಲೆ ಬರ್ಮಿ ರಾಜನು ತನಗೆ ಭೇಟಿ ಕೊಟ್ಟ ಆ ಲೀಸೀಫಾಬಿಗೆ ಬಹಳ ಸ್ನೇಹದಿಂದ ಉಪಚರಿಸಿದದು ಈ ರಾಜನು ಸಹ ಆ ಕಾರ್ಯಗಳಲ್ಲಿ ಅಪರಾಧಿ ಆಗಿದ್ದಾನೆಂಬ ಅನುಮಾನವನ್ನು ಹುಟ್ಟಿಸಿದದು ಸಹಜವೇ. ಹೀಗಿರಲಾಗಿ ಆ ಸರ್ ಫೂರ್ಸಿಥ್ ಧೊರೆ ರಾಯಭಾರಿಯಾಗಿ ಬರ್ಮಿ ರಾಜನ ಬಳಿಗೆ ಹೋಗಿ, ಮೊದಲು ಇಂಗ್ಲಿಷರಿಗೂ ಬರ್ಮಿಯರಿಗೂ ನಡುವೆ ಇರುವ ಆ ಶೀಮೆಯ ವಿಷಯ ಮಾತಾಡಿದಾಗ ಬರ್ಮಿ ರಾಜನು, ಅದನ್ನು ತೆಕ್ಕೊಳ್ಳುವ ಆಲೋಚನೆಯನ್ನು ಎಂದಿಗೂ ಬಿಟ್ಟು ಬಿಡುತ್ತೇನೆಂದು, ಸಮ್ಮತಿ ಪಟ್ಟನು. ತರುವಾಯ ಆ ಇಂಗ್ಲಿಷ ಧೊರೆ ಆ ಲೀಸೀಫಾಬಿಯನ್ನು ಇಂಗ್ಲಿಷ ಸರ್ಕಾರದವರು ತಾವು ದಂಡಿಸ ಬೇಕಾದೀತೆಂಬ ಅಭಿಪ್ರಾಯವಾಗಿ, ಅವಶ್ಯವಾದರೆ ಇಂಗ್ಲಿಷ ಒಂದು ದಂಡನ್ನು ತನ್ನ ದೇಶವನ್ನು ದಾಟಲೀಸ ಬೇಕೆಂದು, ರಾಜನಿಗೆ ಬಿನ್ನವಿಸಲಾಗಿ ಇವನು ಒಲ್ಲೆನೆಂದು ಒಪ್ಪಲಿಲ್ಲ. ಇಂಥ ಉತ್ತರವನ್ನು ಪಡೆದು, ರಾಯಭಾರಿ ಹಿಂದಕ್ಕೆ ಬಂದನು. ಚೀನಿ ಸರ್ಕಾರದವರು ಆ ಲೀಸೀಫಾಬಿಗೆ ಶಿಕ್ಷೆ ಮಾಡದಿದ್ದರೆ ಏನಾಗುವದೆಂದು, ಈಗ ಹೇಳ ಕೂಡದು; ಎಲ್ಲವೂ ಸಮಾಧಾನವಾಗಿ ತೀರಲೆಂದು, ದೇವರಿಗೆ ಬೇಡಿ ಕೊಳ್ಳ ತಕ್ಕದಾಗಿದೆ. ಈಗಿನ ಚೀನಿ ರಾಜ್ಯದ ಕೈಸರನು ನಾಲ್ಕು ವರುಷದ ವಯಸ್ಸಿನವನು ಮಾತ್ರ.

ಕಳೆದ ವರುಷ ವಾಂತಿಭೇದಿ ಹಿಂದು ದೇಶದ ಅನೇಕ ದೆಸೆಗಳಲ್ಲಿ ಹುಟ್ಟಿತು; ಬಡೋದೆ ಮುಂಬಯಿ ಠಾಣೆ ನಾಸಿಕೆ ಅಯೋಧ್ಯೆ ತಿರುಚಿನಾಪಳ್ಳಿ ತಂಜಾವೂರು ಮೊದಲಾದ ಸ್ಥಳಗಳಲ್ಲಿ ಅದರಿಂದ ಜೀವಹಾನಿ ಆಯಿತು; ಅದು ಹಿಮಾಲಯವನ್ನಾದರೂ ಹತ್ತಿ ಹೋಗಿ, ಸರ್ವಾಧಿಪತಿ ಬೇಸಿಗೆಯ ಕಾಲದಲ್ಲಿರುವ ಸಿಮ್ಲ ಊರಿನಲ್ಲಿ ಸಹ ಅನೇಕರನ್ನು ಕೊಂದಿತು; ಆದರೆ ಅದು ಎಲ್ಲಿಯಾದರೂ ಬಹಳ ದಿವಸ ತಡೆಯಲಿಲ್ಲ. ಮೇ ತಿಂಗಳು ಪಂಜಾಬಿನ ಪೇಶಾವರವೆಂಬ ಪಟ್ಣದಲ್ಲಿ ಒಂದು ದೊಡ್ಡ ಬೆಂಕಿ ಹತ್ತಿ, ಅರ್ವತ್ತು ತಾಸು ಉರಿಯುತ್ತಲೇ ಇತ್ತು; ಅದರಿಂದ ಹದಿನೈದು ಸಾವಿರ ಮಂದಿ ಮನೆಯಿಲ್ಲದವರಾದರು; ಸುಟ್ಟ ಮನೆಗಳ ಲೆಖ್ಖವು ಮೂರು ಸಾವಿರ.

ಸಿಂಧು ನದಿಯ ತಗ್ಗಿನಲ್ಲಿ ಲೋಹಮಾರ್ಗವನ್ನು ಕಟ್ಟುವ ಕೆಲಸವು ಸಾಗುತ್ತ ಬಂದದೆ; ಅವಶ್ಯವಾದ ಇನ್ನೂ ಬೇರೆ ಲೋಹಮಾರ್ಗಗಳನ್ನು ಉಂಟು ಮಾಡುವ ಆಲೋಚನೆ ಸರ್ಕಾರದವರಲ್ಲಿ ಅದೆ.

ವಿಲಾಯತಿ ದೇಶಗಳು.

ಇಂಗ್ಲಂದಿನಲ್ಲಿ ಸಮಾಧಾನದ ಸ್ಥಿತಿಗತಿ ತಪ್ಪಲಿಲ್ಲ. ನಮ್ಮ ರಾಣಿಯವರಿಗೂ ವಿಲಾಯತಿಯ ಮಿಕ್ಕ ರಾಜರಿಗೂ ಸ್ನೇಹವೇ ಉಂಟು. ಭೂಗೋಳವಿದ್ಯೆಯ ಬೆಳವಣಿಗೆಗೋಸ್ಕರ ಇಂಗ್ಲಂದಿನವರು ತಿರಿಗಿ ಒಂದು ತಕ್ಕ ಹಡಗವನ್ನು ಭೂಚಕ್ರದ ಉತ್ತರಾಗ್ರದ ಕಡೆಗೆ ಕಳುಹಿಸಿದ್ದಾರೆ; ಯಾಕಂದರೆ ಆ ಉತ್ತರದ ತುದಿಗೆಯೇ ಯಾರೂ ಹೋಗಿ ಬರಲಿಲ್ಲ; ಅಲ್ಲಿ ಹಿಮ ತುಂಬಿದ ಭೂಮಿ ಉಂಟೋ? ಸಮುದ್ರವುಂಟೋ? ಅದನ್ನು ಈ ವರೆಗೂ ಯಾರೂ ತಿಳುಕೊಂಡಿಲ್ಲ. ಇಂಗ್ಲಂದಿನ ಹತ್ತರವಿರುವ ಸಿಲ್ಲಿ ದ್ವೀಪಗಳ ಒಂದು ಬಂಡೆಕಲ್ಲಿಗೆ ಷಿಲ್ಲೆರೆಂಬ ದೊಡ್ಡ ಹೊಗೆಹಡಗವು ತಾಗಿ ಒಡೆದು ಮುಳುಗುವಲ್ಲಿ ಮುನ್ನೂರ ಹನ್ನೊಂದು ಜನರು ಸತ್ತರು.

ಜರ್ಮನಿ ರಾಜ್ಯದ ಕೈಸರನಿಗೆ ಭೇಟಿ ಕೊಡುವದಕ್ಕೆ ರುಸ್ಸಿಯ ರಾಜ್ಯದ ಕೈಸರನೂ ಸ್ವೀದನ್ ರಾಜ್ಯದ ಅರಸನೂ ಆಸ್ತ್ರಿಯ ರಾಜ್ಯದ ಮುಖ್ಯ ಸೇನಾಧಿಪನೂ ಬಂದು ಹೋದರು. ಜರ್ಮನಿಯ ಕೈಸರನಿಗೆ ಈತಲಿ ರಾಜ್ಯದ ಅರಸನನ್ನು ಹೋಗಿ ದರ್ಶಿಸುವದಕ್ಕೆ ಅಪೇಕ್ಷೆ ಪಟ್ಟನು; ಆದರೆ ವೈದ್ಯಗಾರರು, ದೂರವಾದ ಪ್ರಯಾಣದಿಂದ ಮುದಿಪ್ರಾಯದವನಾಗಿರುವ ಕೈಸರನ ಶರೀರದ ಸೌಖ್ಯವು ಕುಂದೀತೆಂದು, ಹೇಳಿದದರಿಂದ ಆತನು ತನ್ನ ಅಪೇಕ್ಷೆ ಈ ವರೆಗೂ ತೀರಿಸಲಿಲ್ಲ. ಆದರೆ ಜರ್ಮನಿಯ ಮಹಾಶ್ರೀಮಂತನು ತನ್ನ ಹೆಂಡತಿಯ ಸಂಗಡ ಹೋಗಿ, ಈತಲಿಯ ಅರಸನಿಗೆ ದರ್ಶನ ಮಾಡಿದನು. ರುಸ್ಸಿಯದ ಕೈಸರನಿಗೂ ಆಸ್ತ್ರಿಯದ ಕೈಸರನಿಗೂ ಆಸ್ತ್ರಿಯದಲ್ಲಿಯೇ ಮಿತ್ರತ್ವವುಳ್ಳ ಪರಸ್ಪರ ದರ್ಶನವಾಯಿತು. ಈ ಪ್ರಕಾರವಾಗಿ ಹೇಳಿದ ಆ ರಾಜರೆಲ್ಲರೂ ಗೆಳೆಯರಾಗಿ ಕಾಣಿಸಿ ಕೊಳ್ಳುತ್ತಾರೆ.

ಫ್ರಂಚು ರಾಜ್ಯದಲ್ಲಿ ಪ್ರಜಾರಾಜತ್ವದ ಆಡಳಿತೆ ಈ ವರುಷದಲ್ಲಿಯೂ ಉಳಿದು ಅದೆ; ಅಂಥ ರಾಜತ್ವದಲ್ಲಿ ವಿಶೇಷವಾದ ಪ್ರಯೋಜನವುಂಟೆಂಬಂತೆ ತೋರುವದಿಲ್ಲ. ಫ್ರಂಚಿನ ದಕ್ಷಿಣಭಾಗದಲ್ಲಿ ಬಹು ಮಳೆಯಿಂದ ಹೊಳೆಗಳು ಹೆಚ್ಚಾಗಿ ಬಿದ್ದಲ್ಲಿ ಸುಮಾರು ಮೂರು ಸಾವಿರ ಜನರು ಮೃತರಾದದಲ್ಲದೆ ಹನ್ನೆರಡು ಕೋಟಿ ರೂಪಾಯಿಗಳ ಬದುಕು ಹಾಳಾಯಿತು.

ಸ್ಪೇನ್ ದೇಶದಲ್ಲಿ ಒಂದು ಪಕ್ಷದವರು ಅಲ್ಫೊನ್ಸೊ ಎಂಬವನನ್ನು ಅರಸನೆಂತ ಆರಿಸಿ ಕೊಂಡರು; ವಿಲಾಯತಿಯ ಬೇರೆ ಬೇರೆ ರಾಜರು ಅದಕ್ಕೆ ಸಮ್ಮತಿ ಪಟ್ಟಿದ್ದಾರೆ. ಆದರೆ ಅದಕ್ಕೆ ಮುಂಚೆ ಮತ್ತೊಂದು ಪಕ್ಷದವರು ಅರಸನನ್ನು ಮಾಡಿ ಕೊಂಡಿದ್ದ ಕರ್ಲೊಸ್ ಎಂಬವನು ಈ ಅಲ್ಫೊನ್ಸೊ ರಾಜನಿಗೆ ಒಳಪಡಲೊಲ್ಲದೆ, ಅವನಿಗೆ ಒಂದು ದಂಡಿನೊಡನೆ ಎದುರಿಸುತ್ತಿದ್ದಾನೆ.


ಭೂಮಿಯೊಳಗೆ ಅಗ್ನಿ ಉಂಟೆಂತ, ಈ ವರುಷದಲ್ಲಿಯೂ ಬೇರೆ ಬೇರೆ ಭೂಕಂಪಗಳಿಂದ ತಿರಿಗಿ ಗೊತ್ತಾಯಿತು. ಇವುಗಳೊಳಗೆ ಬಹು ದೊಡ್ಡದು ಅಮೆರಿಕ ಭೂಖಂಡದ ದಕ್ಷಿಣ ಭಾಗಕ್ಕೆ ಶೇರಿದ ನ್ಯೂಗ್ರನಾದ ಎಂಬ ಶೀಮೆಯಲ್ಲಿ ಆಯಿತು; ಅಲ್ಲಿ ಹುಟ್ಟಿದ ಕಂಪದಿಂದ ಹಲವು ಪಟ್ಣಗಳೂ ಸುಮಾರು ಹದಿನಾರು ಸಾವಿರ ನಿವಾಸಿಗಳೂ ಅಳಿದು ಹೋದದಾಯಿತು. ಮತ್ತೆರಡು ದೊಡ್ಡ ಭೂಕಂಪಗಳಲ್ಲಿ ಒಂದು ಅಮೆರಿಕದ ಮೆಕ್ಸಿಕೋ ಎಂಬ ದೇಶದಲ್ಲಿಯೂ ಮತ್ತೊಂದು ತುರ್ಕರ ರಾಜ್ಯಕ್ಕೆ ಶೇರಿದ ಸಣ್ಣ ಆಸಿಯ ಎಂಬ ಶೀಮೆಯಲ್ಲಿಯೂ ಸಂಭವಿಸಿದವು.

ಜಮೀನುದಾರನೂ ಕೋಮಟಿಗನೂ.

ಒಂದಾನೊಂದು ದಿನದಲ್ಲಿ ಎತ್ತಲೂರು ಎಂಬಲ್ಲಿಯ ಮುಸಾಫರಖಾನೆಗೆ ಒಬ್ಬ ಜಮೀನುದಾರನು ಜಾತಿ ಕುದುರೆಯನ್ನು ಹತ್ತಿಕೊಂಡು ಬಂದು ಮುಟ್ಟಿದನು. ಅಲ್ಲಿ ಮೊದಲು ಮುಟ್ಟಿ ನಿಂತಿದ್ದ ಕೋಮಟಿ ಜಾತಿಯ ಒಬ್ಬ ವರ್ತಕನು ಜಮೀನುದಾರ ಕುದುರೆಯಿಂದಿಳಿದ ಸಂಗಡಲೇ ಅವನನ್ನು ವಂದಿಸಿ ಮಾತಾಡಿಸಿದ ಕಡೆಗೆ—ರಾಯರ ತುರಗ ಉತ್ತಮ ಜಾತಿಯದಾಗಿರುವದಲ್ಲದೆ ಬಹಳ ಚಲೋದಾಗಿಯೂ ಸುಲಕ್ಷಣ ಉಳ್ಳದ್ದಾಗಿಯೂ ತೋರುತ್ತದೆ ಎಂಬದಾಗಿ ಪ್ರಶಂಸೆ ಗೈಯಲಾರಂಭಿಸಿದನು. ಆ ಪ್ರಶಂಸೆಗೆ ಆ ಜಮೀನುದಾರನು—ಕಂಡ ಕಂಡದ್ದನ್ನು ಸುಮ್ಮನೆ ಹೊಗಳಿ ಬೊಗಳುವದು ನ್ಯಾಯವಲ್ಲ ಎಂತ ಹೇಳಿದ್ದಕ್ಕೆ, ಆ ಕೋಮಟಿಗನು—ನಾನು ಹೇಳಿದ್ದು ಸುಮ್ಮನೆಯಲ್ಲ, ಈ ಕುದುರೆ ಉತ್ಕೃಷ್ಟ ಜಾತಿಯದು. ಅದರಂಥಾ ರಾಜ ಅಶ್ವ ಪುಣ್ಯಾಧರ್ಮರಾಯರಿಗೆ ಶಿಕ್ಕುವದಲ್ಲದೆ, ಇತರರಿಗೆ ಶಿಕ್ಕದು; ಈ ಕುದುರೆ ನನಗೆ ಶಿಕ್ಕಿದರೆ, ನೂರು ಪೆಟ್ಟು ತಿಂದೇನು, ಮನಸ್ಸು ಅಷ್ಟು ಎಳೆಯುತ್ತದೆ ಎಂತ ಹೇಳಿದನು. ಅದಕ್ಕಾ ಜಮೀನುದಾರನು—ನೂರು ಪೆಟ್ಟು ಯಾಕೆ? ನಿನಗೆ ಬೇಕಾದರೆ, ನೀನು ನನ್ನ ಕೈಯಿಂದ ೫೦ ಪೆಟ್ಟು ತಿಂದರೆ ಸೈ, ಕುದುರೆ ಕೊಟ್ಟು ಬಿಡುತ್ತೇನೆಂದನು. ಈ ಮಾತನ್ನು ಕೇಳಿ, ಆಶೆಯೂ ಧೈರ್ಯವೂ ಹೆಚ್ಚಿ, ಕೋಮಟಿಗನು—೫೦ ಪೆಟ್ಟಿಗೆ ಕೊಡಲಿಕ್ಕಾದರೆ, ೨೫ಕ್ಕೆ ಕೊಡಲಿಕ್ಕೆ ಖಾವಂದರಿಗೇನು? ೨೫ ಪೆಟ್ಟಿಗೆ ಒಡಂಬಡ ಬೇಕು ಎಂತ ಹೇಳಿಕೊಳ್ಳಲು, ಜಮೀನುದಾರನು—ನಿನಗೆ ಬೇಕಾದರೆ ೧೫ ಕೊಡುತ್ತೇನೆ, ಸಾಕಾದರೆ ೫ ಆದರೂ ಕೊಡುತ್ತೇನೆ ಎಂದು ಹೇಳಿದನು. ಕೋಮಟಿಗನು—ಈ ಮಾತು ನಿಜವೋ? ಬರೇ ಚೋದ್ಯವೋ? ನಿಮ್ಮ ಮಾತು ನಿಜವಾದರೆ, ನಾನು ಒಪ್ಪಿಕೊಳ್ಳುತ್ತೇನೆಂಥೇಳಿದ್ದಕ್ಕೆ, ಜಮೀನುದಾರನು—ನನ್ನ ಮಾತು ನಿಜವೇ; ನಿನಗೆ ನಂಬಲಿಕ್ಕಾಗದಿದ್ದರೆ ದಸ್ತೈವಜು ಬರ ಕೊಡುತ್ತೇನೆಂಥೇಳಲು, ಕೋಮಟಿಗನು—ಖಾವಂದರ ಮಾತನ್ನು ನಾನು ನಂಬದಿದ್ದೇನೋ? ದಸ್ತೈವಜನ್ನು ಬರಿಸಲಿಕ್ಕಾಗಿ ನಾನು ಹೋಗಿ ಶಾನಭೋಗನನ್ನು ಕರಕೊಂಡು ಬರುತ್ತೇನೆ ಎಂಥೇಳಿದನು. ಜಮೀನುದಾರ—ಒಳ್ಳೇದು, ಹೋಗಿ ಕರ

ಕೊಂಡು ಬಾ! ಎಂತ ಒಪ್ಪಿಕೊಂಡು ಹೇಳಿದನು. ಅವನು ಹೋಗಿ, ಊರುಶಾನ ಭೋಗನನ್ನು ಕರಕೊಂಡು ಬಂದ ಮೇಲೆ—ಕೋಮಟಿಗನು ಜವಿಾನುದಾರನ ಕೈಯಿಂದ ೫ ಪೆಟ್ಟು ತಿಂದ ಕೂಡಲೇ ಜವಿಾನುದಾರನ ಕುದುರೆ ಕೋಮಟಿಗನಿಗೆ ಸ್ವಂತವಾಗಿ ಬರ ತಕ್ಕದ್ದು ಎಂಬ ಅಭಿಪ್ರಾಯವುಳ್ಳ ದಸ್ತೈವಜು ಬರದು ಉಭಯತರ ಹಸ್ತಬರಹದಿಂದ ರುಜು ಹಾಕಲಾಯಿತು. ಈ ದಸ್ತೈವಜು ಕೋಮಟಿಗನ ಕೈಯಲ್ಲಿ ಶಿಕ್ಕಿದ ಕೂಡಲೇ ಅವನು ಜವಿಾನುದಾರನಿಗೆ—ಹಾಗಾದರೆ ತಡೆಯದೆ ನನಗೆ ೫ ಪೆಟ್ಟು ತಿನ್ನಿಸಿಕೊಟ್ಟು, ಕುದುರೆಯನ್ನು ನನಗೆ ಒಪ್ಪಿಸಿ ಬಿಡಿರಿ ಎಂಥೇಳಿ, ಮುಸಾಫರಖಾನೆಯ ಜಗಲೀ ಮೇಲೆ ಪೆಟ್ಟು ತಿನ್ನಲಿಕ್ಕಾಗಿ ಬೋರಲಾಗಿ ಮಲಗಿ ಕೊಂಡಾಗ, ಆ ಜವಿಾನುದಾರನು ಚಬುಕು ಎಂಬ ಹಾಗಿದ್ದ ಬೆತ್ತವನ್ನು ಹಿಡಿದು, ಶಳದು, ಕೋಮಟಿಗನಿಗೆ ಒಂದು ಒಳ್ಳೇ ಬಿರುಸಾದ ಪೆಟ್ಟನ್ನು ಕುಂಡೆಗಿಂಡೇ ಮೇಲೆ ಹೊಡದು ಬಿಟ್ಟನು; ಒಂದು ಪೆಟ್ಟನ್ನು ತಿನ್ನಿಸಿದ ಬಳಿಕ ಬೆತ್ತವನ್ನು ಬಿಸಾಡಿ ಕೂತುಕೊಂಡನು. ಆದರೆ ಕೋಮಟಿಗನು ಪೆಟ್ಟು ಒಂದರ ಮೇಲೊಂದು ತಡವಿಲ್ಲದೆ ಬಿದ್ದರೆ, ಅಷ್ಟು ನೋವಾಗದೆ, ಮಾರಾಟ ಬೇಗನೆ ತೀರಿ, ಕುದುರೆ ಶಿಕ್ಕುವದು ಎಂತ—ಬಾಕಿ ನಾಲ್ಕು ಪೆಟ್ಟನ್ನು ಸಹ ತಡ ಮಾಡದೆ ಕೊಟ್ಟರಾಯಿತು, ಕೊಡಿರಿ ಎಂತ ಬೇಡಿ ಕೊಳ್ಳಲು, ಜವಿಾನುದಾರ ಎರಡನೇ ಪೆಟ್ಟನ್ನೂ, ಮತ್ತೂ ತಡದ ಮೇಲೆ ಮೂರನೇದನ್ನೂ, ಕಟ್ಟಕಡೆಗೆ ನಾಲ್ಕನೇದನ್ನೂ, ಆದರೆ ಒಂದಕ್ಕಿಂತ ಒಂದು ಬಿರುಸಾಗಿ ಕೊಟ್ಟು ಬಿಟ್ಟನು. ನಾಲ್ಕು ಪೆಟ್ಟು ಕೋಮಟಿಗ ತಿಂದ ಮೇಲೆ ಐದನೇದನ್ನು ಸಹ ದಯ ಮಾಡ ಬೇಕೆಂತ ಎಷ್ಟೋ ಬೇಡಿಕೊಂಡರೂ ಜವಿಾನುದಾರ—೫ ಪೆಟ್ಟು ತಿಂದ ಮೇಲೆ ಕುದುರೆಯನ್ನು ಹೊಡಕೊಂಡು ಹೋಗು; ಆದರೆ ೫ನೇ ಪೆಟ್ಟನ್ನು ನಾಲ್ಕನೇ ಯುಗವಾದ ಈ ಕಲಿಯುಗದಲ್ಲಿ ಕೊಡಲಿಕ್ಕೆ ಕೂಡದು, ನಾನು ಈಗ ಕೊಡೆನು ಎಂತ ಖಂಡಿತವಾಗಿ ಹೇಳಲು, ಕೋಮಟಿಗನು ಶಿಟ್ಟಿನಿಂದಲೂ ದೈನ್ಯಭಾವವಾಗಿಯೂ, ೫ನೇದನ್ನು ಸಹಾ ಕೊಟ್ಟು, ಕುದುರೆಯನ್ನು ನನ್ನ ವಶಕ್ಕೆ ಕೊಟ್ಟು ಬಿಡಿರಿ ಎಂತ ಎಷ್ಟೋ ತರವಾಗಿ ಬೇಡಿಕೊಂಡರೂ, ಜವಿಾನುದಾರನು ಕೇಳದೆ ಸುಮ್ಮನೆ ಕೂತುಕೊಂಡನು. ಅದನ್ನು ಕೋಮಟಿಗನು ನೋಡಿ, ಶಾನಭೋಗನನ್ನು ಕಾಲ್ಬಿದ್ದು, ಜವಿಾನುದಾರ ತನಗೆ ಕರಾರಿನ ಪ್ರಕಾರ ೫ ಪೆಟ್ಟು ತಿನ್ನಿಸಿ ಕುದುರೆಯನ್ನು ಕೊಡುವ ಹಾಗೆ ಸಹಾಯ ಮಾಡ ಬೇಕೆಂದು ಬೇಡಿಕೊಂಡಾಗ, ಶಾನಭೋಗನು—ಕೋಮಟಿಗನೇ! ನಿನಗೆ ೫ ಪೆಟ್ಟು ಕೊಡುವದು ರಾಯರ ಚಿತ್ತ. ನಿನಗೆ ೫ ಪೆಟ್ಟು ತಿನ್ನಿಸಿದ ಮೇಲೆ ಕುದುರೆಯನ್ನು ಅಭ್ಯಂತರವಿಲ್ಲದೆ ಕೊಟ್ಟು ಬಿಡ ಬೇಕು. ಆದರೆ ಅವರು ೫ ಪೆಟ್ಟು ಹ್ಯಾಗೂ ನಿನಗೆ ಕೊಡುವ ಹಾಗೆ ಅವರಿಗೇನೂ ಮಾಡ ಕೂಡದು, ಯಾಕಂದರೆ ೫ ಪೆಟ್ಟು ಹ್ಯಾಗೂ ಕೊಡ ಬೇಕೆಂಬ ಮಾತು ಕರಾರಿನಲ್ಲಿ ಇಲ್ಲ ಎಂತ ನಕ್ಕು ಹೇಳಿದನು. ಆಗ ಕೋಮಟಿಗನು ನಿರ್ವಾಹವಿಲ್ಲದೆ, ಉಪಾಯ ಕಾಣದೆ, ಸುಮ್ಮನೆ ನಾಲ್ಕು ಪೆಟ್ಟು ತಿಂದು, ಎಲ್ಲವರ ಹಾಸ್ಯಕ್ಕೆ ಗುರಿಯಾಗಿ, ನಾಚಿ ಕೊಂಡು ಹೋಗ ಬೇಕಾಯಿತು.

ಜಮೀನುದಾರನು ಕೋಮಟಿಗನಿಗೆ ನಡಿಸಿದ್ದು ನ್ಯಾಯವೂ ಸ್ತುತ್ಯವೂ ಆಯಿತೆಂತ ತೋರಿಸಿ, ಅವನ ಯುಕ್ತಿಯನ್ನೂ ಠಕ್ಕನ್ನೂ ಪ್ರಶಂಸೆ ಗೈಯ ಬೇಕೆಂತ ಈ ಸಂಗತಿಯನ್ನು ಪಂಚಾಂಗದಲ್ಲಿ ಶೇರಿಸಿದ್ದಲ್ಲ. ಜಮೀನುದಾರನು ಮಾಡಿದ್ದು ಕೇವಲ ನಿಂದ್ಯವಾದ ಅನ್ಯಾಯವೇ. ಬರೇ ಲಾಭಕ್ಕಾಗಿ, ಬರೇ ಲೋಭಬುದ್ಧಿಯಿಂದ ಏನಾದರೂ ಪೆಟ್ಟಾಗಲಿ, ಮಾನಭಂಗವಾಗಲಿ ತಾಳಲಿಕ್ಕೆ ನಾಚಿಕೊಳ್ಳದವನು ಲಾಭ ಹೊಂದದೆ, ಪೆಟ್ಟನ್ನು ತಿಂದು ಅಪಮಾನಕ್ಕೆ ಕೇವಲ ಪಾತ್ರನೇ ಸೈ ಎಂಬದನ್ನು ತೋರಿಸುವದಕ್ಕಾಗಿ ಈ ಸಂಗತಿಯನ್ನು ಪಂಚಾಂಗದಲ್ಲಿ ಶೇರಿಸಿದ್ದೇವೆ. ಬರೀ ದ್ರವ್ಯಲಾಭಕ್ಕಾಗಿ ತನ್ನನ್ನು ಹೀನೈಸಿ ಕೊಂಡು ಏನಾದರೂ ತಾಳಿಕೊಂಬುವದು ಕೇವಲ ನೀಚರ, ಅಧಮಾಧಮರ ಲಕ್ಷಣವಾಗಿರುವದಲ್ಲದೆ, ಯೋಗ್ಯ ಪುರುಷರ ಲಕ್ಷಣವಲ್ಲವೇ ಅಲ್ಲಾ. ಕಳ್ಳಸಾಕ್ಷಿ ಮೊದಲಾದ್ದಕ್ಕೆ ದುಡ್ಡಿನ ಆಶೆಯಿಂದ ಒಪ್ಪಿ ಕೊಳ್ಳುವವರ ವಿಚಾರವು ಹಾಗೆಯೇ.



ದಂತವೈದ್ಯನು.

ಬಹಳ ದಿವಸ ಒಬ್ಬರಿಗೊಬ್ಬರು ಹೊಂದಿ ಕೊಂಡು "ಊಟಕ್ಕೆ ಮುಂಚು, ದಂಡಿಗೆ ಹಿಂಚು" ಎಂಬಂತೆ ಉಂಡಾಡಿಭಂಟರಾಗಿಯೂ ಹೊತ್ತುಕಳ್ಳರಾಗಿಯೂ ಊರೂರು ಗ್ರಾಮಗ್ರಾಮ ಸಂಚಾರ ಮಾಡಿ, ಬೇಡುತ್ತಾ ಠಕ್ಕುತನ ಮಾಡುತ್ತಾ ಹೊಟ್ಟೆ ಹೊರಕೊಂಡ ಜನರಿಬ್ಬರು ಒಂದಾನೊಂದು ಸಮಯದಲ್ಲಿ ಉಪಜೀವನಕ್ಕೆ ಇನ್ನು ಉಪಾಯ ಕಾಣದೆ, ಏನು ಮಾಡುವ? ಎಂತ ಚಿಂತಿಸಿ, ಯೋಚನೆ ಮಾಡಿದ ಕಡೆಗೆ ಒಬ್ಬನಿಗೆ ಒಂದು ಯುಕ್ತಿ ಕಂಡಿತು. ಅದನ್ನು ತನ್ನ ಜತೆಗಾರನಿಗೆ ಹೇಳಿ ತಿಳಿಸಿದಾಗ, ಅವನು ಆಗುವದು ಎಂದು ಒಪ್ಪಿ ಕೊಳ್ಳಲು, ಅದನ್ನು ನೆರವೇರಿಸಲೆಸಗಿದರು. ಹ್ಯಾ

ಗಂದರೆ: ಇಬ್ಬರು ನಾಲ್ಕೈದು ಮನೆಗಳಿಗೆ ಹೋಗಿ, ರೊಟ್ಟಿ ಬೇಡಿ ಕೊಂಡು, ಅದರ ತೊಗಟನ್ನು ಮಾತ್ರ ತಿಂದು, ಒಳಗಣ ಮೆತ್ತಗಾದ ರೊಟ್ಟಿಯನ್ನು ನಾದಿ, ಅದರಿಂದ ಒಂದೊಂದು ಸಾರಿ ಒಂದು ಕಡ್ಲೇ ಬೇಳೆಯಷ್ಟು ಚಿಮಟಿ ತೆಗದು, ಕೈಯಲ್ಲಿ ಹಿಸಿಕಿ, ಒಂದೊಂದು ಗುಳಿಗೆ, ಈ ಪ್ರಕಾರ ಸುಮಾರು ಏಳೆಂಭೈನೂರು ಗುಳಿಗೆಗಳನ್ನು ಮಾಡಿ, ಅವುಗಳ ಮೇಲೆ ಹುಳ ಬಿದ್ದ ಕಟ್ಟಿಗೆಗಳ ಪುಡಿಯನ್ನು ಚಲ್ಲಿ, ಕೆಲವು ದುಡ್ಡುಕೊಟ್ಟು ಕೆಂಪು ಕಾಗದಗಳನ್ನು ಕೊಂಡು ಕೊಂಡು, ಪಟ್ಟಿಗಳಾಗಿ ಕತ್ತರಿಸಿ, ಆ ಪಟ್ಟಿಗಳಿಂದ ಚಿಕ್ಕ ಚಿಕ್ಕ ಅಂಡೆಗಳನ್ನು (ಡಬ್ಬಿಗಳನ್ನು) ಮಾಡಿ, ಒಂದೊಂದರಲ್ಲಿ ಆರಾರು ಎಂಟೆಂಟು ಗುಳಿಗೆಗಳನ್ನು ಹಾಕಿ ಸುತ್ತಿದರು. ಆ ಮೇಲೆ ಒಬ್ಬನು ಸಂತೆ ನೆರೆದಿದ್ದ ಒಂದೂರಿಗೆ ಹೋಗಿ, ಬಹಳ ಜನ ಕೂಡಿ ಕೊಂಡಿದ್ದ ಅಂಗಡಿಯಲ್ಲಿ ಒಂದಿಷ್ಟು ಫಲಹಾರ ತೆಗೆದು ಕೊಂಡು, ಆ ಅಂಗಡಿಯ ಹತ್ತರವೇ ಅದನ್ನು ತಿನ್ನ ಬೇಕೆಂಬುವ ಹಾಗೆ ಕೂತು ಕೊಂಡು, ಆದರೆ ತಿನ್ನದೆ, ಕಠಿಣ ಹಲ್ಲು ನೋವು ಇದ್ದವನಂತೆ ಕೆನ್ನೆಗೆ ಮುಷ್ಟಿ ಊರಿಸಿ ಕೊಂಡು, ಗಂಟುಮೋರೆ ತಗ್ಗಿಸಿ, ನರಳುತ್ತಾ ನಿಟ್ಟುಸುರುಗಳನ್ನು ಬಿಡುತ್ತಾ, ಮೈಯನ್ನು ಹಿಂದಕ್ಕೂ ಮುಂದಕ್ಕೂ ಅಲ್ಲಾಡಿಸುತ್ತಾ ಇದ್ದನು. ಸುತ್ತಮುತ್ತಲು ನಿಂತು ಅವನನ್ನು ಕಂಡ ಜನರಲ್ಲಿ ಕೆಲವರಾದರೂ—ಏನ್ರಪ್ಪಾ! ಹಲ್ಲುನೋವುಂಟೋ? ಅಕಟಾ! ಅದನ್ನು ನಾನೂ ಬಲ್ಲೆ, ಅದರಷ್ಟು ವೇದನೆ ಕೊಡುವ ರೋಗ ಒಂದೂ ಇಲ್ಲಾ ಎಂಬದಾಗಿ ಮಾತಾಡಿ, ಅವನನ್ನು ನೋಡಿ ಕನಿಕರ ಪಟ್ಟರು. ಅವನು ಅಲ್ಲಿ ಬಂದು ಕೂತು ಕೊಂಡು ಸುಮಾರು ಒಂದು ಕಾಲು ತಾಸಾದ ಮೇಲೆ ಅವನ ಸಂಗಡಿಗನೂ ಬಂದು, ಅದೇ ಅಂಗಡೀ ಹತ್ತರ ತಡದು, ಇಲ್ಲ್ಯಲ್ಲಿದ್ದ ಜನರುಗಳನ್ನೂ ಸಾಮಗ್ರಿಗಳನ್ನೂ ನೋಡುವವನಾಗಿ ನಿಂತಿರಲು, ಅವನ ಕಿವಿಗೆ ಆ ಹಲ್ಲು ನೋವಿನವನ ನರಳುವ ಶಬ್ದವು ಬಿದ್ದದರಿಂದ ಅವನವನ ಕಡೆಗೆ ದೃಷ್ಟಿ ತಿರಿಗಿಸಿ ನೋಡಿ, ಅವನ ಹತ್ತರ ಹೋಗಿ, ಗುರ್ತು ಪರಿಚಿತಿ ಏನೂ ಇಲ್ಲದವನಂತೆ ಅವನ ಸುಖ ದುಃಖ ವಿಚಾರಿಸಿ ಕೇಳಿದನು. ಎಲ್ಲಾ ಕೇಳಿ ತಿಳುಕೊಂಡ ಬಳಿಕ ಅವನು—ನನ್ನ ಕೈಯಲ್ಲಿ ಯಾವ ಯಾವ ಹಲ್ಲುನೋವನ್ನಾದರೂ ಪರಿಹರಿಸುವ ಮಾತ್ರೆಗಳವೆ. ಗುರ್ತೇನೂ ಇಲ್ಲದ ನನ್ನ ಮಾತಿಗೆ ನೀನು ಭರವಸ ಹಿಡಿದು ಒಂದೆರಡನ್ನು ತೆಗೆದು ಕೊಂಡು ತಿನ್ನಲಿಕ್ಕೆ ಧೈರ್ಯ ಮಾಡಿದರೆ, ನಿನಗೆ ಪೂರ್ಣ ಗುಣವಾಗುವದು ಎಂದು ಹೇಳಿ, ಒಂದು ಅಂಡೆಯನ್ನು ತನ್ನ ಹಸಿಬೇ ಚೀಲದಿಂದ ತೆಗೆದು ತೋರಿಸಲು, ಆ ಹಲ್ಲುನೋವಿದ್ದವನು—ಅಯ್ಯಾ! ನೀವು ದಯ ಮಾಡಿ ನನಗೊಂದು ಕೊಟ್ಟು, ನಾನು ಇನ್ನು ತಡೆಯಲಾರದ ಹಲ್ಲು ನೋವನ್ನು ಪರಿಹರಿಸಿ ಕೊಟ್ಟರೆ, ನಾನು ನಿಮ್ಮ ಉಪಕಾರ ಎಂದೂ ಮರತು ಹೋಗದೆ, ತ್ರಿಲೋಕದಲ್ಲಿ ನಿಮ್ಮ ಹೆಸರು ಹೇಳಿ ಹರಸುವೆನು ಎಂತ ಹೇಳಲು, ಅವನವನಿಗೆ ಒಂದು ಮಾತ್ರೆ ಕೊಟ್ಟು—ಅದನ್ನು ನೋಯಿಸುವ ಹಲ್ಲಿನ ಮೇಲೆ ಹಾಕಿ, ಚನ್ನಾಗಿ ಕಚ್ಚಿಕೋ! ಎಂದು ಹೇಳಿದನು. ಅಷ್ಟರೊಳಗೆ ಇಲ್ಲ್ಯಲ್ಲಿ ನಿಂತಿದ್ದ ಎಲ್ಲಾ ಜನರುಗಳು ಅವರಿಬ್ಬರೊಳಗೆ ನಡೆದ ಸಂಭಾಷಣೆ ಕೇಳಿ, ಆಗುವಂಥಾದ್ದನ್ನು ನೋಡ ಬೇಕೆಂತಾ

ಸಮೀಪಿಸಿ, ಇಬ್ಬರ ಸುತ್ತಮುತ್ತಲು ಒಟ್ಟಾಗಿ ಕೂಡಿ ಕೊಂಡು ನಿಲ್ಲಲು, ಆ ಮನುಷ್ಯನು ನೋವಿದ್ದ ಹಲ್ಲಿನ ಮೇಲೆ ಆ ಗುಳಿಗೆಯನ್ನು ಹಾಕಿಟ್ಟು, ಆ ವೈದ್ಯನು ಹೇಳಿದಂತೆ ಕಚ್ಚಿಕೊಂಡನು. ಆದರೆ ಕಚ್ಚಿ ಕೊಳ್ಳುತ್ತಲೇ ಒಂದು ಕಠೋರ ಬೊಬ್ಬೆ ಇಟ್ಟನು. ಆ ಬೊಬ್ಬೆಗೆ ಮತ್ತಷ್ಟು ಜನರು ಓಡಿ ಬಂದು ಕೂಡಿದರು. ಆದರೆ ಆ ಹಲ್ಲುವೈದ್ಯನು ಆ ಬೊಬ್ಬೆ ಕೇಳಿ—ಚನ್ನಾಯಿತು, ಠೀಕ್, ಠೀಕ್! ನೋವಿನ ನರಕ್ಕೆ ತಾಗಿತು. ಇನ್ನೊಂದು ಮಾತ್ರೆ ತೆಗೆದು, ಕಚ್ಚಿ ತಿಂದರಾಯಿತು ಎಂಥೇಳಿ, ಇನ್ನೊಂದು ಗುಳಿಗೆ ಕೊಟ್ಟನು. ಇದನ್ನು ಅವನು ತೆಗೆದು ಕೊಂಡು ಕಚ್ಚುತ್ತಲೇ, ಎಲ್ಲಾ ನೋವು ಹಾರಿ ಹೋಯಿತು ಎಂಥೇಳಿ, ಎದ್ದು, ಸಂತೋಷದಿಂದ ಕೈ ಚಪ್ಪಳ ಬಡಿದು, ಒಂದೆರಡು ಸಾರಿ ಹಾರಿ, ಕುಣಿದಾಡಿ, ಆ ವೈದ್ಯನ ಮುಂದೆ ಅಡ್ಡ ಬಿದ್ದು—ಅಯ್ಯಾ! ನೀವು ನನಗೆ ಪ್ರಾಣದಾನ ಮಾಡಿದ ಹಾಗಾಯಿತು. ನಿಮ್ಮುಪಕಾರಕ್ಕೆ ನಾನು ಕೊಡ ತಕ್ಕದ್ದೇನು? ಎಂತ ಹೇಳಿ ಕೊಂಡಾಡಲು, ನೆರೆದಿದ್ದ ಜನರೆಲ್ಲರು ಆ ವೈದ್ಯನ ಮೇಲೆ ಬೀಳುತ್ತಾರೋ ಏನೋ ಎಂಬ ಹಾಗೆ ಒಟ್ಟಿಕೊಂಡು, ಒಬ್ಬೊಬ್ಬನು—ನನಗೂ ಕೊಡಿ! ನನಗೂ ಕೊಡಿ! ಎಂತಾ ಕೂಗಿ, ಬೇಡಿ ಕೈಯೊಡ್ಡಿದರು. ಆ ವೈದ್ಯನು ತನ್ನ ಕೈಯಲ್ಲಿದ್ದಷ್ಟು ಅಂಡೆಗಳೆಲ್ಲವನ್ನು, ಒಬ್ಬನಿಗೆರಡು, ಒಬ್ಬನಿಗೊಂದು, ಕೆಲವರಿಗೆ ಮೂರು ನಾಲ್ಕು ಸಹಾ, ಒಂದೊಂದನ್ನು ಆರಾಣೇ ಪ್ರಕಾರ ತುಸ ಹೊತ್ತಿನಲ್ಲಿ ಮಾರಿ ಬಿಟ್ಟನು. ಈ ಉಪಕಾರವು ಜನರಿಗೆ ಅವನಿಂದಾದ ಕೂಡಲೇ ಅವನು ನಡದು ಬಿಟ್ಟನು. ಸ್ವಲ್ಪ ಹೊತ್ತಿನ ಮೇಲೆ ತನ್ನ ಹಲ್ಲು ನೋವು ಪರಿಹರಿಸಿ ಕೊಂಡ ಅವನ ಜತೆಗಾರನು ಸಹಾ ತನ್ನ ಫಲಾರ ತೀರಿಸಿ ಕೊಂಡು, ಅವನ ಹಿಂದೆ ಹೊರಟು ಹೋಗಿ, ಅವನು ಮುಂದಾಗಿ ಶೇರಿದ ನೆರೇ ಊರಿನಲ್ಲಿ ಅವನನ್ನು ಕೂಡಿ ಕೊಂಡು, ಆ ಜನರ ಬೋಳೆತನಕ್ಕೆ ನಕ್ಕು, ಅವರು ನಂಬಿ ಕೊಟ್ಟ ಹಣಗಳಿಂದ ಕೆಲವು ದಿನ ತ್ಯಾಗಭೋಗರಾಯರಾಗಿ ಕಾಲಕ್ಷೇಪ ಮಾಡಿದರು.

ಆದರೆ ಹಲ್ಲುನೋವಿಗೆ ಒಳ್ಳೇ ಔಷಧವೆಂತ ಆ ರೊಟ್ಟಿಯ ಗುಳಿಗೆಗಳನ್ನು ಹಣ ಕೊಟ್ಟು ತೆಗೆದು ಕೊಂಡ ಜನರು ವ್ಯರ್ಥ ಖರ್ಚು ಮಾಡಿ ಲುಕ್ಸಾನಿಗೆ ಗುರಿಯಾದ್ದಲ್ಲದೆ ಇನ್ನೊಂದು ಕಷ್ಟಕ್ಕೂ ಗುರಿಯಾಗಿ ಹೋದರು. ಹ್ಯಾಗಂದರೆ: ದಿನ ಹೋಗುತ್ತಾ ಆ ಗುಳಿಗೆಗಳು ಘಟ್ಟಿಯಾಗುತ್ತಾ ಬಂದವು. ಇನ್ನು ಮುಂದೆ ಹಲ್ಲುನೋವಾಗಿ ಕೆಲಸಕ್ಕೆ ಬಂದೀತು ಎಂತ ಅಂದು, ಅವುಗಳನ್ನು ಕೊಂಡು ಕೊಂಡವರಲ್ಲಿ ಅನಂತರ ಯಾವಾಗಾದರೂ ಒಬ್ಬನಿಗೆ ಅಥವಾ ಒಬ್ಬಳಿಗೆ ಹಲ್ಲುನೋವು ಹಿಡಿದ ಸಮಯದಲ್ಲಿ ಅಂಥಾ ಘಟ್ಟಿಯಾದ ಮಾತ್ರೆಯನ್ನು ನೋಯಿಸಿದ ಹಲ್ಲಿನ ಮೇಲೆ ಹಾಕಿ, ಚನ್ನಾಗಿ ಕಚ್ಚಿ ಕೊಳ್ಳಲು, ಹಲ್ಲುನೋವು ವಿಪರೀತವಾಗಲಾಗಿ, ಅದು ಸಮವೇ, ಆ ಮನುಷ್ಯನಿಗೆ ಹಾಗೆಯೇ ಆಯಿತು ಎಂಥೇಳಿ, ಇನ್ನೊಂದು ಗುಳಿಗೆ ಆ ಹಲ್ಲಿನ ಮೇಲೆ ಇಟ್ಟು ಘಟ್ಟ್ಯಾಗಿ ಕಚ್ಚಿ ಕೊಳ್ಳಲು, ಹಲ್ಲು ಬೇನೆಯನ್ನು ನಿವಾರಿಸದೆ, ಹೆಚ್ಚಿಸೇ ಹೆಚ್ಚಿಸಿ ಕೊಂಡು, ತಾವು ಠಕ್ಕರನ್ನು ನಂಬಿ ಮೋಸ ಹೋದವರು ಎಂತ ಪಶ್ಚಾತ್ತಾಪ ಪಡ ಬೇಕಾಯಿತಷ್ಟೇ. "ಅನಂತೈಯ್ಯನ ಮಾತ್ರೆ ವೈಕುಂಠಯಾತ್ರೆ."

"ಎರಡು ದಾಸರಿಗೆ ನಂಬಿ ಕುರುಡದಾಸ ಕೆಟ್ಟ" ಎಂಬುವಂತೆ ಲೆಖ್ಖವಿಲ್ಲದಷ್ಟು ಜನರಿಗೆ ಆಯಿತು, ಆಗುತ್ತಿರುತ್ತದೆ. ಎಷ್ಟೋ ಜನರು ಠಕ್ಕರನ್ನು ನಂಬಿ ಮೋಸ ಹೋದ್ದನ್ನು ನೋಡಿಯೂ ಕೇಳಿಯೂ ಇದ್ದಾಗ್ಯೂ ಇನ್ನು ಅನೇಕರು ಠಕ್ಕು ಮಾತನ್ನೂ ಠಕ್ಕು ವಿದ್ಯೆಯನ್ನೂ ನಂಬಿ ಮೋಸ ಹೋಗುತ್ತಾರೆ. ಸತ್ಯವನ್ನೂ ನಿಜವಾದ್ದನ್ನೂ ಬೇಗ ಯಾರೂ ನಂಬದಿದ್ದರೂ, ಸುಳ್ಳು ವಿದ್ಯೆಗಳನ್ನು ಬೇಗ ನಂಬುತ್ತಾರೆ. ಈ ದೇಶದಲ್ಲಿ ಯಾರಾದರೂ ಬಂದು, ತಾನು ವೈದ್ಯಗಾರ, ಒಳ್ಳೇ ಔಷಧವನ್ನು ಕೊಡ ಬಲ್ಲಾದವ ಎಂಥೇಳಿ, ಏನೊಂದು ನೀರನ್ನಾಗಲಿ ಬೇರನ್ನಾಗಲಿ, ಮಣ್ಣು ಮಸಣವನ್ನಾಗಲಿ ಮಾಡಿ ಕೊಟ್ಟರೆ, ಜನರು ವಿಚಾರಬುದ್ಧಿಯಿಲ್ಲದೆ ಮರುಳು ನಂಬಿಕೆಯಿಂದ ಹಣ ಕೊಟ್ಟು, ಬೇಕಾದರೆ ಸಾಲ ಸಹಾ ಮಾಡಿ, ತೆಗೆದು ಕೊಳ್ಳುತ್ತಾರೆ. ಅಥವಾ ಒಬ್ಬನು ಬಂದು, ತಾನು ಭಂಗಾರ ಮಾಡುವ ವಿದ್ಯೆ ಬಲ್ಲವನೆಂಥೇಳಿದರೆ, ಜನರು ಆಶಾಮಾರಿತನದಿಂದ ನಂಬಿ, ಕಣ್ಣು ಕಟ್ಟಿಸಿ ಕೊಂಡು, ಅವನು ಕೇಳಿ ಕೊಳ್ಳುವಂಥಾದ್ದನ್ನು ಅವನ ಕೈಯಲ್ಲಿ ತಂದು ಕೊಟ್ಟು ಹಾಕುತ್ತಾರೆ. ಭಂಗಾರ ಮಾಡುವ ವಿದ್ಯೆಯಾಗಲಿ ಯಾವದೊಂದು ರೋಗಕ್ಕೆ ವಾಶಿ ಮಾಡುವ ಒಳ್ಳೇ ವೈದ್ಯವಾಗಲಿ ನಿಜವಾಗಿ ಒಬ್ಬನಿಗೆ ಇರುವದಾದರೆ, ಗಂಟು ಕಟ್ಟಿ ಹೊತ್ತು ಕೊಳ್ಳುವ ತಿರಿಕನಾಗಿ ಊರೂರು, ಗ್ರಾಮ ಗ್ರಾಮ ಸಂಚರಿಸಿ, ನೀಚ ನಿಂದ್ಯ ಕಾಲಕ್ಷೇಪ ಮಾಡುತ್ತಿದ್ದಾನೋ?

೧೮೭೭ನೇ ವರ್ಷದಲ್ಲಿ ಬರುವ ಗ್ರಹಣಗಳು.

ಈ ವರ್ಷದಲ್ಲಿ ಎರಡು ಸೂರ್ಯಗ್ರಹಣಗಳೂ ಎರಡು ಚಂದ್ರಗ್ರಹಣಗಳೂ ಸಂಭವಿಸುತ್ತವೆ. ಇವುಗಳಲ್ಲಿ ಒಂದು ಸಣ್ಣ ಚಂದ್ರಗ್ರಹಣ ಮಾತ್ರವೆ ಭರತಖಂಡದಲ್ಲಿ ಪ್ರತ್ಯಕ್ಷ; ಬೇರೆ ಮೂರು ಪಾತಾಳಗ್ರಹಣಗಳು ಎಂಬದಾಗಿ ಭಾವಿಸ ಬೇಕು.

I. ಮಾರ್ಚಿ ೧೦ರಲ್ಲು ಚಂದ್ರಕ್ಕೆ ಅರ್ಧ ಗ್ರಹಣ.

ಭೂಮಿಯ	ಅರ್ಧ ಛಾಯೆಯಲ್ಲಿ	ಚಂದ್ರಪ್ರವೇಶ,	ಬೆಳಿಗ್ಯೆ	೮ ಘಂಟೆ	೫೭	ಮಿನಿಟಿಗೆ.
"	ನಿಜ "	"	"	೧೦ "	೨೦	"
"	" "	ಗ್ರಹಣಮಧ್ಯ,	"	೧೧ "	೨೦	"
"	" ಛಾಯೆಯಿಂದ	ಚಂದ್ರವಿಯೋಗ,	ಮಧ್ಯಾನ್ಹ	೧೨ "	೨೦	"
"	ಅರ್ಧ "	"	"	೧ "	೪೫	"

ಈ ಗ್ರಹಣಪ್ರಮಾಣವು ೩೨ ಅಂಗುಲ.

ಈ ಕಾಲದಲ್ಲಿ ಪೂರ್ಣ ಚಂದ್ರವು ಭೂಛಾಯೆಯಲ್ಲಿ ಪ್ರವೇಶಿಸುವಷ್ಟರೊಳಗೆ ಅಸ್ತಮಾನವಾಗುವದಾದ್ದರಿಂದ, ಈ ಗ್ರಹಣವು ಭರತಖಂಡದಲ್ಲೆಲ್ಲಾ ಅದೃಶ್ಯ.

II. ಮಾರ್ಚಿ ೨೫ನೆ ೨೬ನೆಯಲ್ಲಿ ಸೂರ್ಯಕ್ಕೆ ಕಂಕಣಗ್ರಹಣ.

ಮಾರ್ಚಿ ತಿಂಗಳಲ್ಲಿ ಚಂದ್ರಕ್ಕೆ ಸಣ್ಣ ಗ್ರಹಣ ಮಾತ್ರವೇ ಸಂಭವಿಸುವದಾದ ಮೇಲೆ, ತರುವಾಯ ಬರುವ ಸೂರ್ಯಗ್ರಹಣವು ದೊಡ್ಡದಾಗ ಬೇಕು. ಇದು ಮುಖ್ಯವಾಗಿ ಮಹಾಸಾಗರದಲ್ಲಿಯೂ ಉತ್ತರ ಅಮೇರಿಕದಲ್ಲಿಯೂ ದೃಶ್ಯವಾಗಿ, ಭರತಖಂಡಕ್ಕೆ ಪಾತಾಳ ಗ್ರಹಣವಾಗುವದರಿಂದ, ನಮಗೆ ಅದರ ಕಾಲವನ್ನೂ ಭೂಮಿತಿಯಲ್ಲಿ ಅಕ್ಷರೇಖಾಂಶಗಳನ್ನೂ ತಕ್ಕಷ್ಟು ತಿಳಿದರೆ ಸಾಕೆಂದನ್ನ ಬಹುದು.

ಮಾರ್ಚಿ ೨೫-೨೬ರಲ್ಲಿ	ಘಂಟೆ	ಮಿನಿಟು				
ಗ್ರಹಣಾರಂಭ	ರಾತ್ರಿ ೧೦	೨೮	ರೇಖಾಪಶ್ಚಿಮ	೧೭೩° ೪೬′	ಅಕ್ಷದಕ್ಷಿಣ	೫° ೪೩′
ಕಂಕಣಗ್ರಹಣಾರಂಭ	„ ೧೨	೩೭	„ ಪೂರ್ವ	೧೮೮° ೫೯′	ಅಕ್ಷೋತ್ತರ	೮° ೪೬′
ಗ್ರಹಣದ ಮಧ್ಯ,	„ ೧	೪೧	„ ಪಶ್ಚಿಮ	೧೩೧° ೨೪′	„	೪೭° ೬′
ಗ್ರಹಣದ ಅಂತ್ಯ,	„ ೩	೩೯	„ „	೬೭° ೪೩′	„	೫೨° ೨೯′

ಈ ಕಾಲವನ್ನೂ, ಪರಿಸು ಪಟ್ಟಣದಿಂದ ಹಿಡಿದ ರೇಖಾಂಶಗಳನ್ನೂ ಅಕ್ಷಾಂಶಗಳನ್ನೂ ವಿಚಾರಿಸಿದರೆ, ಈ ಗ್ರಹಣವು ಭರತಖಂಡದಲ್ಲಿ ದೃಶ್ಯವಾಗ ಕೂಡದೆಂಬದನ್ನು ಗ್ರಹಿಸ ಬಹುದು. ಹ್ಯಾಗಂದರೆ ಈ ಗ್ರಹಣಕಾಲದಲ್ಲೆಲ್ಲಾ ಸೂರ್ಯವು ಭರತಖಂಡದಲ್ಲಿಯೂ ಚೀನದೇಶದಲ್ಲಿಯೂ ಚಕ್ರವಾಳದ ಕೆಳಗೆ ಮಾತ್ರವೆ ಇರುವದು.

III. ಸಪ್ತಂಬರ ೩ನೆ ೪ನೆಯಲ್ಲಿ ಚಂದ್ರಕ್ಕೆ ಅರ್ಧಗ್ರಹಣ.

ಭೂಮಿಯ ಅರ್ಧಛಾಯೆಯಲ್ಲಿ ಚಂದ್ರಪ್ರವೇಶ,	೩ರಲ್ಲು	ರಾತ್ರಿ	೧೧	ಘಂಟೆ	೪೬	ಮಿನಿಟಿಗೆ
„ ನಿಜ „ „	೪ರಲ್ಲು	„	೧	„	೧೪	„
ಗ್ರಹಣದ ಮಧ್ಯ „ „	„	„	೨	„	೨೧	„
ಭೂಮಿಯ ನಿಜಛಾಯೆಯಿಂದ ಚಂದ್ರವಿಯೋಗ	„	„	೩	„	೨೮	„
„ ಅರ್ಧ „ „	„	„	೪	„	೫೬	„

ಈ ಗ್ರಹಣಪ್ರಮಾಣವು ೪ ಅಂಗುಲ. ಅದು ಭರತಖಂಡದಲ್ಲೆಲ್ಲಾ ದೃಶ್ಯ.

IV. ಸಪ್ತಂಬರ ೧೮ರಲ್ಲು ಸೂರ್ಯಕ್ಕೆ ಪೂರ್ಣಗ್ರಹಣ.

ಈ ಗ್ರಹಣದ ಛಾಯೆ ಸಹಾ ಪ್ರಾಮುಖ್ಯವಾಗಿ ಮಹಾಸಾಗರದ ಮೇಲೆ ಬೀಳುತ್ತದೆ. ಔಸ್ತ್ರಾಲ್ಯದಲ್ಲಿಯೂ ದಕ್ಷಿಣ ಧ್ರುವ ಶೀಮೆಗಳಲ್ಲಿಯೂ ಮಾತ್ರವೆ ಈ ಗ್ರಹಣ ತಕ್ಕಷ್ಟು ಕಾಣುತ್ತದೆ. ಅದು ಪರಿಸು ಪಟ್ಟಣದಿಂದ ರೇಖಾಪೂರ್ವ ೧೫೭°ಲ್ಲಿಯೂ ಅಕ್ಷೋತ್ತರ ೯° ೫೧′ಲ್ಲಿಯೂ ಮಧ್ಯರಾತ್ರಿಯ ಮೇಲೆ ೧೧ ಮಿನಿಟಿಗೆ ಆರಂಭವಾಗಿ, ರೇಖಾಪೂರ್ವ ೧೦೧° ೫′ಲ್ಲಿಯೂ ಅಕ್ಷದಕ್ಷಿಣ ೪೮° ೭′ಲ್ಲಿಯೂ ಬೆಳಿಗ್ಯೆ ೫ ಘಂಟೆ ೨೫ ಮಿನಿಟಿಗೆ ತೀರುತ್ತದೆ. ಭರತಖಂಡದಲ್ಲಿ ಅದು ಅದೃಶ್ಯ.

ಈ ಕೆಳಗೆ ಪರಿಸು ಪಟ್ಟಣದ ರೇಖಾಗಣನಕ್ಕೆ ಅನುಸಾರವಾಗಿ ಭರತಖಂಡದ ಕೆಲವು ಸ್ಥಳಗಳ ಸ್ಥಾನಭೇದಗಳು ಹೇಳಿಯುವೆ. ಈ ರೇಖಾಸಂಖ್ಯೆಗಳಿಗೂ ಬೇರೆ ರೇಖಾಸಂಖ್ಯೆಗಳಿಗೂ ಇರುವ ಹೆಚ್ಚುಕಡಿಮೆ ತಿಳಿಯ ಮನಸ್ಸಿದ್ದರೆ, ಗ್ರೀನಿಚಿನ ರೇಖಾಸಂಖ್ಯೆಯಿಂದ ೨° ೨೦'ನ್ನು ಕಾಲಸಂಖ್ಯೆಯಿಂದ ೯ ಮಿನಿಟು ೨೧ ಸೆಕುಂದಗಳನ್ನು, ಅದೇ ಪ್ರಕಾರ ಫೆರ್ರೊ ರೇಖಾಸಂಖ್ಯೆಯಿಂದ ೨೦° ೩೦'ನ್ನೂ ಕಾಲಸಂಖ್ಯೆಯಿಂದ ೧ ಘಂಟೆ ೨೨ ಮಿನಿಟನ್ನೂ ಕಳೆಯ ಬೇಕು.

ಸ್ಥಳಗಳ ಹೆಸರು	ಅಕ್ಷೋತ್ತರ	ಪರಿಸು ಪಟ್ಟಣದಿಂದ ರೇಖಾಪೂರ್ವ ಅಂಶಗಳು	ಕಾಲಭೇದ		
೧. ಬೆಂಗಳೂರು	೧೨° ೫೭' ೩೪''	೭೫° ೧೩' ೨೫''	೫ ಘಂಟೆ	೦ ಮಿ.	೫೪ ಸೆ.
೨. ಕಾಶಿ	೨೫° ೧೮' ೩೩''	೮೦° ೩೫' ೨೮''	೫	೨೨	೨೨
೩. ಮುಂಬೈ (ಬೊಂಬೈ)	೧೮° ೫೬' ೭''	೭೦° ೨೮' ೫೮''	೪	೪೧	೫೬
೪. ಕಲ್ಕತ್ತೆ	೨೨° ೩೩' ೧೧''	೮೬° ೦' ೩''	೫	೪೪	೦
೫. ಕಲ್ಲಿಕೋಟೆ	೧೧° ೧೫' ೧೦''	೭೩° ೨೫' ೫೧''	೪	೫೩	೪೩
೬. ಕಣ್ಣನೂರು	೧೧° ೫೧' ೧೦''	೭೩° ೧' ೫೬''	೪	೫೨	೮
೭. ಕೊಚ್ಚಿ	೯° ೫೮' ೦''	೭೩° ೫೩' ೫೧''	೪	೫೫	೩೫
೮. ಕೊಯಮುತ್ತೂರು	೧೦° ೫೯' ೪೨''	೭೪° ೩೮' ೧೬''	೪	೫೮	೩೩
೯. ಗೋವೆ	೧೫° ೨೯' ೨೫''	೭೧° ೨೫' ೨೧''	೪	೪೫	೪೧
೧೦. ಕಲ್ಯಾಣಪುರ	೨೪° ೭' ೧೨''	೭೫° ೧೮' ೧೯''	೫	೧	೧೩
೧೧. ಕುಂದಾಪುರ	೧೩° ೩೮' ೧೦''	೭೨° ೧೯' ೫೯''	೪	೪೯	೨೦
೧೨. ಮದ್ರಾಸು	೧೩° ೪' ೯''	೭೭° ೫೪' ೧೦''	೫	೧೧	೩೭
೧೩. ಮಂಗಳೂರು	೧೨° ೫೨' ೦''	೭೨° ೨೯' ೫೧''	೪	೪೯	೫೯
೧೪. ಮುಲ್ಕಿ (ಸುರತ್ಕಲ್)	೧೩° ೧೨' ೦''	೭೨° ೧೯' ೫೧''	೪	೪೯	೧೯
೧೫. ಮೈಸೂರು	೧೨° ೧೮' ೨೧''	೭೪° ೧೮' ೧೧''	೪	೫೭	೧೩
೧೬. ತಲಚೇರಿ	೧೧° ೪೫' ೦''	೭೩° ೮' ೫೧''	೪	೫೨	೩೫
೧೭. ತಿರುವನಂತಪುರ	೮° ೩೦' ೩೫''	೭೪° ೩೬' ೩೬''	೪	೫೮	೨೬

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ

ಕ್ರಿಸ್ತಶಕ A. D.		ಹಿಂದು ಶಕಗಳು — ಚಾಂದ್ರಮಾನ — ಸಂವತ್ಸರಗಳು	ಚಾಂದ್ರಮಾನ — ಶಾಲಿವಾಹನ ಶಕ		ಸೌರಮಾನ — ಮಲಯಾಳ ಕೊಲ್ಲಂ		ಫಸಲಿ		ಮಹಮ್ಮದಿ ಹಿಜರಿ	
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಧಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311

ಕ್ರಿಸ್ತಶಕ A. D.		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಂ		ಫಸಲಿ		ಮಹಮ್ಮದಿ ಹಿಜರಿ	
1834	1894	ಜಯ	1756	1816	1009	1069	1243	1303	1250	1312
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಕೋಷ್ಟಕ.

೧. ಚಿನ್ನ ಬೆಳ್ಳಿಗಳ ತೂಕ.

ವೀಸ.

೪	೧ ಹಾಗ.			
೮	೨ „	೧ ಅಡ್ಡ.		
೧೬	೪ „	೨ „	೧ ಹಣ.	
೧೪೪	೩೬ „	೧೮ „	೯ „	೧ ವರಹ.

೩ ವರಹ ೩ ಹಣತೂಕ ಅಂದರೆ: ೧ ರೂಪಾಯಿತೂಕ; ಆದರೆ ಬಹಳ ತೂಕವುಳ್ಳದ್ದನ್ನು ಒಂದೇ ಸಾರಿ ಕೊಂಡು ಕೊಳ್ಳುವದರಲ್ಲಿಯೂ ಮಾರುವದರಲ್ಲಿಯೂ ೩ ವರಹ ೩ ಹಣ ತೂಕ ೩ ಹಾಗ ಅಂದರೆ: ೧ ರೂಪಾಯಿತೂಕ ಆಗುವದು.

೨. ಸಾಧಾರಣ ತೂಕ.

ವರಹತೂಕ.

೩ ೧/೩	೧ ರೂಪಾಯಿತೂಕ.				
೮೦	೨೪ „	೧ ಶೇರು.			
೧೩೩ ೧/೩	೪೦ „	೧ ೨/೩ „	೧ ರಾತಲು.		
೯೬೦	೨೮೦ „	೧೧ ೨/೩ „	೭ „	೧ ಥಡೆ.	
೩೪೮೦	೧೧೨೦ „	೪೬ ೨/೩ „	೨೮ „	೪ „	೧ ಮಣ.
೭೬೮೦೦	೨೨೪೦೦ „	೯೩೩ ೧/೩ „	೫೬೦ „	೮೦ „	೨೦ ೧ ಖಂಡಿ.

೩. ಈಗ ನಡೆಯುವಂಥ ಉಪ್ಪಿನ ಮುಂಬಯಿಯ ಅಳತೆ.

ರೂಪಾಯಿತೂಕ.

೮೦	೧ ಶೇರು.		
೩೨೦೦	೪೦ „	೧ ಮಣ.	
೩೮೪೦೦೦	೪೮೦೦ „	೧೨೦ „	೧ ಗಾರಸು.

ಸರಕಾರ ಕೋಠಿಗಳಲ್ಲಿ ಉಪ್ಪು ಮಾರುವ ರೀತಿ ಇದೇ.

೪. ಮರಗಳ ಅಳತೆ.

ವೀಸ.

೧೬	೧ ಅಂಗುಲ.	
೩೮೪	೨೪ „	೧ ಗಜ ಯಾನೆ ಕೋಲು.

ಮರದ ಖಂಡಿ ಅಂದರೆ ೨೪ ಕೋಲು ಉದ್ದವೂ, ೧೨ ಅಂಗುಲ ಅಗಲವೂ, ೧ ಅಂಗುಲ ದಪ್ಪವೂ ಆಗಿರುವಂಥಾದ್ದು. ಆದರೆ ಬೇರೆ ಶೀಮೆಗಳಲ್ಲಿ ಖಂಡಿ ಎರಡಷ್ಟು ದೊಡ್ಡದಾಗಿ, ಉದ್ದದಲ್ಲಿಯೂ ಅಗದಲ್ಲಿಯೂ ದಪ್ಪದಲ್ಲಿಯೂ ಒಂದು ಕೋಲಿನ ಪ್ರಮಾಣವುಳ್ಳದಾಗಿದೆ.

ಜನರಲ್ ಸ್ಟಾಂಪು ಆಕ್ಟು.

(ದಸ್ತಾವೇಜುಗಳ ತಸೆ ಹಾಸಲನ್ನು ಕುರಿತು ಉಂಟಾದ ೧೮೬೯ನೇ ಇಸವಿ XVIIIನೇ ಆಕ್ಟಿನಿಂದ ತೆಗದ್ದು.)

ಒಂದು ದಸ್ತಾವೇಜಿನಲ್ಲಿ ಬಡ್ಡಿ ಕೊಡ ತಕ್ಕದೆಂದು ಸ್ಪಷ್ಟವಾಗಿ ನಮೂದಿಸೋಣಾಗಿದ್ದರೆ, ಅಂಥಾ ದಸ್ತಾವೇಜಿಗಾಗಿ, ಅದರಲ್ಲಿ ಬಡ್ಡಿ ನಮೂದಾಗದೆ ಇದ್ದರೆ ಎಷ್ಟರ ಹಾಸಲಿಗೆ ಗುರಿಯಾಗುತ್ತಿತ್ತೋ, ಅದಕ್ಕಿಂತ ಹೆಚ್ಚಾಗಿ ಹಾಸಲು ತಕ್ಕೊಳ್ಳ ಕೂಡದು.

ಯಾವದಾದರೊಂದು ಪತ್ರ, ಅಡಮಾನಪತ್ರ, ಅಥವಾ ವ್ಯವಸ್ಥಾಪತ್ರ* ಇಂಥಾದ್ದರ ಮೊಬಲಗು ಯಾ ಕಿಮ್ಮತು ಗೊತ್ತಾಗದೆ ಹೋದರೆ, ಇಷ್ಟಾನುಸಾರವಾಗಿರ ಬಹುದಾದ ಸ್ಟಾಂಪು ಹಚ್ಚ ಬಹುದು.

ವಾಯಿದೆ ನಮೂದಿಲ್ಲದೆ ನಿಯಮಿತ ಕಾಲಗಳಲ್ಲಿ ಪಾವತಿಯಾಗ ತಕ್ಕ ವರುಷಾಸನದ ಯಾ ಇತರ ಮೊಬಲಗಿನ ಪಾವತಿ ಬಗ್ಯೆ ಪತ್ರದಿಂದ, ಪ್ರಾಮಿಸರಿ ನೋಟಿನಿಂದ, ಅಥವಾ ಅಡಮಾನಪತ್ರದಿಂದ ಭದ್ರ ಪಡಿಸಿದ ಇಡೀ ಮೊಬಲಗನ್ನು,—ಅಥವಾ ಒಂದು ಕ್ರಯ ಪತ್ರದ ಐವಜು ವಾಯಿದೆ ನಮೂದಿಲ್ಲದೆ ನಿಯಮಿತ ಕಾಲಗಳಲ್ಲಿ ಪಾವತಿಯಾಗ ತಕ್ಕ ವರುಷಾಸನವಾಗಿ ಯಾ ಇತರ ಮೊಬಲಗಾಗಿ ಇದ್ದರೆ, ಸದರಿ ಐವಜನ್ನು—ಒಂದು ಸಂವತ್ಸರಕ್ಕೆ ಲೆಖ್ಖ ಮಾಡಿದ ಮೊಬಲಗಿನ ೧೦ರಷ್ಟು ಎಂದು ಗ್ರಹಿಸ ತಕ್ಕದ್ದು.

ತಸೆ ಹಾಸಲಿನಿಂದ ವಿನಾಯಿಸಲ್ಪಟ್ಟ ದಸ್ತಾವೇಜುಗಳು ಯಾವವೆಂದರೆ:—ಗವರ್ನಮೆಂಟಿಗೆ ಕಂದಾಯ ತೆರುವ ಅಥವಾ ಇನಾಮತಿಯ ಜಮಿಾನುಗಳ ಬಗ್ಯೆ ಶಿಸ್ತು ಪಾವತಿ ಮಾಡಿದ್ದಕ್ಕಾಗಿ ರೈತನಿಗೆ ಕೊಡುವ ರಶೀದಿ; ಬೇಂಕಿನಲ್ಲಾಗ್ಯಲಿ, ಸಾವಕಾರನ ಕೈಯಲ್ಲಾಗ್ಯಲಿ ಅಮಾನತು ಇಟ್ಟ ಹಣಕ್ಕೆ ಕೊಡುವ ರಶೀದಿ; ಯಾವದೊಂದು ದಸ್ತಾವೇಜಿನ ಹಣ ಯಾ ಅಂಶ ಅಥವಾ ಬಡ್ಡಿ ಪಾವತೀ ರಶೀದಿ; ಬಿಲ್ ಒಫ್ ಎಕ್ಸ್‌ಚೇಂಜ ಎಂಬ ಹುಂಡಿಯೊಂದಿಗಿರುವ ಆಧಾರಪತ್ರ; ಸಂಬಳವುಳ್ಳ ಉದ್ಯೋಗದ ಕೆಲಸಗಳನ್ನು ಸರಿಯಾಗಿ ನಡಿಸುವಂತೆ, ಗವರ್ನಮೆಂಟಿಗೆ ಬರಕೊಡುವ ಪತ್ರ; ಸಾಮಾನುಗಳ ವಿಕ್ರಯದ ಬಗ್ಯೆ ಮಾಡುವ ಕರಾರು; ಕಾಣಿಕೆ ಇಲ್ಲದೆ ವ್ಯವಸಾಯಗಾರಗೆ ಬರ ಕೊಡೋಣಾಗುವ ಗೇಣಿಚೀಟು; ಅಂಥಾ ಗೇಣಿ ಚೀಟಿನ ಎದುರ್ಸುಡಿ; ರೈತನು ತನ್ನ ವರ್ಗದಾರನಿಗೆ ಜಮಿಾನು ಬಿಟ್ಟು ಕೊಡುವ ನಿಶೂದಿ; ಒಬ್ಬ ಸರಕಾರ ಉದ್ಯೋಗಸ್ಥನು ಕಾನೂನಿನ ಪ್ರಕಾರ ಮಾಡಿ ಕೊಡ ಬೇಕಾ

* ಅಂದರೆ: ಚರ ಯಾ ಸ್ಥಿರ ಸೊತ್ತಿನ ವಿನಿಯೋಗದ ಯಾ ಪ್ರಾಪ್ತಿಯ ವ್ಯವಸ್ಥೆಯಾಗುವ ದಸ್ತಾವೇಜು.

ದ ಯಾವದೊಂದು ಕಾಗದದ ನಕಲು; ಬೀಮು ದಸ್ತಾವೇಜು* ಕೊಡುವ ಬಗ್ಗೆ ಮೇಲು ಚೀಟು.

ಒಂದು ಠಸೆ ಕಾಗದವನ್ನು ಕೊಂಡುಕೊಂಡ ಮೇಲೆ, ಅದು ಚಿತ್ತಾದದರಿಂದಾಗಲಿ, ಅದರಲ್ಲಿ ಬರದ ಮತಲಬು ತಬದಿಲಾದದರಿಂದಾಗಲಿ, ನಿಷ್ಪ್ರಯೋಜನವಾದದರಿಂದಾಗಲಿ, ಕೆಲಸಕ್ಕೆ ಬಾರದೆ ಕೆಟ್ಟು ಹೋದರೆ, ಅದನ್ನು ಪಡಕೊಂಡ ಮನುಷ್ಯನು ಆ ಕಾಗದ ಎಲ್ಲಿ ಫುರೋಕ್ತಾಯಿತೋ ಆ ಡಿಸ್ಟ್ರಿಕ್ಟಿನ ಕಲ್ಲೆಕ್ಟರರಿಗೆ ಅದನ್ನು ಕೊಂಡುಕೊಂಡ ಒಂದು ವರ್ಷದೊಳಗೆ ಆ ಠಸೆ ಕಾಗದ ಹಾಜರು ಮಾಡಿ ಅರ್ಜಿ ಬರಕೊಂಡರೆ, ಸದರಿ ಠಸೇ ಮೊಬಲಗು ವಾಪಸು ಶಿಕ್ಕಲಾಗುವದು, ಅಥವಾ ಬೇಕಾದರೆ, ಅದಕ್ಕೆ ಸರಿಯಾದ ಮೊಬಲಗಿನ ಬೇರೊಂದು ಕಾಗದ ತೆಗದು ಕೊಳ್ಳ ಬಹುದು.

ಕೇಳಿದಾಗಲೇ ಅಲ್ಲದೆ ಅನ್ಯಥಾ ವಟಾಯಿಸ ತಕ್ಕ ಹುಂಡಿಗಳಿಗೆ (Bill of Exchange), ಅಥವಾ ವಾಯಿದೇಚೀಟುಗಳಿಗೆ (Promissory Note) ಈ ಕೆಳಗೆ ಬರದಿರುವ ಪ್ರಕಾರ ಸ್ಟಾಂಪು ಹಾಸಲು ಇರುತ್ತದೆ:—

	ಒಂದಕ್ಕೆ ರೂ.	ಒಂದಕ್ಕೆ ಆ.	ದುಬಾರೆಗೆ ರೂ.	ದುಬಾರೆಗೆ ಆ.	ತಿಬಾರೆಗೆ ರೂ.	ತಿಬಾರೆಗೆ ಆ.
೧೦೦ ರೂಪಾಯಿಗೆ ಮೀರದಿದ್ದರೆ	೦	೧	೦	೧	೦	೧
೧೦೦ ರೂಪಾಯಿಗೆ ಮೀರಿ ೨೦೦ " "	೦	೨	೦	೧	೦	೧
೨೦೦ " " ೩೦೦ " "	೦	೩	೦	೨	೦	೧
೩೦೦ " " ೬೦೦ " "	೦	೬	೦	೩	೦	೨
೬೦೦ " " ೯೦೦ " "	೦	೯	೦	೫	೦	೩
೯೦೦ " " ೧೨೦೦ " "	೦	೧೨	೦	೬	೦	೪
೧೨೦೦ " " ೧೫೦೦ " "	೦	೧೫	೦	೮	೦	೫
೧೫೦೦ " " ೨೫೦೦ " "	೧	೮	೦	೧೨	೦	೮
೨೫೦೦ " " ೧೦೦೦೦ ವರೆಗೆ ಪ್ರತಿ ರೂ. ೨೫೦೦ಕ್ಕೆ ಯಾ ಅದರ ಅಂಶಕ್ಕೆ	೧	೮	೦	೧೨	೦	೮
೧೦೦೦೦ " " ೩೦೦೦೦ ವರೆಗೆ ಪ್ರತಿ ರೂ. ೫೦೦೦ಕ್ಕೆ ಯಾ ಅದರ ಅಂಶಕ್ಕೆ	೩	೦	೧	೮	೧	೦
೩೦೦೦೦ ರೂ. ಮೇಲೆ ಪ್ರತಿ ರೂ. ೧೦೦೦೦ಕ್ಕೆ ಯಾ ಅದರ ಅಂಶಕ್ಕೆ	೬	೦	೩	೦	೨	೦

ಅಡ್ಮಿನಿಸ್ಟ್ರೇಶನ್ ಪತ್ರ ಶಿವಾಯಿ ಇತರ ಯಾವದಾದರೂ ಸಾಲಪತ್ರ, ತೋರಡವು, ಇಂಡಾರ್ಸಮೆಂಟ ಮೂಲಕವಾಗಿ ಯಾ ಅನ್ಯಥಾ ಸದರಿ ಅಡವಿನ ಸೊತ್ತಿನ ಮೇಲೆ ಹಣ ಹೊರಿಸಿ ಆಗುವ ಪತ್ರ, ಇವುಗಳಿಗೆ ಈ ಕೆಳಗಿನ ವಿವರ ಪ್ರಕಾರ ಠಸೆ ಹಚ್ಚ ಬೇಕು:—

* ಅಂದರೆ: ಒಬ್ಬನಿಂದ ವಟ್ಟಾ ತೆಗದು ಕೊಂಡು, ಅವನಿಗೆ ಅಕಸ್ಮಾತ್ತಾಗಿ ಯಾ ಹಟಾತ್ತಾಗಿ ಸಂಭವಿಸುವ ಲುಕ್ಸಾನು, ನಷ್ಟ, ಯಾ ಸಾಲ ಭರ್ತಿ ಮಾಡಿ ಕೊಡುವ ಬಗ್ಗೆ ಒಪ್ಪಿ ಕೊಳ್ಳುವ ದಸ್ತಾವೇಜು.

	ಹಸೆ. ರೂ.	ಆ.
ಪತ್ರದ ಮೊಬಲಗು ೨೫ ರೂಪಾಯಿಗೆ ಮೀರದಿದ್ದರೆ,	೦	೨
„ ೨೫ ರೂಪ್ಯಾಗೆ ಮೀರಿ ೫೦ „ „	೦	೪
„ ೫೦ „ „ ೧೦೦ „ „	೦	೮
„ ೧೦೦ „ „ ೧೦೦೦ ರೂ. ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂಶಕ್ಕೆ	೦	೮
„ ೧೦೦೦ „ „ ೧೦೦೦೦ „ „ ೫೦೦ „	೫	೮
„ ೧೦೦೦೦ „ „ ೩೦೦೦೦ „ „ ೧೦೦೦ „	೨	೮
„ ೩೦೦೦೦ „ „ ಪ್ರತಿ ರೂ. ೧೦೦೦೦ಕ್ಕೆ „	೧೨	೮

ಯಾವದಾದರೂ ಕ್ರಯಪತ್ರ, ಅಥವಾ ಭೋಗ್ಯಾದಿ ಅಡವುಪತ್ರಗಳಿಗೆ ಈ ಕೆಳಗಿನ ಪ್ರಕಾರ ಹಸೆ ಹಾಸಲು ಇರ ಬೇಕು:—

	ರೂ.	ಆ.
ಅದರ ಮೊಬಲಗು ೫೦ ರೂಪಾಯಿಗೆ ಮೀರದಿದ್ದರೆ,	೦	೮
೫೦ ರೂಪಾಯಿಗೆ ಮೀರಿ ೧೦೦ „ „	೧	೦
೧೦೦ „ „ ೧೦೦೦ ರೂ. ವರೆಗೆ ಪ್ರತಿ ರೂ. ೧೦೦ಕ್ಕೆಯಾ ಅದರ ಅಂಶಕ್ಕೆ	೧	೦
೧೦೦೦ „ „ ೧೦೦೦೦ „ „ „ ೫೦೦ „	೫	೦
೧೦೦೦೦ „ „ ೩೦೦೦೦ „ „ „ ೧೦೦೦ „	೫	೦
೩೦೦೦೦ „ „ ೧೦೦೦೦೦ „ „ „ ೧೦೦೦೦ „	೫೦	೦
೧೦೦೦೦೦ „ „ ಪ್ರತಿ ರೂ. ೨೦೦೦೦ಕ್ಕೆ „	೭೫	೦

ಗೇಣಿಚೀಟಿಗೆ ಬೇಕಾದ ಹಸೇ ಹಾಸಲಿನ ದರ:—

೧ ಸಂವತ್ಸರಕ್ಕಿಂತ ಕಮ್ಮಿ ವಾಯಿದೆಗಾದರೆ	ಒಟ್ಟು ಗೇಣಿ ಐವಜಿಗೆ ಸಾಲಪತ್ರ ಬರ ಕೊಡುವ ಪಕ್ಷಕ್ಕೆ ಎಷ್ಟು ಹಾಸಲು ಬೇಕೋ ಅಷ್ಟು. (ಸಾಲಪತ್ರದ ಹಾಸಲು ನೋಡು.)
೧ ಸಂವತ್ಸರಕ್ಕೆಮೀರಿ ೩ ಸಂವತ್ಸರಕ್ಕೆ ಮೀರದಿದ್ದರೆ	ಮೊದಲನೇ ವರ್ಷಕ್ಕೆ ಆಗುವ ಗೇಣೀ ಐವಜಿಗೆ ಸಾಲಪತ್ರ ಬರ ಕೊಡುವ ಪಕ್ಷಕ್ಕೆ ಎಷ್ಟು ಹಾಸಲು ಬೇಕೋ ಅಷ್ಟು.
೩ „ ಮೀರದಿದ್ದರೆ, ಅಥವಾ ವಾಯಿದೆ ನಮೂದಿಸದೆ ಇದ್ದರೆ	ಮೊದಲನೇ ವರ್ಷಕ್ಕೆ ಅಗುವ ಗೇಣೀ ಐವಜಿಗೆ ಪರಭಾರೆಸಾಧನ ಬರ ಕೊಡುವ ಪಕ್ಷಕ್ಕೆ ಎಷ್ಟು ಹಾಸಲು ಬೇಕೋ ಅಷ್ಟು.

ಗೇಣಿಚೀಟಿನ ಪರಭಾರೆಸಾಧನಕ್ಕೆ—

ಗೇಣಿಚೀಟಿನ ಬಗ್ಗೆ ತೆರ ಬೇಕಾದ ಸ್ಟಾಂಪು ೧೬ ರೂಪಾಯಿಗೆ ಮಿರದಿದ್ದರೆ	ಗೇಣಿಚೀಟಿಗೆ ಬೇಕಾದಷ್ಟೆ ಸ್ಟಾಂಪು.
ಇತರ ಸಂಗತಿಯಲ್ಲಿ	೧೬ ರೂಪಾಯಿ.

ಈ ಕೆಳಗಿನ ದಸ್ತಾವೇಜುಗಳಿಗೆ ಕಾಯಂ ಸ್ಟಾಂಪ ಹಾಸಲು ಇರುತ್ತದೆ:—

ಲೆಟರ್ಸ್ ಒಫ್ ಕ್ರೇಡಿಟ್ ಎಂಬ, ಒಬ್ಬನಿಗೆ ಸಾಲ ಕೊಡುವಂತೆ ಮತ್ತೊಬ್ಬನನ್ನು ಕೇಳಿ ಕೊಳ್ಳುವ ದಸ್ತಾವೇಜು; ೨೦ ರೂಪಾಯಿ ಯಾ ಅದಕ್ಕೆ ಮಿರಿರುವ ಯಾವದೊಂದು ಲೆಖ್ಖಾಚಾರ ಯಾ ಸಾಲವನ್ನು ಫಡಿಚಾ ಮಾಡಿ ಯಾ ಒಪ್ಪಿ ಬರಿಸೋಣಾದ ಯಾದಾಸ್ತು ಅಥವಾ ರಶೀದಿ.	೧ ಆಣೆ
ಬಿಲ್ ಒಫ್ ಲೇಡಿಂಗ್ ಎಂಬ, ಫಲಾನೆ ಮನುಷ್ಯನಿಗೆ ತಲ್ಪಿಸುವ ಬಗ್ಗೆ ಫಲಾನೆ ಸಾಮಾನುಗಳು ತನ್ನ ವಶಕ್ಕೆ ಬಂದಿರುವದಾಗಿ, ಒಂದು ಜಹಜಿನ ಯಜಮಾನನು ಯಾ ಅವನ ಮುತಾಲೀಕನು ತನ್ನ ದಸ್ಕತು ನಿಶೀ ಬರ ಕೊಡುವ ಪತ್ರ.	೪ ಆಣೆ
ಈ ಆಕ್ಟಿನಲ್ಲಿ ನಮೂದಿಸದೆ ಇರುವ ಯಾವದೊಂದು ಕರಾರು; ಒಂದು ದಸ್ತಾವೇಜನ್ನಾಗಲಿ, ಒಂದು ಲೇವಾದೇವಿಗೆ ಸಂಬಂಧವಾದ ಅನೇಕ ದಸ್ತಾವೇಜುಗಳನ್ನಾಗಲಿ ರಿಜಿಸ್ತ್ರೀ ಬಗ್ಗೆ ಹಾಜರು ಮಾಡುವಂತೆ ಮೊಕ್ತ್ಯಾರನಾಮೆ.	೮ ಆಣೆ
ದಸ್ತಾವೇಜಿನ ಕೌಂಟಪಾರ್ಟ ಯಾನೆ ಎದುರ್ನುಡಿ*; ಪಾಲುಗಾರಿಕೆಯ ಅಗಲಿಕೆಯನ್ನು ಕುರಿತು ದಸ್ತಾವೇಜು; ೫೦೦ ರೂಪಾಯಿ ಒಳಗಿನ ಯಾವದೊಂದು ಕೆಲಸವನ್ನು ನಡಿಸುವ ಬಗ್ಗೆ ಕೊಡುವ ಮೊಕ್ತ್ಯಾರನಾಮೆ.	೧ ರೂಪಾ
೫೦೦ ರೂಪಾಯಿಗೆ ಮಿರಿದ ಯಾವದೊಂದು ಕೆಲಸವನ್ನು ನಡಿಸುವ ಬಗ್ಗೆ ಕೊಡುವ ಮೊಕ್ತ್ಯಾರನಾಮೆ; ಕಾನೂನಿಗೆ ಅನುಗುಣವಾದ ಯಾವದೊಂದು ಕಾರ್ಯದ ಬಗ್ಗೆ ತಕ್ಕ ಮೊಬಲಗಿನ ಠಸೆ ಕಾಗದದ ಮೇಲೆ ಮಾಡಿದ ದಸ್ತಾವೇಜಿಗೆ ಮಜಬೂತು ಜಾಮಿನು ಹಾಕಿ ಬರ ಕೊಡುವ ಪತ್ರ ಅಥವಾ ಅಡಮಾನಪತ್ರ; ಸನ್ನದುಪತ್ರಗಳನ್ನು ಯಾ ಬೆಲೆಯುಳ್ಳ ಸಾಧನಗಳನ್ನು ಈಡಾಗಿಟ್ಟು ತೆಗದು ಕೊಂಡ ಸಾಲವನ್ನು ೩ ತಿಂಗಳೊಳಗೆ ವಾಪಸು ಸಲ್ಲಿಸುವಂತೆ ಮಾಡುವ ದಸ್ತಾವೇಜು; ಬಿಲ್ ಒಫ್ ಎಕ್ಸ್‌ಚೇಂಜನ್ನು ಯಾ ಪ್ರೊಮಿಸರಿ ನೋಟನ್ನು ಅಗೌರ ಪಡಿಸಿದಕ್ಕೆ ಸಾಕ್ಷಿಯಾಗಿ ಬರ ಕೊಡುವ ವಾಗ್ಮೂಲ.	೨ ರೂಪಾ

---

* ಪರಂತು ಸರಿಯಾಗಿ ಸ್ಟಾಂಪು ಹಾಸಲು ಕೊಟ್ಟದೆ ಎಂದು, ಅಸಲು ದಸ್ತಾವೇಜಿನ ಮೇಲೆ ಕಲೆಕ್ಟರರಾಗಲಿ, ತಕ್ಕ ಅಧಿಕಾರ ಹೊಂದಿದ ಇತರ ಉದ್ಯೋಗಸ್ಥನಾಗಲೀ ಬರಿಯದೆ ಹೋದರೆ, ಸದರಿ ನಕಲು ಪ್ರಯೋಜನದ್ದಲ್ಲ.

ಪಾಲುಗಾರಿಕೇ ಬಾಬತು ದಸ್ತಾವೇಜು; ಅಡಮಾನಪತ್ರವನ್ನು ಮತ್ತೊಬ್ಬರಿಗೆ ವಿಕ್ರಯಿಸುವ ಪರಭಾರೆಪತ್ರ.	೪ ರೂಪ್ಯಾ
ದೇಣೇದಾರನು ಲೇಣೇದಾರನ ಪ್ರಯೋಜನಕ್ಕಾಗಿ ತನ್ನ ಸೊತ್ತನ್ನು ಪರಭಾರೆ ಮಾಡುವದಕ್ಕೆ, ಯಾ ಅವನಿಗೆ ಸಲ ತಕ್ಕ ಸಾಲಗಳಿಗೋಸ್ಕರ ಪಾವತಿ ಮಾಡುವದಕ್ಕೆ, ಅಥವಾ ಲೇಣೇದಾರನ ಪ್ರಯೋಜನಕ್ಕಾಗಿ ದೇಣೇದಾರನ ಕೆಲಸವನ್ನು ನಡಿಸುವದಕ್ಕೋಸ್ಕರ ಶರತು ನಮೂದಿಸಿ ದೇಣೇದಾರನಿಂದ ಬರಕೊಳ್ಳೋಣಾಗುವ ದಸ್ತಾವೇಜು; ಲೆಟರ್ ಒಫ್ ಲೈಸನ್ಸ್ ಎಂಬ ಅನುಜ್ಞಾಪತ್ರ; ಒಬ್ಬನು ಮತ್ತೊಬ್ಬನ ಮೇಲಾಗಲಿ ಯಾವದಾದರೊಂದು ಸೊತ್ತಿನ ಮೇಲಾಗಲಿ ಉಂಟಾಗಿರುವ ತನ್ನ ಬಾಧ್ಯತೆಯನ್ನು ಬಿಟ್ಟು ಬಿಡುವ ದಸ್ತಾವೇಜು ಯಾನೆ ಖುಲಾಸಾಪತ್ರ; ಪುತ್ರಸ್ವೀಕಾರಕ್ಕೆ ಅಧಿಕಾರ ಕೊಡುವ ದಸ್ತಾವೇಜು.	೮ ರೂಪ್ಯಾ
ಚರಸ್ಥಿರಸೊತ್ತಿನ ವಿಷಯದಲ್ಲಿ ಟ್ರಸ್ಟಿಗಳ ನೇಮಕದ ಬಗ್ಯೆ, ಅಥವಾ ಚರಸ್ಥಿರಸೊತ್ತಿನ ವಿನಿಯೋಗ ಯಾ ರಕ್ಷಣೆಯ ಬಗ್ಯೆ ಹುಟ್ಟುವ (ಮರಣ ಶಾಸನವಲ್ಲದ) ಇತರ ಪತ್ರ; ಸ್ಥಿರ ಸೊತ್ತಿನ ದಾನಪತ್ರ; ಹಣ ಪಾವತಿಯಾಗದ, ಅಥವಾ ಸೊತ್ತಿಗೆ ಬದಲಾಗಿ ಹಣ ಪಾವತಿ ಮಾಡುವಂತೆ ಕರಾರಾಗದ ಸ್ಥಿರ ಸೊತ್ತಿನ ಸಂಬಂಧವಾಗಿ ಉಂಟಾಗುವ ಬದಲಾವಣಿಪತ್ರ ಅಥವಾ ವಿಭಾಗಪತ್ರ.	೧೬ ರೂಪ್ಯಾ

ಠಸೆ ಮೇಲೆ ಆಗ ತಕ್ಕ ಒಂದು ದಸ್ತಾವೇಜು ಬಾಶಿ ಕಾಗದದ ಮೇಲೆ ಅಥವಾ ಕಡಿಮೆ ಸ್ಟಾಂಪ ಕಾಗದದ ಮೇಲೆ ಬರಿಯಲ್ಪಟ್ಟದ್ದು, ಯಾವದೊಂದು ಶಿವಿಲ ಕೋರ್ಟಿನಲ್ಲಿ ಹಾಜರು ಮಾಡಲ್ಪಟ್ಟರೆ, (ಠಸೆ ತಪ್ಪಿಸಿ ಕೊಳ್ಳುವ ಇರಾದೆಯಿಂದ ಅದು ಮಾಡಿದ್ದಲ್ಲವೆಂತಾ ಕೋರ್ಟಿನವರಿಗೆ ಸಮಾಧಾನವಾದರೆ) ಈ ಕೆಳಗಿನ ದರದಲ್ಲಿ ಅದಕ್ಕೆ ಜುಲುಮಾನೆ ತೆರ ಬೇಕು, ಆಗ ಆ ದಸ್ತಾವೇಜಿನ ಬಗ್ಯೆ ತಕ್ಕ ಠಸೆ ಹಾಸಲು ವಸೂಲಾಯಿತೆಂದು ಅದರ ಮೇಲೆ ಸದರಿ ಕೋರ್ಟಿನವರು ಇಂಡಾರ್ಸ ಮಾಡ ತಕ್ಕದ್ದು.

ದಸ್ತಾವೇಜು ಹುಟ್ಟಿದ ಒಂದು ವರ್ಷದೊಳಗೆ ಹಾಜರು ಮಾಡಲ್ಪಟ್ಟರೆ, ತಕ್ಕ ಠಸೆ ಹಾಸಲಿನ ಐದಷ್ಟು ಮೊಬಲಗು,—೧ ವರ್ಷದ ತರುವಾಯ ಹಾಜರು ಮಾಡಲ್ಪಟ್ಟರೆ, ಇಪ್ಪತ್ತರಷ್ಟು ಮೊಬಲಗು ಜುಲುಮಾನೆಯಾಗಿರ ತಕ್ಕದ್ದು.

ಯಾವ ದಸ್ತಾವೇಜಿಗಾದರೂ ತೆರ ಬೇಕಾದ ಠಸೆ ಹಾಸಲು ಒಂದೇ ಸ್ಟಾಂಪಿನಿಂದ ಸೂಚಿಸ ತಕ್ಕದ್ದು. ಆದರೆ ಅದು ೧೦೦ ರೂಪಾಯಿಗಳಿಗೆ ಮಿಾರಿದರೆ, ಸದರಿ ಮೊಬಲಗು ಎರಡು ಯಾ ಹೆಚ್ಚು ಸ್ಟಾಂಪುಗಳಿಂದ ಸೂಚಿಸ ಬಹುದು.

ಇನ್ನು ಹೆಚ್ಚಿನ ವಿವರ ಬೇಕೆಂದಿರುವವರು ತಾಜಾ ಆಕ್ಟನ್ನೇ ಓದಿ ಕೊಳ್ಳಲಿ.

ಟಪ್ಪಾಲಿನ ವಿಷಯದ ಮುಖ್ಯ ಕಟ್ಟಳೆಗಳು.

ಈ ಕೆಳಗಿನ ಕ್ರಮಗಳು ಇಂಡ್ಯಾಗೌರ್ನಮೆಂಟೆಂಬ ಸರಕಾರದ ಕೆಳಗಿರುವ ದೇಶಗಳಲ್ಲಿ ಲಖೋಟೆಗಳು ಕಟ್ಟುಗಳು ಮುಂತಾದ್ದನ್ನು ಒಂದು ಟಪ್ಪಾಲುಕಟ್ಟೆಯಿಂದ ಬೇರೊಂದಕ್ಕೆ ಕಳುಹಿಸುವ ವಿಷಯದಲ್ಲಿ ಏರ್ಪಡಿಸಿರುತ್ತವೆ.

ಒಂದು ಲಖೋಟೆ ಅಥವಾ ಕಟ್ಟು ಯಾವ ಮನುಷ್ಯನಿಗೆ ಮತ್ತು ಯಾವ ಊರಿಗೆ ತಲಪ ಬೇಕೋ ಆ ಮನುಷ್ಯನ ಮತ್ತು ಆ ಊರಿನ ಹೆಸರನ್ನು ಅದರ ಮೇಲ್ಗಡೆಯಲ್ಲಿ ಸ್ಪಷ್ಟವಾಗಿಯೂ ವಿರಳವಾಗಿಯೂ ಬರಿಯ ಬೇಕು. ದಸ್ತೂರಿ ತೆರುವ ಸ್ಟಾಂಪ ಚೀಟನ್ನು ಮೇಲುವಿಳಾಸದ ಬಲಗಡೆಯಲ್ಲಿ ಹಚ್ಚಿ, ಅದು ಅನ್ಯಥಾ ವಂಚನೆಯಾಗದ ಹಾಗೆ, ಅದರ ಮೇಲೆ ಗೆರೆಯಿಂದಾಗಲೀ ತಮ್ಮ ಅಂಕಿತದಿಂದಾಗಲೀ ನಿಶಾನಿ ಮಾಡ ಬಹುದು.

ಒಂದು ಲಖೋಟೆ ಅಥವಾ ಕಟ್ಟು ಟಪ್ಪಾಲಿಗೆ ಹಾಕಿದ ತರುವಾಯ, ಗೌರ್ನಮೆಂಟಿನವರ ಅಪ್ಪಣೆ ಪಡಕೊಂಡ ಹೊರ್ತು, ವಾಪಸು ಕೊಡಿಸ ಬೇಕೆಂತ ಹೇಳ ಕೂಡದು.

ಲಿಫಾಪೆಗಳು ಯಾವಾಗಲಾದರೂ ಟಪ್ಪಾಲಿಗೆ ಹಾಕ ಬಹುದು. ಟಪ್ಪಾಲು ಕೈದು ಮಾಡುವ ಒಂದು ತಾಸಿನ ಮುಂಚೆ ಬಂದ ಲಿಫಾಪೆಗಳೆಲ್ಲಾ ಕಳುಹಿಸಲ್ಪಡುವವು. ಆದರೆ ತರುವಾಯ ಬಂದವುಗಳೆಲ್ಲಾ ಮರು ಟಪ್ಪಾಲಿಗೆ ಹೋಗುವವು.

ಕೋವಿಮದ್ದು, ಗಂಧಕ, ಗಾಜಿನ ಸಾಮಾನು, ತೆಳು ಜೇನಸು ಮುಂತಾದ ಜ್ವಲನಾಸ್ಪದವಾದ, ಒಡೆಯುವ, ಅಥವಾ ಅಪಾಯಕರವಾದ ಯಾವ ತರದ ಜೇನಸುಗಳಾದರೂ ಟಪ್ಪಾಲಿನ ದ್ವಾರಾ ಸರ್ವಥಾ ಕಳುಹಿಸೋಣಾಗಲಿಕ್ಕಿಲ್ಲ.

ನಾಣ್ಯ ಮುಂತಾದ ಬೆಲೆಯುಳ್ಳ ಪದಾರ್ಥ ಗರ್ಭಿತವಾದ ಲಖೋಟೆಯನ್ನು ಟಪ್ಪಾಲಿಗೆ ಹಾಕುವದಾದರೆ, ಅಗತ್ಯವಾಗಿ ರಿಜಿಸ್ತ್ರಿ ಮಾಡಿಸ ಬೇಕು. ಆದರೆ ಒಂದು ಲಖೋಟೆಯಲ್ಲ್ಯಾಗಲೀ ಪಾರ್ಸೆಲೆಂಬ ಕಟ್ಟಿನಲ್ಲ್ಯಾಗಲೀ ಒಂದು ಬೆಲೆಯುಳ್ಳ ಸಾಧನವುಂಟೆಂತ ತಿಳಿದು ಪೋಸ್ತಮಾಸ್ತರನು ಟಪ್ಪಾಲಿಗೆ ಅಂಗೀಕರಿಸಿ ಕೊಳ್ಳ ಕೂಡದು.

ಒಂದು ಲಖೋಟೆಯಾಗಲೀ ಕಟ್ಟಾಗಲೀ, ಅದು ಯಾರಿಗೆ ಮುಟ್ಟಿಸ ಬೇಕಾಗಿರುತ್ತದೋ ಅವನ ಮೇಲೆ ದ್ವೇಷದಿಂದ ಯಾರಾದರೂ ಕಳುಹಿಸಿದ್ದೆಂತ ಅದು ತಲ್ಪಿದ ಪೋಸ್ತಮಾಸ್ತರಿಗೆ ಕಂಡರೆ, ಆ ಆಫಿಸರು ಅದರ ದಸ್ತೂರಿಯನ್ನು ವಾಪಸು ಮಾಡ ಬಹುದು.

೧. ಕಾಗದಟಪ್ಪಾಲು. Letter Post.

ಇವುಗಳನ್ನು ಟಪ್ಪಾಲಿನ ದ್ವಾರಾ ಕಳುಹಿಸುವದಕ್ಕೆ ಕೆಳಗಿನ ನಿರಖು ಪ್ರಕಾರ ಟಪ್ಪಾಲ ಹಾಸಲು ಇರುತ್ತದೆ:—

ಕಾಗದಗಳು			ರಿಜಿಸ್ತ್ರಿಯಾದ ವರ್ತಮಾನ ಪತ್ರಗಳೂ ಅಚ್ಚು ಕಾಗದಗಳೂ			ರಿಜಿಸ್ತ್ರಿಯಾಗದ ವರ್ತಮಾನಪತ್ರಗಳು ಮುಂತಾದ್ದು
ಭಾರದಲ್ಲಿ			ಭಾರದಲ್ಲಿ			ಭಾರದಲ್ಲಿ
೧/೨ ತೊಲೆಗೆ	೧ ತೊಲೆಗೆ	೨ ತೊಲೆಗೆ	೧೦ ತೊಲೆಗೆ	೨೦ ತೊಲೆಗೆ	೩೦ ತೊಲೆಗೆ	೧೦ ತೊಲೆಗೆ
ಮಿಾರದಿದ್ದರೆ			ಮಿಾರದಿದ್ದರೆ			ಮಿಾರದಿದ್ದರೆ
೬ ಪೈ	೧ ಆಣೆ	೨ ಆಣೆ	೬ ಪೈ	೧ ಆಣೆ	೧ ೧/೨ ಆಣೆ	೧ ಆಣೆ
ಹೆಚ್ಚಿಗೆ ಪ್ರತಿ ಒಂದು ತೊಲೆಗೆ ೧ ಆಣೆ ಪ್ರಕಾರ			ಹೆಚ್ಚಿಗೆ ಪ್ರತಿ ೧೦ ತೊಲೆಗೆ ೬ ಪೈ ಪ್ರಕಾರ.			ಹೆಚ್ಚಿಗೆ ಇದ್ದರೆ ಬಂಗೀ ಟಪ್ಪಾಲ ದರದಲ್ಲಿ ಎಣಿಸಲಾದೀತು.
			ಇವೆರಡಕ್ಕೂ ದಸ್ತೂರಿ ಮುಂದಾಗಿ ಕೊಡದೆ ನಿರ್ವಾಹವಿಲ್ಲ.			

a. ಲೇಖನಪತ್ರಗಳು.

ಕಾಗದವನ್ನು ಕಳುಹಿಸುವವನು ಅದನ್ನು ದಸ್ತೂರಿ ಮುಂದಾಗಿ ಕೊಟ್ಟು ಆಗಲೀ, (bearing) ಬೇರಿಂಗ್ ಆಗಿ ಅಂದರೆ ಕಾಗದವು ಯಾರಿಗೆ ಕಳುಹಿಸ ಬೇಕೋ ಅವನೇ ದಸ್ತೂರಿ ಕೊಡ ಬೇಕೆಂತಾಗಲೀ ಟಪ್ಪಾಲಿನ ಮೇಲೆ ಹಾಕ ಬಹುದು. ಆದರೆ ಒಬ್ಬನು ತನ್ನ ಹೆಸರಿಗೆ ಬಂದ ಕಾಗದವನ್ನು ತೆರಿಯದೆ ವಾಪಸು ಮಾಡಿದರೆ, ಅವನು ಅದರ ದಸ್ತೂರಿ ತೆರಲಿಕ್ಕೆ ಬದ್ಧನಾಗುವದಿಲ್ಲ.

ಬೇರಿಂಗ್ ಆಗಿ ಕಳುಹಿಸಲ್ಪಟ್ಟ ಕಾಗದಕ್ಕೆ ಮೇಲಿನ ನಿರಖಿನ ಇಮ್ಮಡಿ ದಸ್ತೂರಿ ವಸೂಲು ಮಾಡಲಾದೀತು.

ಟಪ್ಪಾಲದಸ್ತೂರಿಯನ್ನು ತಪ್ಪಿಸಿ ಕೊಳ್ಳುವ ಬಗ್ಗೆ ಬೇರೆ ಬೇರೆಯವರಿಗೆ ಪ್ರತ್ಯ ಪ್ರತ್ಯೇಕವಾಗಿ ಬರದ ಕಾಗಡಗಳನ್ನು ಒಂದೇ ಲಿಫಾಪೆಯಲ್ಲಿ ಹಾಕಿ ಕಳುಹಿಸುವಂಥವರು ಆಕ್ಟಿನ ಪ್ರಕಾರ ಶಿಕ್ಷೆಗೆ ಪಾತ್ರರಾಗುತ್ತಾರೆ.

ತಮ್ಮ ಕಾಗದದಲ್ಲಿ ಹುಂಡಿಚೀಟು ಮುಂತಾದ ಯಾವದೊಂದು ಬೆಲೆಯುಳ್ಳ ಸಾಧನವನ್ನು ಮಲಫೂಪು ಮಾಡಿ, ಅದು ಹೆಚ್ಚು ಭದ್ರತೆಯಿಂದ ತಲಪ ಬೇಕೆಂದು ಮನಸ್ಸುಳ್ಳವರು ನಾಲ್ಕು ಆಣೆ ಕೊಟ್ಟು ಅದನ್ನು ರಿಜಿಸ್ತ್ರಿ ಮಾಡಿಸ ಬೇಕು. ಕರೆನ್ಸಿ ನೋಟುಗಳನ್ನು ಈ ಪ್ರಕಾರ ಕಳುಹಿಸುವವರು ಅದರ ಅರ್ಧವನ್ನು ಮೊದಲಾಗಿ ರವಾನಿಸಿ, ಅದು ತಲಪಿದ್ದಕ್ಕೆ ಉತ್ತರ ಬಂದ ಮೇಲೆ, ಇನ್ನೊಂದು ತುಂಡನ್ನು ಸಹಾ ಕಳುಹಿಸುವದು ಯುಕ್ತವಾಗಿರುತ್ತದೆ. ಮನಿ ಆರ್ಡರ್ ಎಂಬ ಹುಂಡಿಯಾದರೆ ಹಾಗಲ್ಲ, ಅದನ್ನು ಪ್ರತ್ಯೇಕವಾಗಿ ಒಂದು ಖಾಲಿ ಲಖೋಟೆಯಲ್ಲಿ ಕಳುಹಿಸಿ ಬೇಕೇ ಹೊರ್ತು, ಅದನ್ನು ಕುರಿತು ಬರದ ಕಾಗದದಲ್ಲೇ ಗರ್ಭಿಸಿ ಸರ್ವಥಾ ಕಳುಹಿಸ ಬಾರದು.

b. ರಿಜಿಸ್ತ್ರಿ ಆದ ವರ್ತಮಾನಪತ್ರಗಳೂ ಅಚ್ಚುಕಾಗದಗಳೂ.

ಮೂವತ್ತೊಂದು ದಿವಸಗಳಿಗೆ ಮಿಾರದ ಕಾಲಾವಧಿಯಾಗಿ ಪ್ರಕಟವಾಗುವ ಯಾವದಾದರೂ ಪ್ರಕಟಣೆಗಳು ಪೋಸ್ತಮಾಸ್ತರ ಜನರಲವರ ಆಫಿಸಿನಲ್ಲಿ ವರುಷಕ್ಕೊಮ್ಮೆ ರಿಜಿಸ್ತ್ರಿ ಮಾಡಿಸಲಾಗಿ, ಅಂಥವುಗಳು ರಿಜಿಸ್ತ್ರಿಯಾದ ವರ್ತಮಾಪತ್ರಗಳೆನ್ನಿಸಿಕೊಳ್ಳುತ್ತವೆ. ಇಂಥಾ ಪತ್ರಿಕೆಯನ್ನು ಕಳುಹಿಸುವಾಗ ಅದರಲ್ಲಿ ಬೇರೆ ಯಾವ ಕಾಗದವಾದರೂ ವಸ್ತಾದರೂ ಗರ್ಭಿಸ ಬಾರದು; ಅದಕ್ಕೊಂದು ಕಾಗದಪಟ್ಟಿ ಸುತ್ತಿದರೂ ಚಿಂತೆ ಇಲ್ಲಾ. ಹ್ಯಾಗೂ ಅದು ಇಂಥಾ ನಂಬ್ರಕ್ಕೆ ರಿಜಿಸ್ತ್ರಿಯಾಗಿರುತ್ತದೆಂತ ಮೇಲ್ಗಡೆಯಲ್ಲಿ ನಮೂದಿಸಿ, ಅದರ ಇಕ್ಕಡೆಯಲ್ಲಿಯೂ ಬಂದು ಮಾಡದೆ ಖುಲ್ಲಾ ಬಿಟ್ಟಿರಬೇಕು. ರಿಜಿಸ್ತ್ರಿ ಆದ ಪತ್ರಿಕೆಗೆ ಮೇಲೆ ನಮೂದಿಸಿದ ದರದಲ್ಲಿ ಮುಂದಾಗಿ ದಸ್ತೂರಿ ಹಚ್ಚಿದ ಹೊರ್ತು, ಅದು ಕಾಗದಟಪ್ಪಾಲಿನ ದ್ವಾರಾ ಕಳುಹಿಸ ಕೂಡದು. ಮತ್ತು ಒಂದೊಂದು ಪತ್ರಿಕೆಗೆ ಪ್ರತ್ಯಪ್ರತ್ಯೇಕ ದಸ್ತೂರಿ ಸಲ್ಲ ಬೇಕು.

ಅಚ್ಚುಕಾಗದಗಳು (proof-sheets) ಸಹಾ ರಿಜಿಸ್ತ್ರಿ ಆದ ಪತ್ರಿಕೆಗಿರುವ ದಸ್ತೂರಿಯ ದರದಲ್ಲಿಯೇ ಕಾಗದಟಪ್ಪಾಲಿನ ದ್ವಾರಾ ಕಳುಹಿಸ ಬಹುದು. ಆದರೆ ಕಳುಹಿಸುವವನು ಅದರಲ್ಲಿರುವ ಮಲಫೂಪುಗಳನ್ನು ಕುರಿತು ಅದರ ಮೇಲೆ ತನ್ನ ದಸ್ಕತಿನಿಂದ ಕಂಠೋಕ್ತ ಪಡಿಸ ಬೇಕು.

c. ರಿಜಿಸ್ತ್ರಿ ಆಗದ ವರ್ತಮಾನಪತ್ರಗಳು ಮುಂತಾದ್ದು.

ಹತ್ತು ತೊಲೆಗಳಿಗೆ ಮಿಾರದೆ ಇರುವ ಯಾವದೊಂದು ಲಿಫಾಪೆಯು, ಅದರ ಮಲಫೂಪುಗಳು ಪರೀಕ್ಷೆ ಬಗ್ಗೆ ಹೊರಗೆ ತೆಗಿಯಲಿಕ್ಕಾಗುವ ಹಾಗೆ, ಇಕ್ಕಡೆಯಲ್ಲಿಯೂ ಖುಲ್ಲಾ ಬಿಟ್ಟು ಕಳುಹಿಸಿದರೆ, ೧ ಆಣೆ ದಸ್ತೂರಿಯಲ್ಲಿ ಹೋಗುವದು. ಇಂಥಾದ್ದು ರಿಜಿಸ್ತ್ರಿ ಆಗದ ಪತ್ರಿಕೆ ಎಂದನ್ನಿಸಿ ಕೊಳ್ಳುತ್ತದೆ. ಬಂದು ಮಾಡಲ್ಪಟ್ಟ ಯಾವ ಕಾಗದವಾದರೂ ಈ ಟಪ್ಪಾಲಿನ ದ್ವಾರಾ ಕಳುಹಿಸೋಣಾಗಲಿಕ್ಕಿಲ್ಲ.

೨. ಬಂಗೀ ಟಪ್ಪಾಲು. Banghy Post.

ಇಂಥಾದ್ದಕ್ಕೆ ಟಪ್ಪಾಲು ಹಾಸಲಿನ ದರ ಯಾವದಂದರೆ:—

ಭಾರದಲ್ಲಿ	೨೦ ತೊಲೆಗೆ ಮಿಾರದಿದ್ದರೆ	೩೦ ತೊಲೆಗೆ ಮಿಾರದಿದ್ದರೆ	ಪ್ರತಿ ಹೆಚ್ಚಿಗೆ ೧೦ ತೊಲೆಗೆ
ಪಾರ್ಸೆಲು	೪ ಆಣೆ	೬ ಆಣೆ	೨ ಆಣೆ
ಪೇಕೆಟು	೨ ಆಣೆ	೩ ಆಣೆ	೧ ಆಣೆ

ಪಾರ್ಸೆಲಿಗೂ ಪೇಕೆಟಿಗೂ ಹೆಚ್ಚು ಕಡಿಮೆ ಏನಂದರೆ: (1) ಪೇಕೆಟು ಉಭಯ ಕಡೆಗಳಲ್ಲಿ ಮುಚ್ಚದೆ ಖುಲ್ಲಾ ಇರ ಬೇಕು; ಆದರೆ, ಪಾರ್ಸೆಲು ಕಳುಹಿಸುವವನ ಮುನಾಸಬು ಮೇರೆಗೆ ಬಂದು ಮಾಡಿರ ಬಹುದು. (2) ಪಾರ್ಸೆಲು ರಿಜಿಸ್ತ್ರೀ ಕ್ರಮದ ಮೇಲೆ ಕಳುಹಿಸೋಣಾಗುತ್ತದೆ, ಆದರೆ ಪೇಕೆಟು ಹಾಗಲ್ಲ. (3) ಪೇಕೆಟಿಗೆ ಮುಂದಾಗಿ ದಸ್ತೂರಿ ಹಚ್ಚದೆ ನಿರ್ವಾಹವಿಲ್ಲ; ಆದರೆ ಪಾರ್ಸೆಲಿಗೆ ದಸ್ತೂರಿ ಹಚ್ಚುವದು ಕಳುಹಿಸುವವನ ಮುನಾಸಬು ಆಗಿರುತ್ತದೆ. (4) ಒಂದು ಕಾಗದಕ್ಕಿಂತ ಹೆಚ್ಚು ಪಾರ್ಸೆಲಿನಲ್ಲಿ ಗರ್ಭಿಸ ಕೂಡದು; ಪೇಕೆಟಿನಲ್ಲ್ಯಾದರೆ, ಕಾಗದವಾಗಲೀ ನೋಡದ ಹಾಗೆ ಬಂದು ಮಾಡಿದ ಯಾವ ವಸ್ತ್ವಾಗಲೀ ಗರ್ಭಿಸ ಕೂಡದು.

ಪೇಕೆಟಿನಲ್ಲ್ಯಾಗಲೀ ಪಾರ್ಸೆಲಿನಲ್ಲ್ಯಾಗಲೀ ಕಳುಹಿಸುವ ವಡವೆಗಳನ್ನು ಕುರಿತು, ಮೇಲೆ ನಮೂದಿಸಿದ ಸಂಗತಿಗಳ ಹೊರ್ತು, ಬೇರೇನೂ ನಿಬಂಧನೆ ಇರುವದಿಲ್ಲ.

ಒಂದು ಪಾರ್ಸೆಲಿಗೆ ಮುಂದಾಗಿ ದಸ್ತೂರಿ ಕೊಡದಿದ್ದಾಗ್ಯೂ, ದಸ್ತೂರಿ ಮುಂದಾಗಿ ಕೊಟ್ಟ ಪಕ್ಷಕ್ಕೆ ಯಾವ ದರದಲ್ಲಿ ಕೊಡ ಬೇಕಿತ್ತೋ ಅದೇ ದರದಲ್ಲಿ ವಸೂಲು ಮಾಡಲಾಗುವದು. ಆದ ಕಾರಣ ಹಚ್ಚಿದ ದಸ್ತೂರಿ ಕಡಿಮೆಯಾಗಿದ್ದ ಪಕ್ಷಕ್ಕೆ ಆ ಕಡಿಮೆಯಾಗಿದ್ದಷ್ಟು ಅಂಶ ಮಾತ್ರ ಕೊಡ ಬೇಕಷ್ಟೆ.

ಒಂದು ಪಾರ್ಸೆಲು ರವಾನೇ ಬಗ್ಯೆ ಟಪ್ಪಾಲು ಕಟ್ಟೆಯಲ್ಲಿ ಒಪ್ಪಿಸಿದ ಮನುಷ್ಯನು ಅದಕ್ಕಾಗಿ ರಶೀದಿ ಹೊಂದುವನು. ಅದು ಬಟ್ಟೆಯಲ್ಲಿ ಆಗಲೀ ಮೇಣದ ವಸ್ತ್ರದಲ್ಲ್ಯಾಗಲೀ ತವರದ ತಗಡಿನಲ್ಲ್ಯಾಗಲೀ ಸುತ್ತಿ ಕಟ್ಟಿ ತರ ಬೇಕು. ಅದು ವಸ್ತ್ರದಲ್ಲಿ ಕಟ್ಟಿದ ಪಕ್ಷಕ್ಕೆ, ಅದರ ಹೊಲಿಗೆಯ ಮೇಲೆ ಮೂರು ಇಂಚಿಗೆ ಮಿಾರದ ದೂರದಲ್ಲಿ (ಚಲಾವಣಿ ನಾಣ್ಯವಲ್ಲದ) ಮುದ್ರೆಯಿಂದ ಮುದ್ರಿಸಿರ ಬೇಕು.

ಪಾರ್ಸೆಲು ಯಾರಿಗೆ ಕಳುಹಿಸೋಣಾಗುತ್ತದೋ ಆ ಮನುಷ್ಯನು ಅದು ತನಗೆ ತಲಪಿದ್ದಕ್ಕೆ ರಶೀದಿ ಕೊಡ ಬೇಕು.

೨೫ ಶೇರು(ಅಂದರೆ ೨೦೦೦ ತೊಲೆ)ಗಳಿಗೆ ಮಿಾರಿರುವ ಯಾವ ಪಾರ್ಸೆಲನ್ನಾದರೂ ಟಪ್ಪಾಲಿನ ದ್ವಾರಾ ಕಳುಹಿಸೋಣಾಗಲಿಕ್ಕಿಲ್ಲ. ಒಂದು ಪೇಕೆಟು ೧½ ಫೂಟ್ ಉದ್ದ, ೧ ಫೂಟ್ ಅಗಲ ಅಥವಾ ದಪ್ಪಕ್ಕೆ ಮಿಾರ ಕೂಡದು; ಮಿಾರಿದರೆ ಅದು ಪಾರ್ಸೆಲೆಂತ ಎಣಿಸಲಾಗಿ, ಆ ರೀತಿ ದಸ್ತೂರಿ ವಸೂಲು ಮಾಡಲಾಗುವದು.

ದಕ್ಷಿಣ ಕನ್ನಡ ಜಿಲ್ಲೆಯ ಸರಕಾರ ಉದ್ಯೋಗಸ್ಥರು.

(೧೮೭೯ನೇ ಸಪಟಂಬರ ವರೆಗೆ ತಿದ್ದಿರುತ್ತದೆ.)

I. ಜಿಲ್ಲಾ ಉದ್ಯೋಗಸ್ಥರು.

ರೇವನಿ ಮತ್ತು ಮೆಜಿಸ್ಟ್ರೇಟ ಇಲಾಖೆ.

1. ಹಜೂರು ಆಫಿಸ್.

A. McC. Webster Esq.
ಎ. ಮೆಕ್ ವೆಬ್‌ಸ್ಟರ್ ಸಾಹೇಬರು } ಕಲ್ಲೆಕ್ಟರ್ ವ ಡಿಸ್ಟ್ರಿಕ್ಟ ಮೆಜಿಸ್ಟ್ರೇಟ.

J. L. Fernandez Esq.
ಜೆ. ಲ. ಫೆರ್ನಂದೆಜ್ ಸಾಹೇಬರು } ಖಜಾನಾ ವಗ್ಯೆರೆ ಚಾರ್ಜ ಇರುವ ಆ. ಡಿಪ್ಯುಟಿ ಕಲ್ಲೆಕ್ಟರ್.

ಅ. ವೆಂಕಪ್ಪ ಪೂಂಜ—ಆಕ್ಟಿಂಗ್ ಹೆಡ್ ಶಿರಸ್ತೇದಾರ್.

ಪಿ. ಪ್ರೆ. ಫೆರ್ನಂದೆಜ್—ಆಕ್ಟಿಂಗ್ ಹೆಡ್ ಕ್ಲರ್ಕ.

ಜಿ. ಮೇ—ಟ್ರನ್ಸ್‌ಲೇಟರ್ (ಭಾಷಾಂತರಕರ್ತ).

ಅ. ಕೃಷ್ಣರಾವ್—ಹೆಡ್ ಮುನಶಿ.

ಜ. ಲ. ಸಲ್ಡಾಞ್ಯಾ— ಇಂಗ್ಲಿಷ
ಜಿ. ಮ. ಗೊನ್ಸಾಲ್ವೆಸ್—ದೇಶಭಾಷೆ } ರಿಕಾರ್ಡ್‌ಕೀಪರ್.

*ಮನಿ ಆರ್ಡರ್ ಏಜೆಂಟ್ { ಮಂಗಳೂರಲ್ಲಿ: ಖಜಾನಾ ಡಿಪ್ಯುಟಿ ಕಲ್ಲೆಕ್ಟರ್.
ಉಡಪಿ: ತಾಲೂಕು ತಹಶಿಲದಾರ್.

2. ಹೆಡ್ ಅಶಿಷ್ಟಾಂಟ ಕಲ್ಲೆಕ್ಟರ ಆಫಿಸ್.

E. Gibson Esq.
ಇ. ಜಿಬ್ಸನ್ ಸಾಹೇಬರು } ಆ. ಹೆಡ್ ಅಶಿಷ್ಟಾಂಟ ಕಲ್ಲೆಕ್ಟರ್ ವ 1ನೇ ಕ್ಲಾಸ ಮೆಜಿಸ್ಟ್ರೇಟ.

ಕ. ರಂಗಪ್ಪಾ—ಹೆಡ್ ಮುನಶಿ.

3. ಅಶಿಷ್ಟಾಂಟ ಕಲ್ಲೆಕ್ಟರ ಆಫಿಸ್.

G. Stokes Esq. ಜಿ. ಸ್ಟೋಕ್ಸ್ ಸಾಹೇಬರು, ಅಶಿಷ್ಟಾಂಟ ಕಲ್ಲೆಕ್ಟರ್, 1ನೇ ಕ್ಲಾ. ಮೆಜಿಸ್ಟ್ರೇಟ.

ಹ. ಕೊರಗಪ್ಪ—ಹೆಡ್ ಮುನಶಿ.

4. ನಮ್ಮಕ ಡಿಪ್ಯುಟಿ ಕಲ್ಲೆಕ್ಟರ ಆಫಿಸ್.

J. Ball Esq.
ಜೆ. ಬೋಲ್ ಸಾಹೇಬರು } ನಮ್ಮಕ ಡಿಪ್ಯುಟಿ ಕಲ್ಲೆಕ್ಟರ್ ವ 1ನೆ ಕ್ಲಾಸ ಮೆಜಿಸ್ಟ್ರೇಟ.

* ಅಂದರೆ ಹುಂಡಿ ಚಲಾವಣಿ.

ಶಿವಿಲ್ ಇಲಾಖೆ.

1. ಡಿಸ್ಟ್ರಿಕ್ಟ್ ಕೋರ್ಟ್.

J. W. Best Esq.
ಜೆ. ವಿ. ಬೆಸ್ಟ್ ಸಾಹೇಬರು — ಆ. ಡಿಸ್ಟ್ರಿಕ್ಟ ವ ಶೇಷನ್ ಜಡ್ಜರು.
ಮಿಸ್ತರ್ ಜೆ. ಫ. ಪಚಕೊ — ಶಿರಸ್ತೇದಾರ್.
ಪ. ರಾಮರಾವ್ — ಹೆಡ್ ರೈಟರ್.
ಜೆ. ಬಿ. ಫೆರ್ನಂದೆಜ್ — ಫೌಜ್ದಾರಿ ಟ್ರನ್ಸಲೇಟರ್ (ಭಾಷಾಂತರಕರ್ತ).
ಜ. ಸ. ಸಾಲ್ದಾಞ್ಯಾ — ನಾಜರ್.
ಉ. ಬಾಬುರಾವ್ — ಪಬ್ಲಿಕ ಪ್ರೊಶಿಕ್ಯುಟರ್ (ಸರ್ಕಾರಮುದ್ದೈ) ವ ಗವರ್ನಮೆಂಟ ವಕೀಲ್.

2. ಸಬೋರ್ಡಿನೇಟ್ ಜಡ್ಜರ ಕೋರ್ಟ್.

ಕೆ. ಕೃಷ್ಣ ಮೇನೊನ್ — ಸಬೋರ್ಡಿನೇಟ ಜಡ್ಜರು.
ಮಿಸ್ತರ್ ಕಾಮಿಲ ಕೊಯಿಲೊ — ಶಿರಸ್ತೇದಾರ್.
ತೊ. ನೊರೋಞ್ಯಾ — ಹೆಡ್ ರೈಟರ್.
ಎ. ಬಿ. ಗೊನ್ಸಾಲ್ವೆಸ್ — ನಾಜರ್.

3. ರಿಜಿಸ್ತ್ರೀ ಇಲಾಖೆ.

J. L. Fernandez Esq.
ಜೆ. ಲ. ಫೆರ್ನಂದೆಜ್ ಸಾಹೇಬರು — (ಡಿಪ್ಯುಟಿ ಕಲ್ಲೆಕ್ಟರ್) ಆಕ್ಟಿಂಗ್ ಡಿಸ್ಟ್ರಿಕ್ಟ ರಿಜಿಸ್ಟ್ರಾರ್.

ಪೊಲೀಸ್ ಇಲಾಖೆ.

Capt. J. P. Warlow
ಕಾಪ್ತೆನ್ ಜೆ. ಪಿ. ವಾರ್ಲೊ ಸಾಹೇಬರು — ಸುಪರಿಂಟೆಂಡೆಂಟ.
ಕ. ರಾಮರಾವ — ಹೆಡ ಕ್ವಾರ್ಟರ್ ಇನ್ಸಪೆಕ್ಟರ್.
ಡಿ. ರಸ್ಕಿಞ — ಸ್ಕೂಲ್ ಇನ್ಸಪೆಕ್ಟರ್.

ವೈದ್ಯ ಇಲಾಖೆ.

Surg. Major D. C. Mac'Allum, M. D.
ಡಿ. ಶಿ. ಮೆಕ್ಅಲ್ಲಮ್ ಸಾಹೇಬರು — ಶಿವಿಲ ಸರ್ಜನ್ ವ ಜೈಲ ಸುಪರಿಂಟೆಂಡೆಂಟ.

ಶಿವಿಲ್ ಆಸ್ಪತ್ರಿಯಲ್ಲಿ: ಟಿ. ಪೊನ್ನಂಬುಲಮ್	2ನೆ ದರ್ಜೆ	ವೈದ್ಯಸಹಾಯಕ.*
ಕಲ್ಲೆಕ್ಟರರ ಶಿಬಂದಿಗೆ: ಜೆ. ನಾರಾಯಣ ಸಾಮಿ ನ್ಯಾಡು	"	"
ಹೆಡ್ ಅಶಿಷ್ಟಾಂಟ ಕಲ್ಲೆಕ್ಟರಶಿಬಂದಿಗೆ: ಸ. ಸಿಮೆಯೊನ್	3ನೆ ದರ್ಜೆ	"
ಜೈಲ್ ಆಸ್ಪತ್ರಿಯಲ್ಲಿ: ರ. ಪೀಟರ್	2ನೆ "	"
ಪೊಲೀಸ್ ಆಸ್ಪತ್ರಿಯಲ್ಲಿ: ಜೆ. ಜೆಕರೀಯ	1ನೆ "	"

* Hospital Assistant.

ವೆಕ್ಸಿನೇಶನ್ (ದಾಕು ಹಾಕುವ) ಇಲಾಖೆ.

Mr. G. Williams ಮಿಸ್ತರ್ ಜಿ. ವಿಲ್ಲಿಯಮ್ಸ್—ಆ. ವೆಕ್ಸಿನೇಶನ್ ಸುಪರಿಂಟೆಂಡೆಂಟ.

ಲೋಕೆಲ್ ಫಂಡ್ ಬೋರ್ಡಿನ ಮೆಂಬರುಗಳು.

ಡಿಸ್ಟ್ರಿಕ್ಟ ಕಲ್ಲೆಕ್ಟರರು, ಪ್ರೆಸಿಡೆಂಟ.
ಹೆಡ್ ಅಸಿಸ್ಟಾಂಟ್ ಕಲ್ಲೆಕ್ಟರರು, ವೈಸ ಪ್ರೆಸಿಡೆಂಟ.
ಡಿಸ್ಟ್ರಿಕ್ಟ ಇಂಜಿನಿಯರು.
ದಕ್ಷಿಣ ಕನ್ನಡ ಖಜಾನಾ ಡಿಪ್ಯುಟಿ ಕಲ್ಲೆಕ್ಟರರು.
ಮಂಗಳೂರು ಸಿವಿಲ್ ಸರ್ಜನರು.
ಶಾಲೆಗಳ ಇನ್ಸ್‌ಪೆಕ್ಟರರು (6ನೇ ಡಿವಿಜನ್).
ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರರು.
ಮಂಗಳೂರು ತಹಶಿಲ್‌ದಾರರು.
ಸ. ಸ. ಮಸ್ಕರೆಂಞರು.
ಸುಜೀರ ಮಂಗೇಶಯ್ಯನವರು.
ಮಂಜೇಶ್ವರ ನರಸಯ್ಯ ಶಾನಭಾಗರು.
ತಾಯ್ಕಾಟ ನಾರಾಯಣ ತಿರ್ಗಂಬುಗಳು.
ಗುರುರಾಯ ಆಚಾರ್ಯರು.
ಹಿರಿಯಡ್ಕ ಕುರ್ಲಹೆಗಡೇರು.
ಎಡ್ತರೆ ದುಗ್ಗಪ್ಪ ಶೆಟ್ಟು.
ಬೈಲೂರ ನಾಗಪ್ಪ ಶಾನಭಾಗರು.
ಬೆಳ್ಳಿಪಾಡಿ ಮಾಯಿಲರೈಗಳು.
ಉಪ್ಪಿನಂಗಡಿ ಮಹಾದೇವ ಭಟ್ಟರು.

II. ತಾಲೂಕು ಉದ್ಯೋಗಸ್ಥರು.

೧. ಮಂಗಳೂರ ತಾಲೂಕು.

ರೇವನಿ ಮತ್ತು ಮೆಜಿಸ್ಟ್ರೇಟ್.

ಎ. ಬಾಲಕೃಷ್ಣಪ್ಪ—ತಹಶಿಲದಾರ್ ವ 2ನೆ ಕ್ಲಾಸ ಮೆಜಿಸ್ಟ್ರೇಟ.
ತ್ರಾ. ಗೋಪಾಲ ಕೃಷ್ಣಯ್ಯ—ಆಕ್ಟಿಂಗ್ ಶಿರಸ್ತೇದಾರ್ ವ 3ನೆ ಕ್ಲಾಸ ಮೆಜಿಸ್ಟ್ರೇಟ.
ಮಾವಿಲ ರಾಮಾ—ಮಂಗಳೂರ ಶಹರ ಡಿ. ತಹಶಿಲದಾರ್ ವ 2ನೆ ಕ್ಲಾಸ ಮೆಜಿಸ್ಟ್ರೇಟ.
ಗು. ಸುಬ್ಬರಾವ್— ಬಂಟವಾಳ್ಳ ಡಿ. ತಹಶಿಲದಾರ್ ವ 2ನೆ „ „

ಶಿವಿಲ್.

ಅ. ವೆಂಕಟರಮಣಪ್ಪೈ—ಮಂಗಳೂರು ತಾಲೂಕು ಮುನಶಿಫ (3ನೆ ದರ್ಜೆ).
ಲಾ. ರಾಮಚಂದ್ರಯ್ಯ—ಬಂಟವಾಳ „ „ „
ಜೆ. ಲೋಬೋ—ಮುಲ್ಕಿ „ „ „
ಲಾ. ರಾಮರಾವ್—ಮಂಗಳೂರು ಸಬ್ ರಜಿಸ್ತ್ರಾರ.
ಗು. ಸುಬ್ಬರಾವ್—ಬಂಟವಾಳ „

೨. ಕಾಸರಗೋಡ ತಾಲೂಕು.

ರೇವನಿ ಮತ್ತು ಮೆಜಿಸ್ಟ್ರೇಟ್.

ತೊ. ಸುಬ್ಬರಾವ್—ತಹಶಿಲದಾರ ವ 2ನೆ ಕ್ಲಾಸ ಮೆಜಿಸ್ಟ್ರೇಟ.
ಯೂಸುಫ್ ಖಾನ್—ಶಿರಸ್ತೇದಾರ 3ನೆ „ „
ಮ. ಎ. ಶಿಕೇರಾ—ನೀಲೇಶ್ವರ ಡಿಪ್ಯುಟಿ ತಹಶಿಲದಾರ ವ 2ನೆ ಕ್ಲಾಸ ಮೆಜಿಸ್ಟ್ರೇಟ.

ಶಿವಿಲ್.

ಉ. ರಾಮಪ್ಪ—ಬೇಕಲ ತಾಲೂಕು ಮುನಸಿಫ (2ನೆ ದರ್ಜೆ).
ಕ. ರಾಮರಾವ್—ಕಾಸರಗೋಡ ಸಬ್ ರಜಿಸ್ತ್ರಾರ.
ಮ. ಎ. ಶಿಕೇರಾ—ನೀಲೇಶ್ವರ „ „

ವೈದ್ಯಶಾಲೆಯಲ್ಲಿ: Mr. J. A. M. Doyle. / ಮಿಸ್ತರ್ ಜೆ. ಎ. ಮ. ಡೊಯ್ಲಿ — ತೇರ್ಗಡೆ ಪಟ್ಟ ಉಪವೈದ್ಯ.*

೩. ಉಪ್ಪಿನಂಗಡಿ ತಾಲೂಕು.

ರೇವನಿ ಮತ್ತು ಮೆಜಿಸ್ಟ್ರೇಟ್.

ಧಾ. ಅನಂತಯ್ಯ—(ಆಕ್ಟಿಂಗ್) ತಹಶಿಲದಾರ ವ 2ನೆ ಕ್ಲಾಸ ಮೆಜಿಸ್ಟ್ರೇಟ.
ಸ. ಸುಬ್ಬರಾವ್—ಶಿರಸ್ತೇದಾರ ವ 2ನೆ ಕ್ಲಾಸ ಮೆಜಿಸ್ಟ್ರೇಟ.
ಕು. ಗಣಪಯ್ಯ—ಬೆಳತಂಗಡಿ ಡಿಪ್ಯುಟಿ ತಹಶಿಲದಾರ ವ 2ನೆ ಕ್ಲಾಸ ಮೆಜಿಸ್ಟ್ರೇಟ.

ಶಿವಿಲ್.

ಉ. ಮಂಗೇಶಯ್ಯ—ಪುತ್ತೂರ ತಾಲೂಕು ಮುನಶಿಫ (2ನೆ ದರ್ಜೆ).
ಧಾ. ಅನಂತಯ್ಯ—(ಆಕ್ಟಿಂಗ್) ಉಪ್ಪಿನಂಗಡಿ ಸಬ್ ರಜಿಸ್ತ್ರಾರ.
ಉ. ಸುಬ್ಬರಾವ್—ವಿಟ್ಲ ಸಬ್ ರಜಿಸ್ತ್ರಾರ.

ವೈದ್ಯಶಾಲೆಯಲ್ಲಿ: P. V. Ramasamy Naidu / ಪಿ. ವಿ. ರಾಮಸ್ವಾಮಿ ನಾಯಿಡು — 3ನೆ ದರ್ಜೆ ವೈದ್ಯಸಹಾಯಕ.†

* Passed Hospital Apprentice. † Hospital Assistant.

೪. ಉಡಪಿ ತಾಲೂಕು.

ರೇವನಿ ಮತ್ತು ಮೆಜಿಸ್ಟ್ರೇಟ್.

ನಿ. ಬ್ರೀತ್ತೊ—ತಹಶಿಲದಾರ್ ವ 2ನೆ ಕ್ಲಾಸ ಮೆಜಿಸ್ಟ್ರೇಟ.
ಮ. ವೆಂಕಟರಾವ್—ಶಿರಸ್ತೇದಾರ್ ವ 3ನೆ ಕ್ಲಾಸ „
ಮಹಮ್ಮದ ಅಲ್ಲಿ—ಕಾರ್ಕಳ ಡಿಪ್ಯುಟಿ ತಹಶಿಲದಾರ್ ವ 2ನೆ ಕ್ಲಾಸ ಮೆಜಿಸ್ಟ್ರೇಟ.

ಶಿವಿಲ್.

ಇ. ಫೆರ್ನಾಂದೆಜ್—ಉಡಪಿ ತಾಲೂಕು ಮುನಶಿಫ್ (3ನೆ ದರ್ಜೆ).
ಸುಬ್ರಹ್ಮಣ್ಯ ಅಯ್ಯರ್—ಕಾರ್ಕಳ ತಾಲೂಕು ಮುನಶಿಫ್ (3ನೆ ದರ್ಜೆ).
ಕು. ಕೃಷ್ಣರಾವ್—ಬಾರಕೂರ ತಾಲೂಕು ಮುನಶಿಫ್ (3ನೆ ದರ್ಜೆ).
ಸು. ಗುಂಡುರಾವ್—ಉಡಪಿ ಸಬ್ ರಜಿಸ್ತ್ರಾರ್.
ಮಹಮ್ಮದಅಲ್ಲಿ—ಕಾರ್ಕಳ ಸಬ್ ರಜಿಸ್ತ್ರಾರ್.

ವೈದ್ಯಶಾಲೆಯಲ್ಲಿ: Mr. Donald Wooten / ಮಿಸ್ತರ್ ಡೊನಲ್ಡ್ ಊಟನ್ — ತೇರ್ಗಡೆ ಪಟ್ಟ ಉಪವೈದ್ಯ.*

೫. ಕುಂದಾಪುರ ತಾಲೂಕು.

ರೇವನಿ ಮತ್ತು ಮೆಜಿಸ್ಟ್ರೇಟ್.

ಯಿ. ಮ. ಕೊಯಿಲೊ—ತಹಶಿಲದಾರ್ ವ 2ನೆ ಕ್ಲಾಸ ಮೆಜಿಸ್ಟ್ರೇಟ.
ಸ. ಬಾಲಕೃಷ್ಣಪ್ಪ—ಶಿರಸ್ತೇದಾರ್ 3ನೆ „ „

ಶಿವಿಲ್.

ಕ. ಸುಬ್ಬರಾವ್—ಕುಂದಾಪುರ ಮುನಶಿಫ್ (2ನೆ ದರ್ಜೆ).
ಸಿ. ಕೊಯಿಲೊ—ಸಬ್ ರಜಿಸ್ತ್ರಾರ್.

ವೈದ್ಯಶಾಲೆಯಲ್ಲಿ: Mr. H. A. Henderson / ಮಿಸ್ತರ್ ಹ. ಅ. ಹೆಂಡರ್ಸನ್ — ತೇರ್ಗಡೆ ಪಟ್ಟ ಉಪವೈದ್ಯ.*

* Passed Hospital Apprentice.

೧೮೭೬ನೇ ವರ್ಷದ ಹಬ್ಬಗಳು.

* ಈ ಚಿನ್ಹೆಯು ಸುವಾರ್ತಾಪಕ್ಷದವರಿಗೂ ರೋಮಾಯರಿಗೂ ಕೂಡ ಇರುವ ಹಬ್ಬಗಳನ್ನೂ,
† ಈ ಚಿನ್ಹೆಯು ರೋಮಾಯರಿಗೆ ಪ್ರತ್ಯೇಕವಾಗಿ ಇರುವ ಹಬ್ಬಗಳನ್ನೂ,
§ ಈ ಚಿನ್ಹೆಯು ಸರಕಾರ ರಜಾ ಇರುವ ಹಬ್ಬಗಳನ್ನೂ ಸೂಚಿಸುತ್ತವೆ.

ಕ್ರೈಸ್ತರ ಹಬ್ಬಗಳು.

CHRISTIAN FESTIVALS.

ಜನವರಿ ೧ * ನವಸಂವತ್ಸರದ ಹಬ್ಬ (New Year's Day) §.
„ ೬ * ಪ್ರತ್ಯಕ್ಷತೆಯ ಹಬ್ಬ (Epiphany).
ಫೆಬ್ರುವರಿ ೨ † ಮರೀಯಳ ಶುದ್ಧೀಕರಣ.
ಮಾರ್ಚ ೧ † ಉಪೋಷ್ಯದ ಮೊದಲನೇ ದಿನ §.
„ ೨೫ † ಮರೀಯಳಿಗಾದ ಶುಭವಾರ್ತೆ.
ಎಪ್ರಿಲ್ ೭ † ಮರೀಯಳ ಸಪ್ತವ್ಯಥೆಗಳ ಹಬ್ಬ.
„ ೯ * ಪಾಮ್ ಸಂಡೆ ಹಬ್ಬ (Palm Sunday).
„ ೧೩ † ಮಂಡಿ ಥರ್ಸ್‌ಡೆ ಹಬ್ಬ.
„ ೧೪ * ಕ್ರಿಸ್ತನ ಮರಣದಿನ (Good Friday) §.
„ ೧೫ † ಪರಿಶುದ್ಧ ಶನಿವಾರ.
„ ೧೬ * ಪಸ್ಕಹಬ್ಬ (Easter Sunday).
„ ೧೭ † ಪಸ್ಕದ ಮೇಲಿನ ಸೋಮವಾರ.
„ ೧೮ † ಪಸ್ಕದ ಮೇಲಿನ ಮಂಗಳವಾರ.
ಮೇ ೨೫ * ದಿವಾರೋಹಣದ ಹಬ್ಬ (Ascension Day) §.
ಜೂನ್ ೪ * ಪಂಚಾಶತ್ತಿನ ಹಬ್ಬ (Pentecost).
„ ೧೧ * ತ್ರಿಯೇಕತ್ವದ ಹಬ್ಬ (Trinity).
„ ೧೫ † ಕೊರ್ಪುಸ್ ಕ್ರಿಸ್ತೀ ಹಬ್ಬ §.
„ ೨೪ † ಸ್ನಾನಿಕ ಯೋಹಾನನ ಜನ್ಮದಿನ.
„ ೨೯ † ಪೇತ್ರನ ಮತ್ತು ಪೌಲನ ದಿನ.
ಜೂಲೈ ೨ † ಮರೀಯಳ ಸಂದರ್ಶನ.
„ ೧೬ † ಕಾರ್ಮೆಲ ಬೆಟ್ಟದ ಮರೀಯಳ ದಿನ.
ಅಗೊಸ್ತು ೨ † ಪೊರ್ಟಿಯುಂಕುಲ ಹಬ್ಬ.
„ ೧೦ † ರಕ್ತಸಾಕ್ಷಿಯಾದ ಲಾರೆನ್ಸನ ದಿನ.
„ ೧೫ † ಮರೀಯಳ ಸ್ವರ್ಗಾರೋಹಣ.
ಸಪ್ತಂಬರ ೮ † ಮರೀಯಳ ಜನ್ಮದಿನ.
„ ೨೯ † ಮಿಕಾಯಲ್ಮಾಸ್ ಹಬ್ಬ.
ಒಕ್ಟೋಬರ ೪ † ಸನ್ ಫ್ರಾನ್ಸಿಸ್ ದೆ ಅಸ್ಸೀಸ್.
ನವಂಬರ ೧ † ಸಮುಸ್ತ ಪರಿಶುದ್ಧರ ದಿನ.
„ ೨ † ಸಮುಸ್ತ ಪ್ರಾಣಿಗಳ ದಿನ.
ದಶಂಬರ ೩ * ಕ್ರಿಸ್ತನ ಆಗಮ (Advent).
„ ೩ † ಸೆಂತ್ ಫ್ರಾನ್ಸಿಸ್ ಕ್ಸವೀರನ ದಿನ.
„ ೮ † ಮರೀಯಳ ಶುದ್ಧೋತ್ಪತ್ತಿ.
„ ೨೧ † ಅಪೊಸ್ತಲ ತೋಮನ ದಿನ.
„ ೨೫ * ಕ್ರಿಸ್ತನ ಜನನದ ಹಬ್ಬ (Nativity of our Lord Jesus Christ) §.
„ ೨೬ † ರಕ್ತಸಾಕ್ಷಿ ಸ್ತೆಫನನ ದಿನ.

ಮಹಮ್ಮದೀ ಹಬ್ಬಗಳು.

MAHOMMEDAN HOLIDAYS.

ಜನವರಿ ೮ ಬಕ್ರೀದ್ §.
„ ೨೯ ಮೊಹರಮ್ ಹಬ್ಬದ ಆರಂಭ §.
ಫೆಬ್ರುವರಿ ೭ ಮೊಹರಮ್ ಹಬ್ಬದ ಕಡೇ ದಿನ §.
„ ೨೭ ಸಫರ್ ತಿಂಗಳ ಆರಂಭ.
ಮಾರ್ಚ ೨೨ ಆಖರ್ ಚಾರ್ಶುಂಬ.
„ ೨೮ ರಬಿಲಾವಲ್.
ಎಪ್ರಿಲ್ ೨೬ ರಬಿಲಾಖರ್.
ಮೇ ೨೫ ಜಮಾದಿಲಾವಲ್.
ಜೂನ್ ೨೪ ಜಮಾದಿಲಾಖರ್.
ಜುಲಾಯಿ ೨೩ ರಜಬ್.
ಅಗೊಸ್ತು ೨೧ ಶಾಬಾನ್.
ಸಪ್ತಂಬರ ೩ ಶಬೀಬರಾತ್ §.
„ ೨೦ ರಮ್‌ಜಾನ್ ಹಬ್ಬ (ಉಪವಾಸ) §.

ಒಕ್ಟೋಬರ ೧೮ ರಮ್ಜಾನ್‌ಹಬ್ಬದ ಕಡೇ ದಿನ§.
" ೧೯ ಶವಾಲ್.
ನವಂಬರ ೧೮ ಜಿಲ್ಬಾಯದ್.
ದಶಂಬರ ೧೮ ಜಿಲ್‌ಹಜ್.
" ೨೭ ಬಕ್ರೀದ್ §.

ಹಿಂದು ಹಬ್ಬಗಳು.

HINDOO HOLIDAYS.

ಜನವರಿ ೧೨ ಮಕರಸಂಕ್ರಾಂತಿ (ರಾತ್ರಿ ಘಟಿ ೧೭॥.)
" ೧೩ ಮಕರಸಂಕ್ರಮಣ §.
ಫೆಬ್ರುವರಿ ೨ ರಥಸಪ್ತಮಿ §.
" ೨೩ ಶಿವರಾತ್ರಿವ್ರತ (ಮರುದಿನ ರಜೆ§).
ಮಾರ್ಚ್ ೯ ಹೋಳಿ ಹುಣ್ಣಿಮೆ.
" ೧೦ ಹೋಳಿ ಹಬ್ಬದ ಕಡೇ ದಿನ.
" ೨೬ ಚಾಂದ್ರಮಾನ ಯುಗಾದಿ §.
ಎಪ್ರಿಲ್ ೨ ರಾಮನವಮಿ §.
" ೧೨ ಸೌರಮಾನ ಯುಗಾದಿ.
" ೨೪ ಸೋಮವತೀವ್ರತ.
" ೨೭ ಅಕ್ಷತೃತೀಯ, ಪರಶುರಾಮ ಜಯಂತಿ.
ಮೇ ೬ ನರಸಿಂಹಜಯಂತಿ §.
ಜುಲಾಯಿ ೨ ಪ್ರಥಮೈಕಾದಶಿ.
" ೩ ಪ್ರಥಮದ್ವಾದಶಿ.
" ೧೪ ಕರ್ಕಾಟಕಸಂಕ್ರಮಣ (ದಕ್ಷಿಣಾಯನ §).
" ೨೫ ನಾಗರಪಂಚಮಿ§.
" ೨೮ ವರಲಕ್ಷ್ಮೀವ್ರತ §.
ಅಗೊಸ್ತು ೫ ಉಪಾಕರ್ಮ §.
" ೧೨ ಕೃಷ್ಣಾಷ್ಟಮಿ (ಮರುದಿನ ರಜೆ§).
" ೨೨ ಗೌರಿತೃತೀಯ; ವರಾಹಜಯಂತಿ§.
" ೨೩ ವಿನಾಯಕಚತುರ್ಥಿ §.
" ೨೪ ಋಷಿಪಂಚಮಿ.
" ೨೭ ಎಳೇ ಅಷ್ಟಮಿ.
ಸಪ್ತೆಂಬರ ೨ ಅನಂತಚತುರ್ದಶಿ §.
" ೩ ಚಂದ್ರಗ್ರಹಣ, ಪುಣ್ಯಕಾಲ §.
" ೪ ಮಹಾಲಯಪಕ್ಷಾರಂಭ.
" ೧೭ ಮಹಾಲಯ ಅಮಾವಾಸೆ §.
ಸಪ್ತೆಂಬರ ೧೮ ನವರಾತ್ರಿಯ ಆರಂಭ.
" ೨೫ ಮೂಲನಕ್ಷತ್ರ, ಶಾರದಾಪೂಜೆ§.
" ೨೬ ಮಹಾನವಮಿ.
" ೨೭ ವಿಜಯದಶಮಿ (ಫೌಂಜು §).
" ೨೮ ವಿದ್ಯಾದಶಮಿ.
ಒಕ್ಟೋಬರ ೧೫ ಕಾವೇರಿಸಂಕ್ರಮಣ.
" ೧೬ ನರಕಚತುರ್ದಶಿ; ದೀಪಾವಳಿ§.
" ೧೭ ಗೋಪೂಜೆ§.
" ೧೮ ಬಲಿಪಾಡ್ಯ§.
" ೨೮ ಕಾರ್ತಿಕ (ವೈಕುಂಠ) ಏಕಾದಶಿ.
" ೩೦ ಉತ್ಥಾನದ್ವಾದಶಿ, ತುಲಸೀಪೂಜೆ§.
ನವಂಬರ ೧ ಕಾರ್ತಿಕ ಪೂರ್ಣಿಮಿ, ದೀಪೋತ್ಸವ.
" ೨೨ ಸುಬ್ರಹ್ಮಣ್ಯಷಷ್ಠಿ.
" ೨೮ ಮುಕ್ಕೋಟಿದ್ವಾದಶಿ.

ಇತರ ರಜಾ ದಿನಗಳು.

OTHER HOLIDAYS.

ಮೇ ೨೪ ವಿಕ್ಟೋರಿಯ ಮಹಾರಾಣಿಯವರ ಜನ್ಮದಿನ§.
ನವಂಬರ ೯ ಮಹಾರಾಣಿಯ ಜ್ಯೇಷ್ಠಪುತ್ರ ವೇಲ್ಸಿನ ಶ್ರೀಮಂತನ ಜನ್ಮದಿನ§.

೧೮೭೬ನೇ ವರ್ಷದಲ್ಲಿ ಆರಂಭವಾಗುವ ಬೇರೆ ಬೇರೆ ಶಕಗಳು.

HINDOO AND MAHOMMEDAN ERAS.

ಜನವರಿ ೨೯ ಮಹಮ್ಮದೀ ಹಿಜರೀ ೧೨೯೩ನೇ ವರ್ಷದ ಆರಂಭವು.
ಮಾರ್ಚ್ ೨೬ ಧಾತುವೆಂಬ ಶಾಲಿವಾಹನ ಶಕ ೧೭೯೮ನೇ ಚಾಂದ್ರ ವರ್ಷದ ಆರಂಭವು.
ಜುಲಾಯಿ ೧ ಫಸಲಿ ಎಂಬ ೧೨೮೬ನೇ ವರ್ಷದ ಆರಂಭವು.
ಅಗೊಸ್ತು ೧೫ ಕೊಲ್ಲಮ್ ಎಂಬ ೧೦೫೨ನೇ ವರ್ಷದ ಆರಂಭವು.
ಒಕ್ಟೋಬರ ೧೮ ವಿಕ್ರಮಾದಿತ್ಯನ ೧೯೩೩ನೇ ವರ್ಷದ ಆರಂಭವು.

೨೮, ೨೯, ೩೦, ೩೧ ದಿವಸಗಳಿರುವ ಪ್ರತಿ ತಿಂಗಳಿಗೆ ೧ ರೂಪಾಯಿಯಿಂದ ೫೦೦ ರೂಪಾಯಿ ವರೆಗೆ ಸಂಬಳ ಇರುವವರಿಗೆ ಪ್ರತಿ ಒಂದು ದಿವಸಕ್ಕೆ ಏನು ಬೀಳುತ್ತದೆಂಬದನ್ನು ತೋರಿಸುವ ಪಟ್ಟಿ.

೩೦ಗಳಿನ ಸಂಬಳ.	೨೮ ದಿವಸಗಳ ೩೦ಗಳು.			೨೯ ದಿವಸಗಳ ೩೦ಗಳು.			೩೦ ದಿವಸಗಳ ೩೦ಗಳು.			೩೧ ದಿವಸಗಳ ೩೦ಗಳು.		
ರೂ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.
೧	೦	೦	೭	೦	೦	೭	೦	೦	೬	೦	೦	೬
೨	೦	೧	೨	೦	೧	೧	೦	೧	೧	೦	೧	೦
೩	೦	೧	೯	೦	೧	೮	೦	೧	೭	೦	೧	೭
೪	೦	೨	೩	೦	೨	೨	೦	೨	೨	೦	೨	೧
೫	೦	೨	೧೦	೦	೨	೯	೦	೨	೮	೦	೨	೭
೬	೦	೩	೫	೦	೩	೪	೦	೩	೨	೦	೩	೧
೭	೦	೪	೦	೦	೩	೧೦	೦	೩	೯	೦	೩	೭
೮	೦	೪	೭	೦	೪	೫	೦	೪	೩	೦	೪	೨
೯	೦	೫	೨	೦	೫	೦	೦	೪	೧೦	೦	೪	೮
೧೦	೦	೫	೯	೦	೫	೬	೦	೫	೪	೦	೫	೨
೧೧	೦	೬	೩	೦	೬	೧	೦	೫	೧೦	೦	೫	೮
೧೨	೦	೬	೧೦	೦	೬	೭	೦	೬	೫	೦	೬	೨
೧೩	೦	೭	೫	೦	೭	೨	೦	೬	೧೧	೦	೬	೯
೧೪	೦	೮	೦	೦	೭	೯	೦	೭	೬	೦	೭	೩
೧೫	೦	೮	೭	೦	೮	೩	೦	೮	೦	೦	೭	೯
೧೬	೦	೯	೨	೦	೮	೧೦	೦	೮	೬	೦	೮	೩
೧೭	೦	೯	೯	೦	೯	೫	೦	೯	೧	೦	೮	೯
೧೮	೦	೧೦	೩	೦	೯	೧೧	೦	೯	೭	೦	೯	೩
೧೯	೦	೧೦	೧೦	೦	೧೦	೬	೦	೧೦	೨	೦	೯	೧೦
೨೦	೦	೧೧	೫	೦	೧೧	೦	೦	೧೦	೮	೦	೧೦	೪
೨೧	೦	೧೨	೦	೦	೧೧	೭	೦	೧೧	೨	೦	೧೦	೧೦
೨೨	೦	೧೨	೭	೦	೧೨	೨	೦	೧೧	೯	೦	೧೧	೪
೨೩	೦	೧೩	೨	೦	೧೨	೮	೦	೧೨	೩	೦	೧೧	೧೦
೨೪	೦	೧೩	೯	೦	೧೩	೩	೦	೧೨	೧೦	೦	೧೨	೫
೨೫	೦	೧೪	೩	೦	೧೩	೧೦	೦	೧೩	೪	೦	೧೨	೧೧
೨೬	೦	೧೪	೧೦	೦	೧೪	೪	೦	೧೩	೧೦	೦	೧೩	೫
೨೭	೦	೧೫	೫	೦	೧೪	೧೧	೦	೧೪	೫	೦	೧೩	೧೧
೨೮	೧	೦	೦	೦	೧೫	೫	೦	೧೪	೧೧	೦	೧೪	೫
೨೯	೧	೦	೭	೧	೦	೦	೦	೧೫	೬	೦	೧೫	೦
೩೦	೧	೧	೨	೧	೦	೭	೧	೦	೦	೦	೧೫	೬
೩೧	೧	೧	೯	೧	೧	೧	೧	೦	೬	೧	೦	೦
೩೨	೧	೨	೩	೧	೧	೮	೧	೧	೧	೧	೦	೬
೩೩	೧	೨	೧೦	೧	೨	೨	೧	೧	೭	೧	೧	೦
೩೪	೧	೩	೫	೧	೨	೯	೧	೨	೨	೧	೧	೭
೩೫	೧	೪	೦	೧	೩	೪	೧	೨	೮	೧	೨	೧
೩೬	೧	೪	೭	೧	೩	೧೦	೧	೩	೨	೧	೨	೭
೩೭	೧	೫	೨	೧	೪	೫	೧	೩	೯	೧	೩	೧
೩೮	೧	೫	೯	೧	೫	೦	೧	೪	೩	೧	೩	೭
೩೯	೧	೬	೩	೧	೫	೬	೧	೪	೧೦	೧	೪	೨
೪೦	೧	೬	೧೦	೧	೬	೧	೧	೫	೪	೧	೪	೮
೪೧	೧	೭	೫	೧	೬	೭	೧	೫	೧೦	೧	೫	೨
೪೨	೧	೮	೦	೧	೭	೨	೧	೬	೫	೧	೫	೮
೪೩	೧	೮	೭	೧	೭	೯	೧	೬	೧೧	೧	೬	೨
೪೪	೧	೯	೨	೧	೮	೩	೧	೭	೬	೧	೬	೯
೪೫	೧	೯	೯	೧	೮	೧೦	೧	೮	೦	೧	೭	೩
೪೬	೧	೧೦	೩	೧	೯	೫	೧	೮	೬	೧	೭	೯
೪೭	೧	೧೦	೧೦	೧	೯	೧೧	೧	೯	೧	೧	೮	೩
೪೮	೧	೧೧	೫	೧	೧೦	೬	೧	೯	೭	೧	೮	೯
೪೯	೧	೧೨	೦	೧	೧೧	೦	೧	೧೦	೨	೧	೯	೩
೫೦	೧	೧೨	೭	೧	೧೧	೭	೧	೧೦	೮	೧	೯	೧೦
೧೦೦	೩	೯	೨	೩	೭	೨	೩	೫	೪	೩	೩	೭
೨೦೦	೭	೨	೩	೬	೧೪	೪	೬	೧೦	೮	೬	೭	೩
೩೦೦	೧೦	೧೧	೫	೧೦	೫	೬	೧೦	೦	೦	೯	೧೦	೧೦
೪೦೦	೧೪	೪	೭	೧೩	೧೨	೮	೧೩	೫	೪	೧೨	೧೪	೫
೫೦೦	೧೭	೧೩	೯	೧೭	೩	೧೦	೧೬	೧೦	೮	೧೬	೨	೧

The Canarese Almanac 1876.

ಕಂನಡ

ಪಂಚಾಂಗಪತ್ರ.

ಕ್ರಿಸ್ತಶಕ ೧೮೭೬.

ಹಿಂದು:

ಶಾಲಿವಾಹನ ಶಕ ೧೭೯೭—೧೭೯೮.
ಯುವ ಸಂವತ್ಸರದ ಅಂತ್ಯ, ಧಾತು ಸಂವತ್ಸರದ ಆದಿ.
ವಿಕ್ರಮಾದಿತ್ಯನ ಶಕ ೧೯೩೨—೧೯೩೩.
ಕೊಲ್ಲಂ ೧೦೫೧—೧೦೫೨.

ಮಹಮ್ಮದಿ:

ಹಿಜರಿ ೧೨೯೨—೧೨೯೩.
ಫಸಲಿ ೧೨೮೫—೧೨೮೬.

MANGALORE
PRINTED BY STOLZ & HIRNER, BASEL MISSION PRESS.